ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 13 ಮಂಗಳವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 27 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಟೆಸ್ಟ್ ಕ್ರಿಕೆಟ್‌ಗೆ ಕೊಹ್ಲಿ ವಿದಾಯ

ಪಂದ್ಯ	ಇನ್ನಿಂಗ್ಸ್	ರನ್	ಗರಿಷ್ಠ ಅಜೇಯ	ಶತಕ	ಅರ್ಧ ಶತಕ
123	210	9230	254	30	31



ಮುಂಬೈ: ಪ್ರಮುಖ ಬೆಳವಣಿಗೆಯಲ್ಲಿ ಭಾರತ ಕ್ರಿಕೆಟ್ ತಂಡದ ರನ್ ಮೆಷಿನ್ ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕರೂ ಆದ ವಿರಾಟ್ ಕೊಹ್ಲಿ ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್‌ನ್ನು ಹಂಚಿಕೊಂಡಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ನಾನು ಮೊದಲು ಬ್ಯಾಗಿ ಬ್ಲೂ ಧರಿಸಿ 14 ವರ್ಷಗಳಾಗಿವೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಈ ಸ್ವರೂಪವು ನನ್ನನ್ನು ಕರೆದೊಯ್ಯುವ ಪ್ರಯಾಣವನ್ನು ನಾನು ಎಂದಿಗೂ ಊಹಿಸಿರಲಿಲ್ಲ. ಅದು ನನ್ನನ್ನು ಪರೀಕ್ಷಿಸಿದೆ, ನನ್ನನ್ನು ರೂಪಿಸಿದೆ ಮತ್ತು ನಾನು ಜೀವನಪರ್ಯಂತ ಸಾಗಿಸುವ ಪಾಠಗಳನ್ನು ಕಲಿಸಿದೆ. ವೈಟ್ ಜೆರ್ಸಿಯಲ್ಲಿ ಆಡುವುದರಲ್ಲಿ ಆಳವಾದ ವೈಯಕ್ತಿಕ ಅಂಶವಿದೆ.

ಮೇ 17ರಿಂದ ಐಪಿಎಲ್ ಪುನರಾರಂಭ ಪುಟ–5

ಶಾಂತವಾದ ಜಂಜಾಟ, ದೀರ್ಘ ದಿನಗಳು, ಯಾರೂ ನೋಡದ ಸಣ್ಣ ಕ್ಷಣಗಳು ನಿಮ್ಮೊಂದಿಗೆ ಶಾಶ್ವತವಾಗಿ ಉಳಿಯುತ್ತವೆ ಎಂದಿದ್ದಾರೆ.

ಅಂತೆಯೇ ನಾನು ಈ ಸ್ವರೂಪದಿಂದ ದೂರ ಸರಿಯುವ ನಿರ್ಧಾರ ಕೈಗೊಂಡಿದ್ದು, ಅದು ಸುಲಭವಾಗಿರಲಿಲ್ಲ. ಆದರೆ ಅದು ಸರಿ ಎಂದು ಅನಿಸುತ್ತದೆ. ನಾನು ಅದಕ್ಕೆ ನನ್ನಲ್ಲಿದ್ದ ಎಲ್ಲವನ್ನೂ ನೀಡಿದ್ದೇನೆ ಮತ್ತು ನಾನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನದನ್ನು ಅದು ನನಗೆ ಹಿಂತಿರುಗಿಸಿದೆ.

ಈ ಆಟಕ್ಕಾಗಿ, ನಾನು ಮೈದಾನವನ್ನು ಹಂಚಿಕೊಂಡ ಜನರಿಗಾಗಿ ಮತ್ತು ದಾರಿಯುದ್ದಕ್ಕೂ ನನ್ನನ್ನು ನೋಡುವಂತೆ ಮಾಡಿದ ಪ್ರತಿಯೊಬ್ಬ ವ್ಯಕ್ತಿಗಾಗಿ ನಾನು ಕೃತಜ್ಞತೆಯಿಂದ, ತುಂಬಿದ ಹೃದಯದಿಂದ ಹೊರಡುತ್ತಿದ್ದೇನೆ. ಯಾವಾಗಲೂ ನನ್ನ ಟೆಸ್ಟ್ ವೃತ್ತಿಜೀವನವನ್ನು ನಗುವಿನೊಂದಿಗೆ ಹಿಂತಿರುಗಿ ನೋಡಲು ಬಯಸುತ್ತೇನೆ ಎಂದು ಕೊಹ್ಲಿ ಪೋಸ್ಟ್ ಮಾಡಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಸರಣಿಗೂ ಮುನ್ನ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಲು ಬಯಸಿರುವುದಾಗಿ ಅವರು ಇತ್ತೀಚೆಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಮಾಹಿತಿ ನೀಡಿದ್ದರು. ಆದರೆ, ತಮ್ಮ ನಿರ್ಧಾರವನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಅವರಿಗೆ ಅಧಿಕಾರಿಗಳು ಸಲಹೆ ನೀಡಿದ್ದಾರೆ. ಆದರೆ ಕೊಹ್ಲಿ ತಮ್ಮ ನಿರ್ಧಾರದಿಂದ ಹಿಂದೆ ಸರಿದಿಲ್ಲ. ಅಂದಹಾಗೆ 2011ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ■ 6ನೇ ಪುಟಕ್ಕೆ

‘ಆಪರೇಷನ್ ಸಿಂಧೂರ’ ಮುಗಿದಿಲ್ಲ ನೀವು ಉಳಿಯಬೇಕಾದರೆ ಉಗ್ರವಾದ ನಿಲ್ಲಿಸಲೇಬೇಕು

ಪಾಕಿಸ್ತಾನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇರ ಎಚ್ಚರಿಕೆ

- ■ ತನ್ನಲ್ಲಿರುವ ಉಗ್ರಸ್ಥಾನಗಳ ಶುದ್ಧ ಮಾಡುವವರೆಗೆ ಪಾಕ್‌ನೊಂದಿಗೆ ಮಾತುಕತೆ, ರಾಜೀ ಇಲ್ಲವೇ ಇಲ್ಲ
- ■ ಕಾರ್ಯಾಚರಣೆ ಯಶಸ್ಸು ದೇಶದ ಸ್ತ್ರೀಯರಿಗೆ ಸಮರ್ಪಣೆ; ಪರಮಾಣು ಬೆದರಿಕೆಗೆ ನಾವು ಬಗ್ಗಲ್ಲ
- ■ ‘ಆಪರೇಷನ್ ಸಿಂಧೂರ’ ಬರೀ ಹೆಸರಲ್ಲ ಭಾರತೀಯತೆ ಪ್ರತೀಕ
- ■ ಭಾರತದ ಶಾಲಾ–ಕಾಲೇಜು, ಗುರುದ್ವಾರ, ಮಂದಿರಗಳ ಗುರಿ ಮಾಡಲಾಗಿತ್ತು
- ■ ಉಗ್ರರ ಸಮಾಧಿಗೆ ನಮ್ಮ ಸೇನೆಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ

ನವದೆಹಲಿ: ‘ಆಪರೇಷನ್ ಸಿಂಧೂರ’ ಮುಗಿದಿಲ್ಲ, ಸದ್ಯಕ್ಕೆ ನಿಲ್ಲಿಸಲಾಗಿದೆ. ನೀವು ಉಳಿಯಬೇಕಾದರೆ ಉಗ್ರವಾದವನ್ನು ನಿಲ್ಲಿಸಲೇಬೇಕು ಎಂದು ಪ್ರಧಾನಿ ನರೇಂದ್ರ ಮೋದಿ, ಪಾಕಿಸ್ತಾನಕ್ಕೆ ನೇರ ಎಚ್ಚರಿಕೆ ನೀಡಿದ್ದಾರೆ.

ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರವಾಗಿ ಭಾರತ ನಡೆಸಿದ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ನಂತರ ಮೊದಲ ಬಾರಿಗೆ ಇಂದು ರಾತ್ರಿ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಎಲ್ಲಾ ಭಾರತೀಯರ ಪರವಾಗಿ ಸೈನಿಕರು ಹಾಗೂ ವಿಜ್ಞಾನಿಗಳಿಗೆ ಧನ್ಯವಾದ ಸಲ್ಲಿಸುವುದರ ಜೊತೆಗೆ ಈ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಯಶಸ್ಸನ್ನು ದೇಶದ ಸ್ತ್ರೀಯರಿಗೆ ಸಮರ್ಪಿಸಿದರು.

ನೀರು ಮತ್ತು ರಕ್ತ ಒಟ್ಟಿಗೆ ಹರಿಯಲು ಸಾಧ್ಯವಿಲ್ಲ. ಭಯೋತ್ಪಾದನೆ ಜೊತೆಗೆ ಶಾಂತಿ ಮಾತುಕತೆ ಸಾಧ್ಯವೇ ಇಲ್ಲ. ಪಾಕಿಸ್ತಾನ ತನ್ನಲ್ಲಿರುವ ಉಗ್ರ ಸ್ಥಾನಗಳನ್ನು ಶುದ್ಧ ಮಾಡುವವರೆಗೂ ಶಾಂತಿ ಮಾತುಕತೆ,



ನರೇಂದ್ರ ಮೋದಿ, ಪ್ರಧಾನ ಮಂತ್ರಿ

ರಾಜೀ ಅಸಾಧ್ಯ, ಉಗ್ರವಾದ ದಮನ ಹಾಗೂ ಪಿಓಕೆ ವಿಚಾರವಾಗಿ ಮಾತ್ರ ಮಾತುಕತೆ ಎಂದು ಹೇಳುವ ಮೂಲಕ ಕುತಂತ್ರ ಬುದ್ಧಿಯ ಪಾಕಿಸ್ತಾನಕ್ಕೆ ಖಡಕ್ ಎಚ್ಚರಿಕೆ ನೀಡಿದ್ದಾರೆ. ■ 6ನೇ ಪುಟಕ್ಕೆ

ರಕ್ತ–ನೀರು ಒಟ್ಟಿಗೆ ಹರಿಯುವುದಿಲ್ಲ; ವ್ಯಾಪಾರ–ಉಗ್ರವಾದ ಜೊತೆ ನಡೆಯಲ್ಲ!

ಭಾರತೀಯ ಸೇನೆಯ ಪ್ರಬಲ ದಾಳಿಯಿಂದ ವಿಚಲಿತಗೊಂಡಿರುವ ಪಾಕಿಸ್ತಾನ, ಕದನ ವಿರಾಮಕ್ಕೆ ಅಂಗಲಾಚಿದ್ದರಿಂದ ಸದ್ಯ ಸಂಘರ್ಷ ನಿಂತಿದೆ. ಶಸ್ತ್ರ ಬಲದ ಜೊತೆಗೆ ರಾಜತಾಂತ್ರಿಕ ಕಠಿಣ ನಿರ್ಧಾರಗಳಿಂದ ಆರ್ಥಿಕ ವ್ಯವಸ್ಥೆಗೂ ಭಾರಿ ಹೊಡೆತ ಬಿದ್ದಿರುವುದರಿಂದ ಭಾರತದ ಜೊತೆ ಮಾತುಕತೆಗೆ ಪಾಕಿಸ್ತಾನ ಉತ್ಸುಕವಾಗಿದೆ. ಆದರೆ ಭಯೋತ್ಪಾದನೆ ನಿರ್ನಾಮ ಹಾಗೂ ಪಾಕ್ ಆಕ್ರಮಿತ ಕಾಶ್ಮೀರ(ಪಿಓಕೆ) ವಿಚಾರದಲ್ಲಿ ಮಾತ್ರ ಮಾತುಕತೆ ಎಂದು ಕಡ್ಡಿ ತುಂಡಾದಂತೆ ಮೋದಿ ಹೇಳಿದ್ದಾರೆ. ಉಗ್ರವಾದ ಪಾಕಿಸ್ತಾನವನ್ನು ಮುಳುಗಿಸುತ್ತಿದೆ. ಪಾಕಿಸ್ತಾನ ಉಳಿಯಬೇಕೆಂದರೆ ಉಗ್ರ ಸ್ಥಾನಗಳನ್ನು ಶುದ್ಧ ಮಾಡಲೇಬೇಕು. ಅಲ್ಲಿವರೆಗೂ ಶಾಂತಿಯ ಯಾವುದೇ ದಾರಿಗಳಿಲ್ಲ. ನೀರು ಮತ್ತು ರಕ್ತ ಒಟ್ಟಿಗೆ ಹರಿಯುವುದಿಲ್ಲ. ವ್ಯಾಪಾರ ಮತ್ತು ಉಗ್ರವಾದ ಜೊತೆಯಾಗಿ ನಡೆಯುವುದಿಲ್ಲ. ಶಾಂತಿಮಾರ್ಗ ಶಕ್ತಿಯೊಂದಿಗೆ ಭಾರತ ಸಾಗುತ್ತಿದೆ. ಆದರೆ ಉಗ್ರರ ದುಸ್ಸಾಹಸವನ್ನು ಎಂದೂ ಸಹಿಸುವುದಿಲ್ಲ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ಪಾಕ್ ಭವಿಷ್ಯ ಅದರ ವರ್ತನೆ ಮೇಲಿದೆ

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಬಳಿಕ ಭಾರತ ನೀಡಿದ ಎಚ್ಚರಿಕೆಗೆ ಬೆಚ್ಚಿಬಿದ್ದಿದ್ದ ಪಾಕಿಸ್ತಾನ, ಪರಮಾಣು ಅಸ್ತ್ರ ಬಳಸುವ ಬ್ಲ್ಯಾಕ್‌ಮೇಲ್ ಮಾಡಿತ್ತು. ಅಲ್ಲಿನ ಸಚಿವರು, ಕೆಲ ಸಂಸದರು ಭಾರತದ ವಿರುದ್ಧ ಪರಮಾಣು ಬಳಸುವ ಮಾತುಗಳನ್ನಾಡಿದ್ದರು. ಆದರೆ ಭಾರತೀಯ ಸೇನೆ ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ದಾಳಿಗೆ ತಕ್ಕ ಪ್ರತಿದಾಳಿ ನಡೆಸಿತ್ತು. ಇದನ್ನೇ ಮೋದಿಯವರೂ ಪ್ರಸ್ತಾಪಿಸಿ, ಭಾರತ ಯಾವುದೇ ಪರಮಾಣು ಬೆದರಿಕೆ ಸಹಿಸುವುದಿಲ್ಲ. ಪಾಕಿಸ್ತಾನ ಉಗ್ರರಿಗೆ ಆಶ್ರಯ ನೀಡಿದೆ. ಉಗ್ರರ ದಾಳಿಗೆ ಭಾರತ ತಕ್ಕ ಉತ್ತರ ನೀಡಿದೆ. ರಣರಂಗದಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಎಂದೂ ಸೋತಿಲ್ಲ. ಉಗ್ರವಾದ ಪುನರಾವರ್ತನೆ ಆದರೆ ನಮ್ಮ ರೀತಿಯಲ್ಲೇ ಉತ್ತರಿಸುತ್ತೇವೆ. ಇದು ಯುದ್ಧದ ಯುಗವಲ್ಲ. ಹಾಗೆಯೇ ಉಗ್ರರ ಯುಗವೂ ಅಲ್ಲ. ಪಾಕ್ ಭವಿಷ್ಯ ಅದರ ವರ್ತನೆ ಮೇಲಿದೆ ಎಂದರು.

ಕಂಡ ಕಂಡವರಿಗೆ ಮುಡಾ ನಿವೇಶನ ಹಂಚಿಕೆ; ಭೂಮಿ ಗೋಲ್‌ಮಾಲ್ ಹಿಂದಿನ ರಹಸ್ಯ ಕೆದಕುತ್ತಿರುವ ಇಡಿ!

ದೇವನೂರು ಸ.ನಂ. 81/2ರ 2.22 ಎಕರೆ ಭೂಮಿಗೆ ಪರಿಹಾರ; ಹೆಬ್ಬಾಳು ಸ.ನಂ. 88/2, ಬಸವನಹಳ್ಳಿ ಭೂಮಿ ಭೂಸ್ವಾಧೀನದ ಬಗ್ಗೆಯೂ ವಿವರಣೆ ನೀಡುವಂತೆ ಮುಡಾ ಆಯುಕ್ತರಿಗೆ ಇಡಿ ಪತ್ರ





ಮೈಸೂರು, ಮೇ 12(ಆರ್‌ಕೆ)– ದೇವನೂರು ವಸತಿ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಎಂ.ಬಿ. ಪಾರ್ವತಿ ಅವರ ಭೂಮಿಗೆ ಪರಿಹಾರವಾಗಿ ಶೇ. 50:50ರ ಅನುಪಾತದಡಿ ಅಭಿವೃದ್ಧಿಗೊಂಡಿರುವ ಬಡಾವಣೆಗಳಲ್ಲಿ ಅನಧಿಕೃತವಾಗಿ ಕೋಟ್ಯಾಂತರ ರೂ. ಬೆಲೆ ಬಾಳುವ ನಿವೇಶನಗಳನ್ನು ಮಂಜೂರು ಮಾಡಿರುವ ಮುಡಾ ಅಧಿಕಾರಿಗಳ ವಿರುದ್ಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಹೆಚ್ಚುವರಿ ಮಾಹಿತಿ ನೀಡುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳಿಗೆ ಸೂಚಿಸಿದೆ.

ಈ ಸಂಬಂಧ ಮೇ 9ರಂದು ಮುಡಾ ಆಯುಕ್ತರಿಗೆ ಪತ್ರ ಬರೆದಿರುವ ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ವಿ.ಮುರಳಿ ಕಣ್ಣನ್, ದೇವನೂರು ಗ್ರಾಮದ ಸರ್ವೆ ನಂಬರ್ 81/2ರಲ್ಲಿ 2 ಎಕರೆ 22 ಗುಂಟೆ ಭೂಮಿ ಸ್ವಾಧೀನ ಪಡಿಸಿಕೊಂಡಿರುವ ಸಂಬಂಧ ಭೂಮಾಲೀಕರಿಗೆ ನೀಡಿರುವ ಪರಿಹಾರದ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದ್ದಾರೆ.

ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವ ಪ್ರತಿ, ಆ ಭೂಮಿಯ ಮಾಲೀಕರು ಯಾರು, ಈ ಪ್ರಕರಣದಲ್ಲಿ ಹಂಚಿಕೆ ಮಾಡಲಾದ ಕಡತ ಸಲ್ಲಿಸುವಂತೆ ಇಡಿ ತಿಳಿಸಿದೆ. ಅದೇ ರೀತಿ ಬಸವನಹಳ್ಳಿ ಸರ್ವೆ ನಂಬರ್ 116/2ರ 4 ಎಕರೆ ಭೂಮಿಗೆ ನೀಡಿರುವ ಪರಿಹಾರದ ಹಣ, ಹೈಕೋರ್ಟ್ ರಿಟ್ ಪಿಟಿಷನ್ ತೀರ್ಪಿನ ಬಗ್ಗೆ ಮುಡಾ ಮನವಿ ಮಾಡಿದೆಯೇ, ನ್ಯಾಯಾಲಯದಿಂದ ಭೂಸ್ವಾಧೀನ ಅಧಿಸೂಚನೆ ವಜಾ ಮಾಡಿದ ನಂತರ ಈ ಭೂಮಿಗೆ ಮತ್ತೆ ಅಧಿಸೂಚನೆ ಹೊರಡಿಸಲಾಗಿದೆಯೇ? ಮುಡಾ ಸದರಿ ಜಾಗವನ್ನು 26 ವರ್ಷ ಕಳೆದರೂ ಸ್ವಾಧೀನ ಪಡಿಸಿಕೊಂಡಿಲ್ಲವಾದರೂ, 4 ಎಕರೆ ಭೂಮಿಗೆ ಪರಿಹಾರ ನೀಡಲಾಗಿದೆ. 2023ರಲ್ಲಿ ಮತ್ತೆ ಸದರಿ ಭೂಮಿ ಸ್ವಾಧೀನ ಪಡಿಸಿಕೊಂಡಿರುವುದಕ್ಕೆ ■ 6ನೇ ಪುಟಕ್ಕೆ

ಜಮ್ಮು–ಕಾಶ್ಮೀರದಲ್ಲಿ ಪಾಕ್‌ನಿಂದ ಮತ್ತೆ ಡ್ರೋನ್ ದಾಳಿ!

ಶ್ರೀನಗರ: ದೇಶವನ್ನುದ್ದೇಶಿಸಿ ಮೋದಿ ಆಪರೇಷನ್ ಸಿಂಧೂರದ ಬಗ್ಗೆ ಮಾತನಾಡುತ್ತಾ, ಪಾಕ್‌ಗೆ ಎಚ್ಚರಿಕೆ ನೀಡಿದ ಬೆನ್ನಲ್ಲೇ ಪಾಕಿಸ್ತಾನ ಜಮ್ಮು–ಕಾಶ್ಮೀರದ ಸಾಂಬಾದಲ್ಲಿ ಡ್ರೋನ್ ದಾಳಿ ಮುಂದುವರೆಸಿದೆ ಎಂಬ ಮಾಹಿತಿ ಲಭ್ಯವಾಗಿದೆ.



ಸಾಂಬಾದಲ್ಲಿ ಕತ್ತಲೆಯಾದಾಗ ಭಾರತದ ವಾಯು ರಕ್ಷಣಾ ಪಡೆಗಳು ಪಾಕಿಸ್ತಾನಿ ಡ್ರೋನ್‌ಗಳನ್ನು ತಡೆಹಿಡಿಯುತ್ತಿದ್ದಂತೆ ಕೆಂಪು ಗೆರೆಗಳು ಮತ್ತು ಸ್ಫೋಟಗಳು ಕೇಳಿಬಂದವು ಎಂದು ಎಎನ್‌ಐ ಸೇರಿದಂತೆ ಹಲವು ರಾಷ್ಟ್ರೀಯ ಮಾಧ್ಯಮಗಳು ವರದಿ ಪ್ರಕಟಿಸಿವೆ.

ಭಾರತ–ಪಾಕ್ ಡಿಜಿಎಂಓಗಳು ಹಾಟ್‌ಲೈನ್ ಮಾತುಕತೆ


ಸೇನಾ ಕಾರ್ಯಾಚರಣೆ, ಗಡಿಯಲ್ಲಿ ಸೇನಾ ನಿಯೋಜನೆ ಕಡಿತ ಸಂಬಂಧ ಚರ್ಚೆ

ನವದೆಹಲಿ, ಮೇ 12– ಭಾರತ–ಪಾಕಿಸ್ತಾನದ ನಡುವೆ ಕದನ ವಿರಾಮ ಘೋಷಣೆಯಾದ ಎರಡು ದಿನಗಳ ನಂತರ ಉಭಯ ರಾಷ್ಟ್ರಗಳ ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕರು(ಡಿಜಿಎಂಓ) ಸೋಮವಾರ ಹಾಟ್‌ಲೈನ್ ಮೂಲಕ ಮಾತುಕತೆ ನಡೆಸಿದರು.

ಡಿಜಿಎಂಓಗಳಾದ ಭಾರತದ ಲೆಫ್ಟಿನೆಂಟ್ ಜನರಲ್ ರಾಜೀವ್ ಗಾಯ್ ಹಾಗೂ ಪಾಕಿಸ್ತಾನದ ಮೇಜರ್ ಜನರಲ್ ಕಾಸಿಫ್ ಅಬ್ದುಲ್ಲಾ, ಗಡಿಯಾಚೆಗಿನ ಉದ್ವಿಗ್ನತೆ ಶಮನಕ್ಕೆ ಕದನ ವಿರಾಮಕ್ಕೆ ಒಪ್ಪಿರುವ ಸಂಬಂಧ ಹಲವು ಪ್ರಮುಖ ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಸೇನಾ ಕಾರ್ಯಾಚರಣೆ ಸ್ಥಗಿತ ಹಾಗೂ ಗಡಿ ನಿಯಂತ್ರಣ ರೇಖೆಯಲ್ಲಿ ಸೇನೆ ನಿಯೋಜನೆ ಕಡಿತಗೊಳಿಸುವ ಬಗ್ಗೆಯೂ ಚರ್ಚೆ



ರಾಜೀವ್ ಗಾಯ್



ಕಾಸಿಫ್ ಅಬ್ದುಲ್ಲಾ

ನಡೆಸಲಾಗಿದೆ ಎಂದು ತಿಳಿದುಬಂದಿದೆ. ಆದರೆ ಮಾತುಕತೆಯ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ.

ಉಭಯ ದೇಶಗಳ ಡಿಜಿಎಂಓಗಳ ಸಭೆ ಸೋಮವಾರ ಮಧ್ಯಾಹ್ನ 12ಕ್ಕೆ ನಿಗದಿಯಾಗಿತ್ತು. ಆದರೆ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿ ಸಂಜೆ 5 ಗಂಟೆಗೆ ಸಭೆ ಆರಂಭವಾಯಿತು. ಪಹಲ್ಗಾಮ್‌ನಲ್ಲಿ ಉಗ್ರರು ಏ.22ರಂದು ಗುಂಡಿನ ದಾಳಿ ನಡೆಸಿದ್ದರು. ಅದಕ್ಕೆ ಪ್ರತಿಯಾಗಿ ಭಾರತೀಯ ಸೇನೆಯು ಉಗ್ರರ ನೆಲೆಗಳನ್ನು ಗುರಿಯಾಗಿಸಿ ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರ ಪ್ರದೇಶಗಳಲ್ಲಿ ಮೇ 7ರಂದು ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ನಡೆಸಿತ್ತು. ಇದರ ಬೆನ್ನಲ್ಲೇ ಪಾಕಿಸ್ತಾನ ಪಡೆಗಳು ಭಾರತದ ನಾಗರಿಕರು ಮತ್ತು ಸೇನಾ ನೆಲೆಗಳನ್ನು ಗುರಿಯಾಗಿಸಿ ಗಡಿಯುದ್ದಕ್ಕೂ ನಡೆಸಿದ್ದ ದಾಳಿಗಳನ್ನು ಭಾರತೀಯ ಸೇನೆ ಸಮರ್ಥವಾಗಿ ಎದುರಿಸಿತ್ತು. ಸಂಘರ್ಷ ತೀವ್ರಗೊಂಡ ಬೆನ್ನಲ್ಲೇ ಮೇ 10ರಂದು ಉಭಯ ದೇಶಗಳು ಕದನ ವಿರಾಮ ತೀರ್ಮಾನಕ್ಕೆ ಬಂದಿದ್ದವು.

ಹಸಿವು ಮುಕ್ತ ಸಮಾಜಕ್ಕೆ ಅನ್ನಭಾಗ್ಯ; ಆರ್ಥಿಕ ಸಮಾನತೆಯಡಿ ಅಭಿವೃದ್ಧಿಗೆ ಗ್ಯಾರಂಟಿ ಜಾರಿ

- ● ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ
- ● ಹೆಚ್.ಡಿ.ಕೋಟೆಯಲ್ಲಿ ನಾನಾ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ
- ● ಡಾ.ಅಂಬೇಡ್ಕರ್, ಬುದ್ಧ ಜಯಂತಿ ಅಂಗವಾಗಿ ಗೌರವ ಸಲ್ಲಿಕೆ



ಹೆಚ್.ಡಿ.ಕೋಟೆ ಪಟ್ಟಣದ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿದರು.

ಹೆಚ್.ಡಿ.ಕೋಟೆ, ಮೇ 12– ಯಾರು ಕೂಡ ಹಸಿವಿನಿಂದ ಇರಬಾರದೆಂದು ಅನ್ನಭಾಗ್ಯ ಯೋಜನೆ ಜಾರಿಗೆ ತರಲಾಯಿತು. ಆರ್ಥಿಕ ಸಮಾನತೆ ತಂದರೆ ಮಾತ್ರ ಅಭಿವೃದ್ಧಿ ಕಾಣಲು ಸಾಧ್ಯ ಎಂದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಪದವಿಪೂರ್ವ ಕಾಲೇಜು ಮೈದಾನದಲ್ಲಿ ನಡೆದ ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ, ಪುತ್ಥಳಿ ಅನಾವರಣ, 2569ನೇ ಬುದ್ಧ ಪೂರ್ಣಿಮೆ, ಭಗವಾನ್ ಬುದ್ಧ ಜಯಂತಿ ಮಹೋತ್ಸವ ಹಾಗೂ ■ 6ನೇ ಪುಟಕ್ಕೆ

“ನಾವು ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಆರ್ಥಿಕವಾಗಿ ಸಬಲವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಕಳೆದ ವರ್ಷ 52 ಸಾವಿರ ಕೋಟಿ ಹಾಗೂ 1 ಲಕ್ಷದ 34 ಸಾವಿರ ಕೋಟಿಯನ್ನು ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ. ಹಸಿವು ಮುಕ್ತ ಮಾಡಲು ಅನ್ನಭಾಗ್ಯ ಯೋಜನೆ, ರಾಜ್ಯದ 1.2 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯಡಿ ಮಾಸಿಕ 2000, ಗೃಹ ಜ್ಯೋತಿ ಯೋಜನೆಯಡಿ 200 ಯುನಿಟ್‌ವರೆಗೆ ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಯುವನಿಧಿ ಯೋಜನೆಯಡಿ ಪದವಿ ಪಡೆದ ನಿರುದ್ಯೋಗಿಗಳಿಗೆ 3000 ಹಾಗೂ ಡಿಪ್ಲೊಮಾ ಪಡೆದ ನಿರುದ್ಯೋಗಿಗಳಿಗೆ 1500 ರೂ. ನಿರುದ್ಯೋಗ ಭತ್ಯೆ ನೀಡಲಾಗುತ್ತಿದೆ. –ಸಿದ್ದರಾಮಯ್ಯ, ಮುಖ್ಯಮಂತ್ರಿ

ಪಾಕಿಸ್ತಾನವನ್ನು ಬಗ್ಗು ಬಡಿದ ಸಂಪೂರ್ಣ ಯಶಸ್ಸು ಭಾರತೀಯ ಸೈನಿಕರಿಗೆ ಸಲ್ಲಬೇಕು

- ●ರಾಜಕೀಯ ಪಕ್ಷಗಳು ಇದರ ಲಾಭ ಪಡೆಯಬಾರದು
- ●ಬಿಜೆಪಿಗೆ ಪರೋಕ್ಷ ಟಾಂಗ್ ನೀಡಿದ ಸಿಎಂ ಸಿದ್ದರಾಮಯ್ಯ

ಮೈಸೂರು, ಮೇ12(ಬಿಎಲ್‌ಯು)– ಪಾಕಿಸ್ತಾನವನ್ನು ಬಗ್ಗು ಬಡಿದ ಭಾರತದ ಸೈನಿಕರ ಪರಾಕ್ರಮವನ್ನು ನಾವು ಮೆಚ್ಚಬೇಕು. ಇದರ ಸಂಪೂರ್ಣ ಯಶಸ್ಸು ನಮ್ಮ ಸೈನಿಕರಿಗೆ ಸಲ್ಲಬೇಕೆ ಹೊರತು ಯಾವ ಪಕ್ಷವು ಇದರ ರಾಜಕೀಯ ಲಾಭ ಪಡೆದುಕೊಳ್ಳಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪರೋಕ್ಷವಾಗಿ ಬಿಜೆಪಿಗೆ ಟಾಂಗ್ ನೀಡಿದ್ದಾರೆ.

ಮೈಸೂರಿನ ಹೆಚ್.ಡಿ.ಕೋಟೆಯ ಹೆಲಿಪ್ಯಾಡ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಯಾಗಿದೆ. ಇಂದು ಎರಡು ದೇಶಗಳ ಡಿಜಿಎಂಒಗಳ ಸಭೆ ನಡೆಯಲಿದ್ದು, ಅದರ ಸಾರಾಂಶ ಏನಿರುತ್ತೆ ಎಂದು ನೋಡೋಣ ಎಂದರು.

ಭಾರತ ಮತ್ತು ಪಾಕಿಸ್ತಾನದ ನಡುವೆ 1971 ರಲ್ಲಿ ನಡೆದ ಯುದ್ಧದ ಬಗ್ಗೆ ನಾನು ಈಗ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಅಂದಿನ ಪರಿಸ್ಥಿತಿ ಬೇರೆ ಇತ್ತು, ಇಂದಿನ ಪರಿಸ್ಥಿತಿ ಬೇರೆಯೇ ಇದೆ. ಇದರಿಂದ ಅಂದಿನ ಸ್ಥಿತಿ ಬಗ್ಗೆ ■ 6ನೇ ಪುಟಕ್ಕೆ

ಕದನ ವಿರಾಮ ಘೋಷಣೆಗೂ ಮುನ್ನ ಸರ್ವಪಕ್ಷ ಸಭೆ ಕರೆಯಬೇಕಿತ್ತು

ಪಾಕಿಸ್ತಾನದ ಜೊತೆ ಕದನ ವಿರಾಮ ಘೋಷಣೆ ಮಾಡುವ ಮುನ್ನ ಸರ್ವಪಕ್ಷ ಸಭೆ ಮತ್ತು ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಕದನ ವಿರಾಮ ಘೋಷಣೆ ಗಂಭೀರ ವಿಚಾರವಾದ ಕಾರಣ ಸರ್ವಪಕ್ಷ ಸಭೆ ಮತ್ತು ಸಂಸತ್ ವಿಶೇಷ ಅಧಿವೇಶನದಲ್ಲಿ ಚರ್ಚೆ ನಡೆಸಿದ ನಂತರ ಕೇಂದ್ರ ಸರ್ಕಾರ ಕದನ ವಿರಾಮ ಘೋಷಣೆ ಬಗ್ಗೆ ತನ್ನ ನಿಲುವು ಘೋಷಣೆ ಮಾಡಬೇಕಿತ್ತು. ಕರ್ನಾಟಕದಲ್ಲಿರುವ ಎಲ್ಲಾ ಪಾಕಿಸ್ತಾನದ ಪ್ರಜೆಗಳನ್ನು ಅವರ ದೇಶಕ್ಕೆ ಕಳುಹಿಸಲಾಗಿದೆ. ಆದರೆ ಮೈಸೂರಿನಲ್ಲಿರುವ 6 ವರ್ಷದೊಳಗಿನ ಮೂವರು ಮಕ್ಕಳನ್ನು ಪಾಕಿಸ್ತಾನಕ್ಕೆ ಕಳುಹಿಸಲು ರಾಜತಾಂತ್ರಿಕ ಸಮಸ್ಯೆ ಎದುರಾಗಿದೆ. ಮೂವರು ಮಕ್ಕಳು ಪಾಕಿಸ್ತಾನಕ್ಕೆ ಸೇರಿವೆ. ಆದರೆ ತಾಯಿ ಭಾರತಕ್ಕೆ ಸೇರಿದವರಾಗಿದ್ದಾರೆ. ಪಾಕಿಸ್ತಾನಕ್ಕೆ ಮೂವರು ಮಕ್ಕಳನ್ನು ಕಳುಹಿಸಲು ವಾಘಾ ಗಡಿಗೆ ಹೋಗಿದ್ದರು. ಆದರೆ ಆ ಮಕ್ಕಳನ್ನು ಕರೆದುಕೊಂಡು ಹೋಗಲು ಅಲ್ಲಿನವರು ಯಾರೂ ಬರಲಿಲ್ಲವಾದ ಕಾರಣ ಮತ್ತೆ ಮೈಸೂರಿಗೆ ಬಂದಿದ್ದಾರೆ ಎಂದು ತಿಳಿಸಿದರು.

ನಮೀಬಿಯಾದಲ್ಲಿ ಸರ್ಕಾರಿ ಉಪಕರಣಾಗಾರ ಕೇಂದ್ರ ಸ್ಥಾಪನೆ

ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಸಚಿವ ಡಾ.ಶರಣ್‌ಪ್ರಕಾಶ್ ಪಾಟೀಲ್ ಮಾಹಿತಿ


ಶರಣ್‌ಪ್ರಕಾಶ್ ಪಾಟೀಲ್

ಬೆಂಗಳೂರು,ಮೇ12(ಕೆಎಂಶಿ)– ಕರ್ನಾಟಕದ ಹೆಮ್ಮೆಯ ಸಂಸ್ಥೆಗಳಲ್ಲಿ ಒಂದಾದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ವಿದೇಶದಲ್ಲೂ ತನ್ನ ಕೀರ್ತಿ ವಿಸ್ತರಿಸುತ್ತಿದೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಖಾತೆ ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಶಾಖೆಯನ್ನು ಆಫ್ರಿಕಾದ ನಮೀಬಿಯಾದಲ್ಲಿ ಸ್ಥಾಪಿಸುವ ಕುರಿತು ಉನ್ನತ ಮಟ್ಟದ ಮಾತುಕತೆ ನಡೆದಿದೆ. ವೃತ್ತಿ ತರಬೇತಿಯಲ್ಲಿ ಭಾರತ–ಆಫ್ರಿಕಾ ಸಹಕಾರ ಬಲಪಡಿಸುವ ಮಹತ್ವದ ಹೆಜ್ಜೆಯಾಗಿ, ಆಫ್ರಿಕಾ ಇಂಡಿಯಾ ಎಕನಾಮಿಕ್ ಫೌಂಡೇಷನ್ ಕರ್ನಾಟಕದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವನ್ನು ಜ್ಞಾನ ಮತ್ತು ತಂತ್ರಜ್ಞಾನ ಪಾಲುದಾರ ಸಂಸ್ಥೆಯಾಗಿ ಮಾಡಿಕೊಳ್ಳಲು ಮುಂದಾಗಿದೆ. ಪ್ರಸ್ತಾವನೆ ಸ್ವಾಗತಾರ್ಹವಾಗಿದ್ದು, ಮುಂದುವರಿದ ಚರ್ಚೆಗಳನ್ನು ಸಕ್ರಿಯವಾಗಿ ನಡೆಸಲು ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಈ ಉಪಕ್ರಮವು ಕರ್ನಾಟಕವನ್ನು ಜಾಗತಿಕ ಕೌಶಲ ಕೇಂದ್ರವಾಗಿಸಲಿದೆ.

ಉಪಕರಣ ತಯಾರಿಕೆ ಮತ್ತು ಉತ್ಪಾದನಾ ಕೌಶಲಗಳಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪರಿಣತಿ ಜಾಗತಿಕ ಪ್ರಭಾವ ಸೃಷ್ಟಿಸಲು ಸಜ್ಜಾಗಿದೆ ಎಂದರು.

ಐದು ದಶಕಗಳಿಗೂ ಹೆಚ್ಚು ಪರಂಪರೆ ಹೊಂದಿರುವ ಸರ್ಕಾರಿ ಸ್ವಾಮ್ಯದ ಸಂಸ್ಥೆಯು ರಾಜ್ಯದಾದ್ಯಂತ 20ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದೆ. ನಿಖರ ಉಪಕರಣಗಳು, ಸಿಎನ್‌ಸಿ ಕಾರ್ಯಾಚರಣೆಗಳು, ಮೆಕಾಟ್ರಾನಿಕ್ಸ್ ಮತ್ತು ರೊಬೊಟಿಕ್ಸ್‌ನಲ್ಲಿ ಸಾವಿರಾರು ಜನರಿಗೆ ತರಬೇತಿ ನೀಡಲಾಗುತ್ತಿದೆ. ಈಗಾಗಲೇ 5 ಲಕ್ಷಕ್ಕೂ ಹೆಚ್ಚು ಕೌಶಲಪೂರ್ಣ ವೃತ್ತಿಪರರನ್ನು ಸಿದ್ಧಗೊಳಿಸಿದೆ. ಆಧುನಿಕ ಕೈಗಾರಿಕಾ ಬೇಡಿಕೆಗಳು ಮತ್ತು ಉದ್ಯಮ ಸಂಪರ್ಕಗಳಿಗೆ ಹೊಂದಿಕೊಂಡ ಪಠ್ಯಕ್ರಮ ರೂಪಿಸಲಾಗಿದೆ ಎಂದರು.

ಕೆಇಎನಿಂದ ವಿದ್ಯಾರ್ಥಿ ಸ್ನೇಹಿ ಉಪಕ್ರಮಗಳಾದ ಕಾಲೇಜು ಪೋರ್ಟಲ್, ಮೊಬೈಲ್ ಆ್ಯಪ್, ಚಾಟ್‌ಬಾಟ್ ವ್ಯವಸ್ಥೆ

● ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಚಾಲನೆ ● ಪರೀಕ್ಷಾ ಪ್ರಾಧಿಕಾರದ ಎಲ್ಲಾ ಮಾಹಿತಿ ಇನ್ನು ಸುಲಭ ಲಭ್ಯ ● ಯಾರೂ ಹಣ ಖರ್ಚು ಮಾಡಿ ಪ್ರಾಧಿಕಾರದ ಕಚೇರಿ, ಸೈಬರ್ ಸೆಂಟರ್‌ಗಳಿಗೆ ಅಲೆಯಬೇಕಿಲ್ಲ

ಬೆಂಗಳೂರು, ಮೇ 12(ಕೆಎಂಶಿ)– ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆರಂಭಿಸಿರುವ ವಿದ್ಯಾರ್ಥಿಸ್ನೇಹಿ ಉಪಕ್ರಮಗಳಾದ ಕಾಲೇಜು ಪೋರ್ಟಲ್, ಮೊಬೈಲ್ ಆ್ಯಪ್ ಮತ್ತು ಚಾಟ್‌ಬಾಟ್‌ಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಇಂದಿಲ್ಲಿ ಚಾಲನೆ ನೀಡಿದರು.

ನಂತರ ಮಾತನಾಡಿದ ಸಚಿವರು, ಪರೀಕ್ಷಾ ಪ್ರಕ್ರಿಯೆ ಸುಗಮಗೊಳಿಸಲು ಹಾಗೂ ಅಭ್ಯರ್ಥಿಸ್ನೇಹಿ ಆಗಿಸಲು ಕಾಲಕಾಲಕ್ಕೆ ಆಧುನಿಕ ತಂತ್ರಜ್ಞಾನ ಅಳವಡಿಕೆಯಲ್ಲಿ ಪರೀಕ್ಷಾ ಪ್ರಾಧಿಕಾರ ಸದಾ ಮುಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿಖರವಾದ ಸಮಯದಲ್ಲಿ ಖಚಿತವಾದ ಮಾಹಿತಿ ಲಭ್ಯವಾಗುತ್ತದೆ, ಅನಗತ್ಯ ಗೊಂದಲಕ್ಕೆ ತೆರೆ ಬೀಳುತ್ತದೆ, ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ. ಅಭ್ಯರ್ಥಿಗಳು ಆಪ್ಷನ್ ದಾಖಲಿಸುವುದಕ್ಕೂ ಮುನ್ನ ಕಾಲೇಜು ಆಯ್ಕೆ ಪ್ರಮುಖ ಘಟ್ಟ ಸಂದರ್ಭದಲ್ಲಿ ಕಾಲೇಜು ಪೋರ್ಟಲ್‌ನಲ್ಲೇ ಸಂಬಂಧಪಟ್ಟ ಕಾಲೇಜಿನ ಮಾಹಿತಿ ಲಭ್ಯವಾಗುವಂತೆ ಮಾಡಲಾಗಿದೆ, ಇದನ್ನು ಕಾಲೇಜಿನಿಂದಲೇ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕಾಲೇಜುಗಳಲ್ಲಿನ ಮೂಲಸೌಲಭ್ಯ, ಶೈಕ್ಷಣಿಕ ವಾತಾವರಣ, ಪ್ರಯೋಗಾಲಯ, ಗ್ರಂಥಾಲಯ, ಕೊಠಡಿ, ಹಾಸ್ಟೆಲ್, ಕೋರ್ಸ್‌ವಾರು ಶುಲ್ಕ ವಿವರ, ಅತಿಥಿ ಉಪನ್ಯಾಸಕರು ಸೇರಿದಂತೆ ಖಾಯಂ ಸಿಬ್ಬಂದಿ ಮಾಹಿತಿ ಇತ್ಯಾದಿ ವಿವರಗಳು ಪೋರ್ಟಲ್‌ನಲ್ಲಿ ಲಭ್ಯವಿರುತ್ತವೆ.

ನಿಗದಿಗಿಂತ ಹೆಚ್ಚು ಶುಲ್ಕ ವಸೂಲಿ ಮಾಡುವ ಶಿಕ್ಷಣ ಸಂಸ್ಥೆಗಳ ವಿರುದ್ಧ ದೂರು ದಾಖಲಿಸುವುದಕ್ಕೂ ಪೋರ್ಟಲ್‌ನಲ್ಲಿ ಲಿಂಕ್ ನೀಡುವ ಉದ್ದೇಶವೂ ಇದ್ದು, ನೇರವಾಗಿ ಶುಲ್ಕ ನಿಯಂತ್ರಣ ಸಮಿತಿಗೆ ದೂರು ನೀಡುವ ವ್ಯವಸ್ಥೆ ರೂಪಿಸಲಾಗಿದೆ.

ಇದೇ ಮೊದಲ ಬಾರಿಗೆ ಮತ್ತಷ್ಟು ವಿದ್ಯಾರ್ಥಿ ಸ್ನೇಹಿಯಾಗುವ ಉಪಕ್ರಮದ ಭಾಗವಾಗಿ ಮೊಬೈಲ್ ಆ್ಯಪ್ ಬಿಡುಗಡೆ ಮಾಡಲಾಗಿದ್ದು, ವೆಬ್‌ಸೈಟ್‌ನಲ್ಲಿ ಲಭ್ಯವಾಗುವ ಎಲ್ಲ ಮಾಹಿತಿ ಆ್ಯಪ್‌ನಲ್ಲೂ ಲಭ್ಯವಿದೆ.

ಗ್ರಾಮೀಣರಿಗೆ ಅನುಕೂಲ ಮೊಬೈಲ್ ಆ್ಯಪ್: ಗ್ರಾಮೀಣ ಭಾಗದ ಬಹುತೇಕ ಅಭ್ಯರ್ಥಿಗಳು ಸಿಇಟಿ ಅರ್ಜಿ ಭರ್ತಿ ಹಾಗೂ ಆನ್‌ಲೈನ್ ಸೀಟು ಹಂಚಿಕೆ ಸಂಬಂಧ ಪ್ರಕ್ರಿಯೆಗೆ ಸೈಬರ್ ಸೆಂಟರ್‌ಗಳ ಮೇಲೆ ಹೆಚ್ಚು ಅವಲಂಬನೆಯಿಂದ ಅನೇಕ ತಪ್ಪುಗಳನ್ನು ಮಾಡುವ ಪರಿಸ್ಥಿತಿ ಇತ್ತು, ಇದಕ್ಕೊಂದು ಪರಿಹಾರವಾಗಿ ಮೊಬೈಲ್ ಆಪ್ ರೂಪಿಸಿದ್ದು, ಬಹುತೇಕ ಎಲ್ಲ ಪ್ರಕ್ರಿಯೆಗಳನ್ನೂ ಅಭ್ಯರ್ಥಿಗಳೇ ಮಾಡಬಹುದಾಗಿದೆ ಎಂದರು.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ನೆರವಿನ ಚಾಟ್‌ಬಾಟ್ ವ್ಯವಸ್ಥೆ ಬಳಸಿ ಅಭ್ಯರ್ಥಿಗಳು ತಮ್ಮ ಪ್ರಶ್ನೆ ಮತ್ತು ಸಂಶಯಗಳಿಗೆ ನೇರ ಉತ್ತರ ಪಡೆಯಲು ಸಾಧ್ಯವಾಗುತ್ತದೆ. ಈ ವ್ಯವಸ್ಥೆಯ ಪ್ರಾಯೋಗಿಕ ಆರಂಭದ ನಂತರ ಇದುವರೆಗೆ 1.35 ಲಕ್ಷ ಅಭ್ಯರ್ಥಿಗಳು ಈ ಮೂಲಕ ತಮ್ಮ ಪ್ರಶ್ನೆಗಳಿಗೆ ಸೂಕ್ತ ಮಾಹಿತಿ ಪಡೆದಿದ್ದಾರೆ.

ಕೆಇಎ ಮೊದಲ ಸುತ್ತಿನ ಸೀಟು ಹಂಚಿಕೆ ನಂತರವೇ ಕಾಮೆಡ್–ಕೆ ಸೀಟು ಹಂಚಿಕೆ ಪ್ರಕ್ರಿಯೆ ಆರಂಭಿಸಬೇಕು ಎನ್ನುವ ಸಲಹೆಗೆ ಕಾಮೆಡ್–ಕೆ ಒಪ್ಪಿಗೆ ಸೂಚಿಸಿದೆ. ಸರ್ಕಾರಿ ಮತ್ತು ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಭರ್ತಿಯಾಗದೆ ಉಳಿಯುವ ಅನೇಕ ವಿಭಾಗಗಳ ಎಂಜಿನಿಯರಿಂಗ್ ಸೀಟುಗಳ ಶುಲ್ಕ ಕಡಿಮೆ ಮಾಡುವ ಬಗ್ಗೆಯೂ ಚಿಂತನೆ ನಡೆದಿದೆ.

ಯಾವ ಕಾಲೇಜುಗಳಲ್ಲಿ, ಯಾವ ಕೋರ್ಸ್‌ಗೆ ಪ್ರವೇಶ ಕಡಿಮೆಯಾಗಿದೆ ಎಂಬ ಮಾಹಿತಿ ಪಡೆದು ತೀರ್ಮಾನ ಕೈಗೊಳ್ಳಲಾಗುವುದು. ತೆಲಂಗಾಣದಲ್ಲಿ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಸೀಟು ಹೆಚ್ಚಳಕ್ಕೆ ನಿರ್ಬಂಧ ವಿಧಿಸಿ ಕೋರ್ಟ್ ತೀರ್ಪು ನೀಡಿದ್ದು, ಪರಿಶೀಲನೆ ನಂತರ ಕರ್ನಾಟಕದಲ್ಲಿ ಜಾರಿ ಮಾಡುವ ಕುರಿತು ಚಿಂತನೆ ನಡೆದಿದೆ. ಸೀಟ್ ಬ್ಲಾಕಿಂಗ್ ಪ್ರಕರಣ ತನಿಖೆಯನ್ನು ಪೊಲೀಸರು ನಡೆಸುತ್ತಿದ್ದು, ಸದ್ಯದಲ್ಲೇ ಪೊಲೀಸ್ ಕಮಿಷನರ್ ಅವರಿಂದ ಮಾಹಿತಿ ಪಡೆಯಲಾಗುವುದು ಎಂದರು.


ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆರಂಭಿಸಿರುವ ಕಾಲೇಜು ಪೋರ್ಟಲ್, ಮೊಬೈಲ್ ಆ್ಯಪ್, ಚಾಟ್‌ಬಾಟ್‌ಗೆ ಸಚಿವ ಡಾ.ಎಂ.ಸಿ.ಸುಧಾಕರ್ ಚಾಲನೆ ನೀಡಿದರು.

“ಕೆಇಎ ಪ್ರಕಟಿಸುವ ಎಲ್ಲ ಮಾಹಿತಿಯನ್ನು ಚಾಟ್‌ಬಾಟ್ ವ್ಯವಸ್ಥೆಗೆ ಅಪ್‌ಲೋಡ್ ಮಾಡಲಾಗುತ್ತದೆ. ಅಭ್ಯರ್ಥಿಗಳು ತಾವು ಏನನ್ನು ಕೇಳಬೇಕೋ ಅದನ್ನು ಟೈಪ್ ಮಾಡಿದರೆ, ಅಪ್‌ಲೋಡ್ ಮಾಡಲಾಗಿರುವ ಮಾಹಿತಿ ಆಧರಿಸಿ ಚಾಟ್‌ಬಾಟ್ ಉತ್ತರ ಒದಗಿಸುತ್ತದೆ. ಮಾಹಿತಿಗಾಗಿ ಕೆಇಎ ಕಚೇರಿಗೆ ಖುದ್ದು ಬರುವುದಾಗಲೀ ಅಥವಾ ಇತರ ಕಚೇರಿಗಳಿಗೆ ಅಲೆಯುವುದಾಗಲೀ ತಪ್ಪುತ್ತದೆ. ಕುಳಿತಲ್ಲೇ ಮಾಹಿತಿ ಪಡೆಯಲು ನೆರವಾಗುತ್ತದೆ. ಈ ನೂತನ ವ್ಯವಸ್ಥೆಗೆ ಸದ್ಯಕ್ಕೆ ಇಂಗ್ಲಿಷ್‌ನಲ್ಲಿ ಉತ್ತರಿಸುವ ವ್ಯವಸ್ಥೆ ಇದ್ದು, ಮುಂದಿನ ದಿನಗಳಲ್ಲಿ ಕನ್ನಡದಲ್ಲಿಯೂ ಮಾಹಿತಿ ಲಭ್ಯವಾಗುವಂತೆ ಮಾಡಲಾಗುತ್ತಿದ್ದು, ತಿಂಗಳಲ್ಲಿ ಕನ್ನಡ ಅವತರಣಿಕೆ ಆರಂಭಿಸಲಾಗುತ್ತದೆ. ಬಿಎಸ್‌ಎನ್‌ಎಲ್ ಇದರ ನಿರ್ವಹಣೆ ಮಾಡುತ್ತಿದೆ. –ಡಾ.ಎಂ.ಸಿ.ಸುಧಾಕರ್.**

ಭಾರತೀಯ ಜೈನ್ ಸಂಘಟನೆಯಿಂದ ಜೈನ್ ಫೌಂಡೇಷನ್ ದಿನ ಆಚರಣೆ


ಮೈಸೂರಲ್ಲಿ ಸೋಮವಾರ ಜೈನ್ ಫೌಂಡೇಷನ್ ದಿನ ಆಚರಿಸಲಾಯಿತು.

ಮೈಸೂರು, ಮೇ 12– ಭಾರತೀಯ ಜೈನ್ ಸಂಘಟನೆ (ಬಿಜೆಎಸ್), ಮೈಸೂರು ಚಾಪ್ಟರ್, ಶ್ರೀ ಆದಿನಾಥ್ ಜೈನ್ ಸಂಘದ ಸಹಯೋಗದೊಂದಿಗೆ ಅದೇಶ್ವರ್ ವಾಟಿಕಾದಲ್ಲಿ ಜೈನ್ ಫೌಂಡೇಷನ್ ದಿನ ಆಚರಿಸಲಾಯಿತು.

ಭಾರತೀಯ ಜೈನ್ ಸಂಘಟನೆ ಮೈಸೂರು ಚಾಪ್ಟರ್ ಅಧ್ಯಕ್ಷ ಅಶೋಕ್ ಜೀ ಸಲೇಚಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಧರ್ಮ ಸಭಾ ನವಕಾರ್ ಮಹಾಮಂತ್ರ ಪಠಿಸುವ ಮೂಲಕ ಆರಂಭವಾಯಿತು.

ಶ್ರೀ ಆದಿನಾಥ್ ಜೈನ್ ಸಂಘದ ಅಧ್ಯಕ್ಷ ರಮೇಶ್‌ಚಂದ್‌ಜೀ ಜೈನ್, ಬಿಜೆಎಸ್, ಮೈಸೂರು ಚಾಪ್ಟರ್ ಚೀಫ್ ಸೆಕ್ರೆಟರಿ ದೀಪಕ್ ಬೋಹ್ರಾ, ಅಧ್ಯಕ್ಷ ರಾಜನ್ ಬಾಗ್‌ಮಾರ್, ಮಾಜಿ ಅಧ್ಯಕ್ಷ ಪ್ರವೀಣ್ ಲುಂಕಾರ್, ಖಜಾಂಚಿ ಮನೋಹರ್ ಸಂಕ್ಲಾ, ಉಪಾಧ್ಯಕ್ಷ ನೇಮಿಚಂದ್ ಬರೋಲಾ, ಕಾರ್ಯದರ್ಶಿಗಳಾದ ನವರತನ್‌ಲಾಲ್ ಪಿಟ್ಲಿಯಾ, ಸುನೀಲ್ ಪಟ್ವಾ ಅತಿಥಿಗಳನ್ನು ಸನ್ಮಾನಿಸಿದರು. ಪ್ರಾಜೆಕ್ಟ್ ಡೈರೆಕ್ಟರ್ ಮತ್ತು ಉಪಾಧ್ಯಕ್ಷ ಕುಶಾಲ್ ಪಾಲ್ ರೇಚಾ, ಶ್ರೀ ಆದಿನಾಥ್ ಜೈನ್ ಸಂಘದ ಉಪಾಧ್ಯಕ್ಷ ಭೋಜರಾಜ್ ಜೈನ್ ಬಿಜೆಎಸ್ ಲೇಡಿಸ್ ವಿಂಗ್ ಅಧ್ಯಕ್ಷೆ ಶರ್ಮಿಳಾ ದೋಖಾ, ಕರ್ನಾಟಕ ಬಿಜೆಎಸ್ ಚೀಫ್ ಸೆಕ್ರೆಟರಿ ಪ್ರಕಾಶ್ ಗುಲೇಚಾ, ಮಾಜಿ ಅಧ್ಯಕ್ಷ ಪ್ರಕಾಶ್ ಶ್ರೀಮಲ್, ಸಂಘದ ಸದಸ್ಯರು ಇದ್ದರು.

ಇಂದಿನಿಂದ ಎರಡು ದಿನ ಮೈಸೂರಲ್ಲಿ ಕೆಪಿಎಸ್‌ಸಿ ಪರೀಕ್ಷೆ

ಮೈಸೂರು, ಮೇ 12(ಆರ್‌ಕೆ)– ಮೈಸೂರಿನ ಎರಡು ಕೇಂದ್ರಗಳಲ್ಲಿ ನಾಳೆ (ಮೇ 13)ಯಿಂದ 2 ದಿನ ಕರ್ನಾಟಕ ಲೋಕ ಸೇವಾ ಆಯೋಗದ ಪರೀಕ್ಷೆಗಳು ನಡೆಯಲಿವೆ. ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ 70 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ಭರ್ತಿಗಾಗಿ ಆಯೋಗವು ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಪದವಿ ಪೂರ್ವ ಕಾಲೇಜು ಮತ್ತು ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ಪರೀಕ್ಷಾರ್ಥಿಗು ಹಾಗೂ ಸಿಬ್ಬಂದಿ ಹೊರತುಪಡಿಸಿ ಇತರರು ಸಂಚರಿಸಬಾರದು, ಸುತ್ತಲಿನ ಜೆರಾಕ್ಸ್ ಅಂಗಡಿ ಮತ್ತು ಬ್ರೌಸಿಂಗ್ ಸೆಂಟರ್‌ಗಳನ್ನು ಮುಚ್ಚುವಂತೆ ಆದೇಶಿಸಲಾಗಿದೆ.

ಮೇಳಾಪುರ ಗ್ರಾಪಂ ನೂತನ ಅಧ್ಯಕ್ಷೆ ಶ್ರೀಮತಿ ರಾಧಾ ಮಹೇಶ್‌ಗೆ ಲಾಗೈಡ್ ಬಳಗದಿಂದ ಅಭಿನಂದನೆ...


ಶ್ರೀರಂಗಪಟ್ಟಣ ತಾಲೂಕಿನ ಮೇಳಾಪುರ ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಬಳಗದ ಸದಸ್ಯೆ ಶ್ರೀಮತಿ ರಾಧಾ ಮಹೇಶ್ ಅವರನ್ನು ಬಳಗದ ವತಿಯಿಂದ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಆತ್ಮೀಯವಾಗಿ ಗೌರವಿಸಲಾಯಿತು. ಲಾಗೈಡ್ ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್, ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ವಕೀಲರಾದ ರಾಜೇಶ್, ಮನೋಹರ, ಮಹೇಶ್, ರಘು ಹಾಜರಿದ್ದರು.

ಅರಮನೆ ನಗರಿಗೆ ಮೆರುಗು ನೀಡಿದ ಸಾಂಸ್ಕೃತಿಕ ಉತ್ಸವ 2025

ಚೆನ್ನಪಟ್ಟಣ ಕಲ್ಪಶ್ರೀ ಪರ್‌ಫಾರ್‌ಮಿಂಗ್ ಆರ್ಟ್ಸ್ ಸೆಂಟರ್ ಟ್ರಸ್ಟ್ ವತಿಯಿಂದ ಆಯೋಜನೆ


ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನೃತ್ಯ ಸಮ್ಮೇಳನ ಆಯೋಜಿಸಲಾಗಿತ್ತು.

ಮೈಸೂರು, ಮೇ 12– ಕಲ್ಪಶ್ರೀ ಪರ್‌ಫಾರ್‌ಮಿಂಗ್ ಆರ್ಟ್ಸ್ ಸೆಂಟರ್ ಟ್ರಸ್ಟ್, ಚೆನ್ನಪಟ್ಟಣ ಹಾಗೂ ಕೇಂದ್ರ ಸಂಸ್ಕೃತಿ ಇಲಾಖೆ ಹಾಗೂ ನಾಟ್ಯಾಲಯಂ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಶನಿವಾರ ಹಾಗೂ ಭಾನುವಾರ ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನೃತ್ಯ ಸಮ್ಮೇಳನ ಆಯೋಜಿಸಲಾಗಿತ್ತು.

ಉತ್ಸವದಲ್ಲಿ ಭಾರತದಾದ್ಯಂತ 200ಕ್ಕೂ ಅಧಿಕ ನೃತ್ಯ ಕಲಾವಿದರು ಆಗಮಿಸಿ ಭರತನಾಟ್ಯ, ಕುಚಿಪುಡಿ ಹಾಗೂ ಕಥಕ್ ನೃತ್ಯ ಪ್ರದರ್ಶಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ನೃತ್ಯ ಕಲಾವಿದೆ ಜ್ಯೋತಿ ಹೆಗ್ಡೆ ಮಾತನಾಡಿ, ಕಲ್ಪಶ್ರೀ ಸಂಸ್ಥೆ ಕಳೆದ 10 ವರ್ಷಗಳಿಂದ ಮೈಸೂರಿನಲ್ಲಿ ನೃತ್ಯ ಸಮ್ಮೇಳನವನ್ನು ಆಯೋಜಿಸುತ್ತಾ ಬಂದಿರುವುದು ಸಂತಸದ ಸಂಗತಿ. ದೇಶದ ಎಲ್ಲಾ ಭಾಗದ ನೃತ್ಯ ಕಲಾವಿದರನ್ನು ಒಂದೆಡೆ ಕಲೆ ಹಾಕಿ ಅವರ ನೃತ್ಯದ ಸೊಬಗನ್ನು ಇಡೀ ಮೈಸೂರು ಜನತೆಗೆ ಉಣಬಡಿಸಿದ್ದಾರೆ. ಇವರ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ ಎಂದರು.

ಸಮಾಜ ಸೇವಕ ಕಿಶೋರ್ ರೆಡ್ಡಿ ಮಾತನಾಡಿ, ಕಲ್ಪಶ್ರೀ ಸಂಸ್ಥೆ ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾಗಿದೆ. ಇವರು ಆಯೋಜನೆ ಮಾಡುವ ನೃತ್ಯ ಉತ್ಸವಗಳು ಜನಪ್ರಿಯವಾಗಿದೆ. ಸಾವಿರಾರು ಯುವ ನೃತ್ಯ ಕಲಾವಿದರಿಗೆ ತಮ್ಮ ಕಲೆ ಪ್ರದರ್ಶನ ನೀಡಿ ಅವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ನಡೆಸಿದೆ ಎಂದರು.

ಖ್ಯಾತ ಸಂಗೀತ ಶಿಕ್ಷಕಿ ವಿದುಷಿ ಸುಮ ಹರಿನಾಥ್ ಮಾತನಾಡಿ, ಎಲ್ಲ ನೃತ್ಯ ಕಲಾವಿದರು ಬಹಳ ಸೊಗಸಾಗಿ ನೃತ್ಯ ಪ್ರದರ್ಶನ ಪ್ರದರ್ಶಿಸಿದ್ದಾರೆ. ಇದರ ಮತ್ತೊಂದು ಆಕರ್ಷಣೆ ಏನೆಂದರೆ ದೂರದ ಮಲೇಷಿಯಾದಿಂದ ಇಲ್ಲಿಗೆ ಆಗಮಿಸಿ ನೃತ್ಯ ಪ್ರದರ್ಶಿಸಿರುವುದು ಮೈಸೂರು ಜನತೆಗೆ ಹೆಮ್ಮೆ ತರುವ ವಿಷಯ ಎಂದರು.

ದಾದಿಯರ ದಿನಾಚರಣೆ


ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ವಿಶ್ವ ದಾದಿಯರ ದಿನ ಆಚರಿಸಲಾಯಿತು. ಈ ವೇಳೆ ದಾದಿಯರಾಗಿ ಸೇವೆ ಸಲ್ಲಿಸುತ್ತಿರುವ ರಶ್ಮಿ, ರಶೀದ, ಕೋಮಲಾ, ಪೂರ್ಣಿಮಾ ಅವರನ್ನು ಸನ್ಮಾನಿಸಲಾಯಿತು. ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ನಜರ್‌ಬಾದ್ ನಟರಾಜ್, ಮಹದೇವ್, ರಮೇಶ್ ರಾಮಪ್ಪ, ರವಿಚಂದ್ರ, ಸುಜಾತ ಇನ್ನಿತರರಿದ್ದರು.


ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ: ಮ್ಯೂಸಿಯಮ್ಸ್ ಆನ್ ವೀಲ್ಸ್



ಮೈಸೂರು, ಮೇ 12– ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಮೇ 18ರಂದು ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಅಂಗವಾಗಿ ವೇಗವಾಗಿ ಬದಲಾಗುತ್ತಿರುವ ಸಮುದಾಯಗಳಲ್ಲಿ ವಸ್ತುಸಂಗ್ರಹಾಲಯಗಳ ಭವಿಷ್ಯ ಥೀಮ್ ಅನ್ವಯ ಇಲಾಖೆ ವತಿಯಿಂದ 'ಮ್ಯೂಸಿಯಮ್ಸ್ ಆನ್ ವೀಲ್ಸ್' ಎಂಬ ಶೀರ್ಷಿಕೆಯಡಿ, ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಸಂಶೋಧಕರು, ಇತಿಹಾಸ ಆಸಕ್ತರು ಹಾಗೂ ಸಾರ್ವಜನಿಕರಿಗೆ ಆಯ್ದ ವಿವಿಧ ಮಾದರಿಯ ವಸ್ತುಸಂಗ್ರಹಾಲಯಗಳ ವೀಕ್ಷಣೆ ಮಾಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಮೇ 18ರಂದು ಬೆಳಗ್ಗೆ 8 ಗಂಟೆಗೆ ವೆಲ್ಲಿಂಗ್ಟನ್ ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಕಲಾ ಗ್ಯಾಲರಿ, ಇರ್ವಿನ್ ರಸ್ತೆ, ಮೈಸೂರು ಇಲ್ಲಿ ಉದ್ಘಾಟಿಸಲಾಗುತ್ತದೆ. ನಂತರ ಪ್ರಾಕೃತಿಕ ಪ್ರಾದೇಶಿಕ ವಸ್ತುಸಂಗ್ರಹಾಲಯ, ಪಯಣ (ಕಾರ್ ಮ್ಯೂಸಿಯಂ) ಹಾಗೂ ರೈಲ್ವೆ ಮ್ಯೂಸಿಯಂ ಮೂಲಕ ಹಾದು, ವೆಲ್ಲಿಂಗ್ಟನ್ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿ, ಇರ್ವಿನ್ ರಸ್ತೆ ಇಲ್ಲಿ ಮುಕ್ತಾಯಗೊಳ್ಳಲಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತರು ಬಸ್‌ನ ಮೂಲಕ ಮೇಲ್ಕಂಡ ವಸ್ತುಸಂಗ್ರಹಾಲಯಗಳನ್ನು ವೀಕ್ಷಿಸಲು ಹಾಗೂ ವಸ್ತುಸಂಗ್ರಹಾಲಯಗಳಲ್ಲಿ ಪ್ರದರ್ಶನಗೊಂಡಿರುವ ವಿವಿಧ ಮಾದರಿಯ ಪ್ರಾಚ್ಯಾವಶೇಷಗಳ ಪ್ರಾಚೀನತೆ ಮತ್ತು ಸಾಹಿತ್ಯಕ, ಸಾಂಸ್ಕೃತಿಕ ಮಜಲುಗಳನ್ನು ಪರಿಚಯಿಸುವ ಉದ್ದೇಶವಾಗಿರುವುದರಿಂದ 10ರಿಂದ 60 ವರ್ಷದ ವಯೋಮಿತಿಯೊಳಗಿನವರು, ಶಾಲಾ–ಕಾಲೇಜಿನ ವಿದ್ಯಾರ್ಥಿಗಳು, ಸಂಶೋಧಕರು, ಇತಿಹಾಸ ಆಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಬಹುದಾಗಿದೆ. ಆಸಕ್ತರು ತಮ್ಮ ಹೆಸರುಗಳನ್ನು ಮೇ 16ರಂದು ಸಂಜೆ 5.30 ಗಂಟೆಯೊಳಗೆ ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಇಂದಿರಾನಗರ, ಮೈಸೂರು ಇಲ್ಲಿ ನೇರವಾಗಿ / E-ಮೇಲ್ ddheritagemysore@gmail.com & commr_amh@yahoo.in ಅಥವಾ ದೂ.:0821-2424671/2424673/ ಮೂಲಕ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ.(7829404796).

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.05.2025 ಮಂಗಳವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಆರ್ಟ್ ಆಫ್ ಲಿವಿಂಗ್ :** ವ್ಯಸನಮುಕ್ತ, ಕ್ವಿಟ್ ಟೊಬ್ಯಾಕೋ ಕಾರ್ಯಕ್ರಮ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಬೆಳಗ್ಗೆ 7 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ ಮತ್ತು ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಕಾಲೇಜು ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು :** ಸಾಂಸ್ಕೃತಿಕ ವೇದಿಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಸೋಮಣ್ಣ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಚಲನಚಿತ್ರ ನಟ ಚೇತನ್ ಚಂದ್ರ, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ

■ **ಕದಂಬ ರಂಗ ವೇದಿಕೆ :** ಎಪ್ಪತ್ತೈದರ ಉದ್ಬೂರು ರಾಮಣ್ಣ ಐದಾರು ದಶಕಗಳ ನೂರಾರು ಬಣ್ಣ ಮೆಲಕು ಕಾರ್ಯಕ್ರಮ, ರಂಗಭೂಮಿ ಕಲಾವಿದ ಹಾಗೂ ಜಾನಪದ ವಿದ್ವಾಂಸ ಯು.ಎಸ್. ರಾಮಣ್ಣ ಅವರ ಚಿತ್ರಗಳ ಪ್ರದರ್ಶನ ಹಾಗೂ ಅವರಿಗೆ ಗೌರವ ಸಮರ್ಪಣೆ, ಚಿತ್ರ ಪ್ರದರ್ಶನ ಉದ್ಘಾಟನೆ : ಜಾನಪದ ವಿದ್ವಾನ್ ಡಾ. ಡಿ.ಕೆ. ರಾಜೇಂದ್ರ, ರಾಮಣ್ಣನವರ ಪರಿಚಯ : ರಂಗ ನಿರ್ದೇಶಕ ಹೆಚ್.ಎಸ್. ಉಮೇಶ್, ಗೌರವಿಸುವವರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಸ್ತಾವಿಕ ನುಡಿ : ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಅಧ್ಯಕ್ಷತೆ : ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ ಪ್ರಿನ್ಸಿಪಾಲ್ ಕೆ.ಸಿ. ಮಹದೇವಶೆಟ್ಟಿ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ : ಕಲಾವಿದ ಶ್ರೀಧರ್ ಜೈನ್, ಮುಖ್ಯ ಅತಿಥಿಗಳು : ಡಾ. ಹೆಚ್.ಪಿ. ಜ್ಯೋತಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಎಂ. ಶಾರದ, ಶ್ರೀಮತಿ ಸಂಧ್ಯಾರಾಣಿ ಎಂ.ಎಸ್., ಶ್ರೀಮತಿ ಕೆ.ಎಂ. ಹೇಮಾವತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್, ಟಿ.ಎನ್. ಅಶ್ವಿನಿ, ಡಾ.ಎಂ.ಎ. ಜ್ಯೋತಿ, ವ್ಯಾಖ್ಯಾನ – ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕರೆಗೊಂದು ಗೀತೆ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.00 ವಿಶೇಷ ಹಿಂದಿ ವಾರ್ತೆ, 9.10 ವಿಶೇಷ ಇಂಗ್ಲೀಷ್ ವಾರ್ತೆ, 9.20 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎನ್ ಶ್ರೀನಾಥ್– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್ ಎಂ.ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ– ಅಂಜನಾ ಡಿ. ಕುಂಬ್ಳೆ, 12.45 ಕನ್ನಡದಲ್ಲಿ ಭಾಷಣ – ಇತಿಹಾಸ ಪ್ರಜ್ಞೆ ಕುರಿತು ಮಾತನಾಡುತ್ತಾರೆ ಡಾ. ವಿ ರಂಗನಾಥ್, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು– ರಮೇಶ್ ಚಂದ್ರ, 2.40 ಚಿತ್ರಗೀತೆಗಳು, 3.00 ವಿಶೇಷ ಹಿಂದಿ ವಾರ್ತೆಗಳು, 3.10 ವಿಶೇಷ ಇಂಗ್ಲೀಷ್ ವಾರ್ತೆಗಳು, 3.20 ಕನ್ನಡ ಚಿತ್ರಗೀತೆಗಳು, 4.00 ಕಥಾಕಾಲಕ್ಷೇಪ–ರಾಮಾಯಣದ ಅಯೋಧ್ಯಕಾಂಡ, ಪ್ರಸ್ತುತಿ–ವಿದ್ವಾನ್. ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ತೋಟಗಾರಿಕಾ ಇಲಾಖೆ ಅಭಿವೃದ್ಧಿ ಯೋಜನೆಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ ಮೈಸೂರು ಜಿಲ್ಲಾ ತೋಟಗಾರಿಕಾ ಇಲಾಖೆಯ ಉಪನಿರ್ದೇಶಕರಾದ ಮಂಜುನಾಥ್ ಅಂಗಡಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ವಿಶೇಷ ಹಿಂದಿ ವಾರ್ತೆಗಳು, 8.10 ವಿಶೇಷ ಇಂಗ್ಲೀಷ್ ವಾರ್ತೆಗಳು, 8.20 ಹಿಂದಿ ಚಿತ್ರಗೀತೆಗಳು, 9.15 ವಿಶೇಷ ಸಂವಾದ ಕಾರ್ಯಕ್ರಮ, 10.00 ಸುದ್ದಿ ಅಧಾರಿತ ವಿಶೇಷ ಕಾರ್ಯಕ್ರಮ, ಸುರ್ಖಿಯೋಮೆ– ಇದರ ಧ್ವನಿ ಮುದ್ರಣ, 10.25 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

■ **ಬಾಸುದೇವ ಸೋಮಾನಿ ಕಾಲೇಜು :** ಎನ್‌ಎಸ್‌ಎಸ್ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ, ಬಹುಮಾನ ವಿತರಣೆ : ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ಮುಖ್ಯ ಆಡಳಿತಾಧಿಕಾರಿ ಪಿ. ಗೀತಾಂಜಲಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸೇನಾ ಪಡೆ :** ಕಾಯಕರತ್ನ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಉಪಸ್ಥಿತರು : ಡಾ. ರಘುರಾಮ್ ವಾಜಪೇಯಿ, ಎಸ್.ಜಿ. ಸೋಮಶೇಖರ್, ಪ್ರೊ.ಎನ್.ಲಕ್ಷ್ಮೀ, ಸ್ಥಳ: ರೋಟರಿ ಶಾಲೆ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಭಗವಾನ್ ಬುದ್ಧರ 2569ನೇ ಜನ್ಮ ದಿನಾಚರಣೆ

ಮಾನವೀಯ ಮೌಲ್ಯದ ಬಹುದೊಡ್ಡ ಶಕ್ತಿಯೇ ಬುದ್ಧ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಮೈಸೂರು,ಮೇ 12(ಪಿಎಂ)– ಮಾನವೀಯ ಮೌಲ್ಯಗಳನ್ನು ಹೊಂದಿರುವ ಬಹುದೊಡ್ಡ ಶಕ್ತಿಯೇ ಬುದ್ಧ. ಜನತೆಯ ಹಿತ, ಸಾಮರಸ್ಯ ಎತ್ತಿಹಿಡಿದಿರುವ ಕಾರಣ ಬೌದ್ಧ ಧಮ್ಮ ಪ್ರಪಂಚದಾದ್ಯಂತ ಗೌರವಕ್ಕೆ ಭಾಜನವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಮೈಸೂರಿನ ಅಶೋಕ ವೃತ್ತದ (ಬಲ್ಲಾಳ್ ವೃತ್ತ) ವಿಶ್ವಮೈತ್ರಿ ಬುದ್ಧ ವಿಹಾರದ ಆವರಣದಲ್ಲಿ ಅಶೋಕಪುರಂ ಆದಿಕರ್ನಾಟಕ ಮಹಾಸಂಸ್ಥೆ, ಅಶೋಕಪುರಂನ ಯುವ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟ, ಎವಿಎಸ್‌ಎಸ್ ಸಂಸ್ಥೆ, ನವಯಾನ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ವೈಶಾಖ ಬುದ್ಧ ಪೂರ್ಣಿಮೆ ; ಭಗವಾನ್ ಬುದ್ಧರ 2569ನೇ ಜನ್ಮ ದಿನಾಚರಣೆ' ಸಮಾರಂಭದಲ್ಲಿ ಬುದ್ಧರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಬುದ್ಧ ಜಯಂತಿಯನ್ನು ರಾಜ್ಯ ಸರ್ಕಾರದಿಂದ ಆಚರಿಸಲು ತೀರ್ಮಾನಿಸಿ ಬಜೆಟ್‌ನಲ್ಲೇ ಘೋಷಣೆ ಮಾಡಿದ್ದೆವು. ಜೊತೆಗೆ ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳ ಸಮುದಾಯಗಳ ಅಭಿವೃದ್ಧಿಗೆ 100 ಕೋಟಿ ಮೀಸಲಿರಿಸಲಾಗಿದೆ. ಮೈಸೂರು ವಿವಿಯಲ್ಲಿ ಸಂವಿಧಾನ ಅಧ್ಯಯನ ಪೀಠ ಸ್ಥಾಪಿಸಲಾಗಿದೆ. ಬೆಂಗಳೂರಿನಲ್ಲಿ ಬುದ್ಧ ಅಧ್ಯಯನ ಪ್ರಾಧಿಕಾರ ಮಾಡಿದ್ದೇವೆ. ಅಶೋಕನ ಆಡಳಿತದ ಕಾಲದ ಉತ್ಖನನ ಮಾಡಿ ಚರಿತ್ರ ದಾಖಲಿಸುವ ಕೆಲಸವನ್ನು ಪ್ರಾಧಿಕಾರ ಮಾಡಲಿದೆ ಎಂದರು.

ಬೌದ್ಧ ಧಮ್ಮ ಪಾಲನೆಯಿಂದ ನಮಗೆ ಸುಖ, ಶಾಂತಿ, ನೆಮ್ಮದಿ ದೊರೆಯಲಿದೆ. ಬುದ್ಧ ಅಂದರೆ ಜ್ಞಾನ, ಬೆಳಕು, ಬದುಕು. ಕರುಣೆ, ಪ್ರೀತಿ ಮತ್ತು ಪ್ರಜಾಪ್ರಭುತ್ವ, ಭಿಕ್ಕುಗಳ ಮೂಲಕ ಬುದ್ಧ ಪ್ರಜಾಪ್ರಭುತ್ವ ಸ್ಥಾಪನೆ ಮಾಡಿದ. ಆ ಪ್ರಜಾಪ್ರಭುತ್ವದ ಬೀಜ 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಮರವಾಗಿ ಬೆಳೆಯಿತು. 20ನೇ ಶತಮಾನದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಮೂಲಕ ಈ ಮರ ಫಲ ಕೊಡುತ್ತಿದೆ. ಬುದ್ಧ ಮಾನವನ ಜೀವನದ ಸತ್ಯ ಸಂಗತಿಗಳನ್ನು ಹೇಳಿದ್ದು, ಹಣೆಬರಹ, ಪುನರ್‌ಜನ್ಮ ಸೇರಿದಂತೆ ಅವೈಜ್ಞಾನಿಕ ಸಂಗತಿಗಳನ್ನು ವಿರೋಧಿಸಿದ್ದಾರೆ. ತಮ್ಮನ್ನು ಟೀಕೆ ಮಾಡಿ ಎಂದು ಸಂದೇಶ ನೀಡುವ ಮೂಲಕ ವಾಕ್ ಸ್ವಾತಂತ್ರ್ಯ ಎತ್ತಿ ಹಿಡಿದಿದ್ದಾರೆ ಎಂದು ಸ್ಮರಿಸಿದರು.

ಅಂಬೇಡ್ಕರ್ ಥೀಮ್ ಪಾರ್ಕ್: ನಾನು ಆಂಧ್ರಕ್ಕೆ ಭೇಟಿ ನೀಡಿದ್ದೆ. ಅಲ್ಲಿನ ಬೃಹತ್ ಅಂಬೇಡ್ಕರ್ ಪ್ರತಿಮೆ ನೋಡಿ ನಮ್ಮಲ್ಲಿಯೂ ಆ ರೀತಿಯಲ್ಲಿ ಪ್ರತಿಮೆ ನಿರ್ಮಿಸಬೇಕೆಂದು ಮುಖ್ಯಮಂತ್ರಿಗಳ ಗಮನಕ್ಕೆ ತಂದೆ. ಈ ನಿಟ್ಟಿನಲ್ಲಿ ಮೊನ್ನೆ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ 'ಅಂಬೇಡ್ಕರ್ ಥೀಮ್ ಪಾರ್ಕ್' ನಿರ್ಮಿಸಲು ತೀರ್ಮಾನಿಸಲಾಗಿದೆ. ಆ ಮೂಲಕ ಅಂಬೇಡ್ಕರ್ ಅವರ ಜೀವನ ಚರಿತ್ರೆ ಕುರಿತ ಮ್ಯೂಸಿಯಂ ಸ್ಥಾಪಿಸಲಾಗುವುದು ಎಂದು ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದರು. ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ ಸಾನಿಧ್ಯ ವಹಿಸಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ, ಹೈಕೋರ್ಟ್ ವಕೀಲ ಎನ್.ಬಿ.ಶಿವರುದ್ರಪ್ಪ, ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರ ಪತ್ನಿ ಭಾಗ್ಯಲಕ್ಷ್ಮಿ, ಮಾಜಿ ಮೇಯರ್ ಪುರುಷೋತ್ತಮ್ ಮತ್ತಿತರರು ಹಾಜರಿದ್ದರು.



ಮೈಸೂರಿನ ವಿಶ್ವಮೈತ್ರಿ ಬಿದ್ಧವಿಹಾರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಭಗವಾನ್ ಬುದ್ಧರ ಜನ್ಮ ದಿನಾಚರಣೆಯನ್ನು ಬುದ್ಧರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಇತರ ಗಣ್ಯರು ಉದ್ಘಾಟಿಸಿದರು.

ಅಂಬೇಡ್ಕರ್ ಸಮುದಾಯ ಭವನಗಳು ಬುದ್ಧ ವಿಹಾರಗಳಾಗಬೇಕು

ಮೈಸೂರು, ಮೇ 12(ಪಿಎಂ)– ರಾಜ್ಯದ ಡಾ.ಅಂಬೇಡ್ಕರ್ ಸಮುದಾಯ ಭವನಗಳನ್ನು ಬುದ್ಧ ವಿಹಾರಗಳಾಗಿ ಪರಿವರ್ತಿಸಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲಾಯಿತು.

ಬುದ್ಧ ಜಯಂತಿ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದ ಹೈಕೋರ್ಟ್ ವಕೀಲ ಎನ್.ಬಿ.ಶಿವರುದ್ರಪ್ಪ ಬೇಡಿಕೆಗಳನ್ನು ಮಂಡಿಸಿದರು. ಬೌದ್ಧ ಧಮ್ಮದ ಪ್ರಚಾರ ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ಆಗಬೇಕಿದೆ. ಇದು ಬಾಬಾ ಸಾಹೇಬರ ಆಶಯ. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದ ಅಂಬೇಡ್ಕರ್ ಸಮುದಾಯ ಭವನಗಳು ಬುದ್ಧ ವಿಹಾರವೂ, ಕಲಿಕಾ ಕೇಂದ್ರಗಳೂ ಆಗಬೇಕಿದ್ದು, ಈ ಸಂಬಂಧ ಸರ್ಕಾರ ಕ್ರಮ ವಹಿಸಬೇಕೆಂದು ಅವರು ಆಗ್ರಹಿಸಿದರು.

ದಲಿತರು ಧಮ್ಮ ಮಾರ್ಗದಲ್ಲಿ ಮಾತ್ರವೇ ಘನತೆ ಬದುಕು ಕಟ್ಟಿಕೊಳ್ಳಲು ಸಾಧ್ಯ. ಧಮ್ಮ ಸ್ವೀಕರಿಸುವ ಬಂಧುಗಳಿಗೂ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆಯಲು ಅವಕಾಶ ಇದೆ. ಇದಕ್ಕಾಗಿ ಸಂವಿಧಾನದ ಶಡ್ಯೂಲ್ ಕಾಸ್ಟ್ ಆರ್ಡರ್ 1950ರ ಸಂಬಂಧ 1990ರಲ್ಲೇ ತಿದ್ದುಪಡಿ ಮಾಡಿ ಕಾನೂನು ಮಾಡಲಾಗಿದೆ. ಆದರೆ 35 ವರ್ಷಗಳಾದರೂ ಈ ಕಾನೂನು ಪರಿಪೂರ್ಣವಾಗಿ ಜಾರಿಯಾಗಿಲ್ಲ. ಇದನ್ನು ಸೂಕ್ತ ರೀತಿಯಲ್ಲಿ ಜಾರಿಗೊಳಿಸಲು ಸರ್ಕಾರ ಮುಂದಾಗಬೇಕು. ಧಮ್ಮ ಪ್ರಚಾರ, ಅಧ್ಯಯನಕ್ಕಾಗಿ ಅಕಾಡೆಮಿ ಸ್ಥಾಪನೆ ಮಾಡಬೇಕು. ಶಾಲೆಯ ನೈತಿಕ ಶಿಕ್ಷಣದಲ್ಲಿ ಧಮ್ಮದ ವಿಚಾರಗಳು ಸೇರ್ಪಡೆಯಾಗಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಬೃಹತ್ ಅಂಬೇಡ್ಕರ್ ಪ್ರತಿಮೆ ಸ್ಥಾಪನೆ ಮಾಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆವು. ಮನವಿ ಪುರಸ್ಕರಿಸಿ ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಅತೀ ಶೀಘ್ರದಲ್ಲಿ ಕಾರ್ಯಗತಗೊಳಿಸುವ ಭರವಸೆ ಸಹ ರಾಜ್ಯ ಸರ್ಕಾರದಿಂದ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರಕ್ಷುಬ್ಧ ವಿಶ್ವಕ್ಕೆ ಬುದ್ಧರ ಕರುಣೆ, ಮೈತ್ರಿ ದಿವ್ಯೌಷಧ

ಬುದ್ಧ ಜಯಂತಿ ಸಮಾರಂಭದಲ್ಲಿ ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್



ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಶಾರದಾದೇವಿನಗರದಲ್ಲಿ ಹಮ್ಮಿಕೊಂಡಿದ್ದ ಬುದ್ಧ ಜಯಂತಿ ಸಮಾರಂಭದಲ್ಲಿ ಬುದ್ಧರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು, ಮೇ 12(ಪಿಎಂ)– ತಥಾಗತ ಬುದ್ಧ ಗುರುವಿನ ಧಮ್ಮದ ಮಾರ್ಗದಲ್ಲಿ ಸಾಗುವುದು ಜಗತ್ತಿಗೆ ಅನಿವಾರ್ಯ. ಬುದ್ಧರ ಕಾರುಣ್ಯ ಮತ್ತು ಮೈತ್ರಿಯೂ ವಿಶ್ವವನ್ನು ಪ್ರಕ್ಷುಬ್ಧದಿಂದ ಮುಕ್ತಗೊಳಿಸಿ ಉಳಿಸಬಲ್ಲದು ಎಂದು ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್ ಹೇಳಿದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಶಾರದಾದೇವಿನಗರದ ವಕೀಲ ಎ.ಆರ್.ಕಾಂತರಾಜು ಅವರ ನಿವಾಸದಲ್ಲಿ ಆಯೋಜಿಸಿದ್ದ ಬುದ್ಧ ಜಯಂತಿ ಸಮಾರಂಭದಲ್ಲಿ ಬುದ್ಧರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಜಗತ್ತು ಪ್ರಕ್ಷುಬ್ಧಗೊಂಡಿದೆ. ಅನೇಕ ಕಡೆ ಯುದ್ಧದ ಸನ್ನಿವೇಶ ಏರ್ಪಟ್ಟಿದೆ. ಕ್ರೌರ್ಯ ತಾಂಡವಾಡುತ್ತಿದೆ. ಮನಸ್ಸುಗಳು ಕಲುಷಿತಗೊಂಡಿವೆ. ಸ್ವಾರ್ಥ, ದುರಾಸೆ, ಲಾಲಸೆಯ ಗುಣಗಳಿಂದ ಸಮಚಿತ್ತತೆ ಇಲ್ಲವಾಗಿದೆ ಎಂದರು. ಜೀವವಿರೋಧಿಯಾದ ಯುದ್ಧವನ್ನು ವಿರೋಧಿಸಿ ತನ್ನ ಬಂಧುಗಳಿಂದ ಬಹಿಷ್ಕೃತಗೊಂಡು, ರಾಜ್ಯ, ರಾಜತ್ವ ತ್ಯಜಿಸಿ ಮಹಾಮಹಿಮ ಸಿದ್ಧಾರ್ಥ ಬುದ್ಧರಾದರು. ಕಠಿಣ ತಪಸ್ಸಿನಿಂದ ಧಮ್ಮವನ್ನು ನಿರೂಪಿಸಿದರು. ಅದು ಲೋಕದ ಬೆಳಕಾಗಿದೆ. ಅದನ್ನು ನಾವೆಲ್ಲರೂ ಅನುಸರಿಸಬೇಕು ಎಂದು ನುಡಿದರು.

ಬುದ್ಧ ಎಂದರೆ ಜಾಗೃತನಾದವನು, ಜ್ಞಾನಿ, ವಿಕಸಿತ, ಪ್ರಬುದ್ಧ ಎಂಬುದಾಗಿದೆ. ಅಲ್ಲದೆ, ಬುದ್ಧ ಎಂದರೆ ಸಿದ್ಧಿಯನ್ನು ಪಡೆದವನು, ತಾನು ಗಳಿಸಿದ ಜ್ಞಾನದಿಂದ ಲೋಕಕ್ಕೆ ಬೆಳಗಾದವನು ಎಂಬ ಅರ್ಥ ಸಹ ಒಳಗೊಂಡಿದೆ. ಯಾವುದೇ ತಾರತಮವಿಲ್ಲದೇ ಎಲ್ಲರನ್ನೂ ಸಮನಾಗಿ ಕಂಡು ಲೋಕದ ಮೊದಲ ದಾರ್ಶನಿಕ ಬುದ್ಧ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಕರ್ನಾಟಕ ರಾಜ್ಯ ಹಿಂದುಳಿದ ಜಾಗೃತ ವೇದಿಕೆಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಎಡಿಜಿಪಿಗಳಾದ ತಿಮ್ಮಯ್ಯ, ಮನ್ಮೋನಣಿ, ವಕೀಲರಾದ ಶಿವಪ್ರಸಾದ್, ಚಂದ್ರಶೇಖರ, ಪುಟ್ಟರಸ, ವಿಷ್ಣುವರ್ಧನ, ಡಿಸಿಸಿ ಕಿಸಾನ್ ಅಧ್ಯಕ್ಷ ಮಹದೇವ, ಮುಖಂಡರಾದ ಗಂಗಾಧರ, ಎಂ. ಕುಮಾರಸ್ವಾಮಿ ಮತ್ತಿತರರು ಹಾಜರಿದ್ದರು.

ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 12 – ಮೈಸೂರಿನ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ 5 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಉಚಿತ ಊಟ, ತಿಂಡಿ ಮತ್ತು ವಸತಿ ಸೌಕರ್ಯವಿದ್ದು, ಎಲ್ಲಾ ಜಾತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಸೂಕ್ತ ದಾಖಲಾತಿಗಳೊಂದಿಗೆ ಮೇ 15 ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 96867688828/ 9739385079/ 9035414199 ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಹುಟ್ಟುಹಬ್ಬದ ಶುಭಾಶಯ



ಕಾಂಗ್ರೆಸ್ಸಿನ ಹಿರಿಯ ನಾಯಕರಾದ ವಿ. ರಾಮಸ್ವಾಮಿ ಅವರ 70ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಿಗೆ ಬಂಧು–ಬಾಂಧವರು, ಹಿತೈಷಿಗಳು ಹಾಗೂ ಅಭಿಮಾನಿಗಳು ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿಗಳ ಬಳಗದ ಪದಾಧಿಕಾರಿಗಳು ಪ್ರಕಾಶಕ ಭರತ್ ರಾಮಸ್ವಾಮಿ, ಉದ್ಯಮಿಗಳಾದ ಪಿ. ನಂದಕುಮಾರ್, ವೆಂಕಟರಾಜ್, ಶಾಂತರಾಮ್ ಶೆಟ್ಟಿ, ಬಳಗದ ಪ್ರಧಾನ ಕಾರ್ಯದರ್ಶಿ ಹಾಗೂ ಮುಡಾ ಮಾಜಿ ಸದಸ್ಯ ಸಿ.ಜಿ. ಶಿವಕುಮಾರ್, ಡಾ. ಮುಳ್ಳೂರು ನಂಜುಂಡಸ್ವಾಮಿ, ರಾಜೇಶ್ ಇತರರು ಉಪಸ್ಥಿತರಿದ್ದರು.

ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಖಾಸಗಿಯವರಿಗೆ ಸರ್ಕಾರದ ಸಹಕಾರ

ಪ್ರವಾಸೋದ್ಯಮ ಇಲಾಖೆ ಪ್ರಭಾರಿ ಜಂಟಿ ನಿರ್ದೇಶಕ ಕೆ.ರುದ್ರೇಶ್ ಮಾಹಿತಿ



ನಗರದ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ನಡೆದ ಪ್ರವಾಸೋದ್ಯಮ ಸಿಂಕ್ ಸಮಾವೇಶದಲ್ಲಿ ಪ್ರವಾಸಿತಾಣಗಳ ಮಾಹಿತಿಯುಳ್ಳ ಕಿರುಹೊತ್ತಿಗೆ ಬಿಡುಗಡೆ ಮಾಡಲಾಯಿತು.

ಮೈಸೂರು, ಮೇ 12(ಎಂಕೆ)– ಪ್ರವಾಸೋದ್ಯಮಕ್ಕೆ ಸೀಮಿತ ವ್ಯಾಪ್ತಿ ಎಂಬುದಿಲ್ಲ. ಸರ್ಕಾರದ ಜೊತೆಗೆ ಮಧ್ಯಸ್ಥಗಾರರು ಉತ್ತಮ ಒಡನಾಟ ಇಟ್ಟುಕೊಂಡಿದ್ದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ ಕಾರ್ಯಕ್ರಮಗಳನ್ನು ರೂಪಿಸಲು ಅನುಕೂಲವಾಗಲಿದೆ ಎಂದು ಪ್ರವಾಸೋದ್ಯಮ ಇಲಾಖೆ ಪ್ರಭಾರ ಜಂಟಿ ನಿರ್ದೇಶಕ ಕೆ.ರುದ್ರೇಶ್ ಹೇಳಿದರು.

ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಪ್ರವಾಸೋದ್ಯಮ ಸಿಂಕ್ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರವಾಸೋದ್ಯಮ ನೂತನ ಪಾಲಿಸಿಯಲ್ಲಿ ಪ್ರವಾಸೋದ್ಯಮದ ಉತ್ತೇಜನಕ್ಕೆ ಸಾಕಷ್ಟು ಅವಕಾಶಗಳನ್ನು ನೀಡಲಾಗಿದೆ. ಉದ್ಯಮಿಗಳು ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲು ಮುಂದಾದರೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯಡಿ ಸ್ಥಳ ಗುರ್ತಿಸಿ, ಸರ್ಕಾರದಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಟೂರ್ ಅಂಡ್ ಟ್ರಾವೆಲ್ಸ್ ಅಭಿವೃದ್ಧಿಗೆ ಅತಿಥ್ಯ ಕ್ಷೇತ್ರ ಅತ್ಯಂತ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆ ಮಾಸ್ಕೋದೊಂದಿಗೆ ಒಡಂಬಡಿಕೆ ಮಾಡಿಕೊಂಡು ಹಲವೆಡೆ ಆಸಕ್ತ ಯುವಕ–ಯುವತಿಯರಿಗೆ ಹೋಟೆಲ್ ವೃತ್ತಿ ತರಬೇತಿ ನೀಡುತ್ತಿದೆ. ಹಾಗಾಗಿ ಯುವಕ–ಯುವತಿಯರು ತರಬೇತಿ ಕಾರ್ಯಕ್ರಮವನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಉದ್ಯೋಗ ಕಂಡುಕೊಳ್ಳುವ ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕರಿಸಬೇಕು ಎಂದು ತಿಳಿಸಿರು.

ಶುಚಿತ್ವಕ್ಕೆ ಆದ್ಯತೆ ನೀಡಿ: ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ಪ್ರವಾಸಿತಾಣಗಳನ್ನು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು. ಸಾಕಷ್ಟು ಯಾತ್ರಾ ಸ್ಥಳಗಳಲ್ಲಿ ಶೌಚಾಲಯ ವ್ಯವಸ್ಥೆ ಕೊರತೆ ಇದ್ದು, ಸರ್ಕಾರ ಮತ್ತು ಪ್ರವಾಸೋದ್ಯಮ ಇಲಾಖೆ ಸ್ವಚ್ಛತೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹಲವು ಪ್ರೇಕ್ಷಣೀಯ ಸ್ಥಳಗಳಿದ್ದು, ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಬೇಕಿದೆ. ಶುಚಿತ್ವಕ್ಕೆ ಮೊದಲ ಆದ್ಯತೆ ನೀಡಬೇಕು. ಹಾಗೆಯೇ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಸೂಕ್ತ ಮಾಹಿತಿ ಮತ್ತು ಮಾರ್ಗದರ್ಶನ ನೀಡುವ ಗೈಡ್‌ಗಳು ಕೂಡ ನಾಮಕಾವಸ್ತೆಗೆ ಕೆಲಸ ಮಾಡಬಾರದು. ಪ್ರವಾಸಿಗರಿಗೆ ಸರಿಯಾದ ಮಾಹಿತಿ ನೀಡಿ, ಅವರು ಮತ್ತೆ ಮತ್ತೆ ಮೈಸೂರಿಗೆ ಆಗಮಿಸುವಂತೆ ಮಾಡಬೇಕು ಎಂದು ತಿಳಿಹೇಳಿದರು.

ಮೆಕ್ಸಿಕೊ ಪ್ರತಿನಿಧಿ ಡಾ.ಎಲಿಜಬೆತ್, ಉದ್ಯಮಿಗಳಾದ ರಾಧಾ ಕೃಷ್ಣ ಹೊಲ್ಲಾ, ಮುರಳಿ ಕೃಷ್ಣ ಅವರು, ಪ್ರವಾಸೋದ್ಯಮ, ಸಾಂಸ್ಕೃತಿಕ ಪ್ರವಾಸೋದ್ಯಮ ಹಾಗೂ ಹೋಟೆಲ್ ಉದ್ಯಮ ಕುರಿತು ಉಪನ್ಯಾಸ ನೀಡಿದರು. ಮೈಸೂರು ಖಾಸಗಿ ಬಸ್ ಮಾಲೀಕರ ಸಂಘ ಅಧ್ಯಕ್ಷ ಪೃಥ್ವಿರಾಜ್, ಸಿದ್ಧಾರ್ಥ ಸ್ಕಾಲರ್ ಅಕಾಡೆಮಿ ನಿರ್ದೇಶಕರಾದ ಮುರಳಿ ಕೃಷ್ಣ, ಡಾ. ತನುಜ್ ದೇವ್, ಹ್ಯಾಪಿನೆಸ್ ಅಕಾಡೆಮಿಯ ಶ್ವೇತಾ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಬಸ್ಯಾ : ನೋಡಿಲ್ಲಿ ಪೇಪರ್. ಲಾಂಗ್‌ಜಂಪ್‌ನಲ್ಲಿ ಚಿನ್ನದ ಪದಕ ಕಳೆದುಕೊಂಡ ಇಂಡಿಯನ್ ಅಥ್ಲೀಟ್ ಅಂತಿದೆ.

ಸಂತ : ಥೂ ದಡ್‌ಬಡ್‌ತದು... ಯಾರು ಹೇಳಿದ್ರು ಅವನಿಗೆ ಮೆಡಲ್ ಹಾಕ್ಕೊಂಡ್ ಜಂಪ್ ಮಾಡೋಕೆ!

ಮೈಸೂರು ಮಿತ್ರ

ಮಂಗಳವಾರ, 13 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

'ಕೆಲವೊಮ್ಮೆ ಜೀವನವು ನಮಗೆ ಬೇಕಾದ್ದನ್ನು ಕೊಡುವುದಿಲ್ಲ. ಹಾಗೆಂದ ಮಾತ್ರಕ್ಕೆ ನಮಗೆ ಅದರ ಅರ್ಹತೆಯಿಲ್ಲ ಎಂದಲ್ಲ, ಬಹುಶಃ ಅದಕ್ಕಿಂತಲೂ ಹೆಚ್ಚಿನದಕ್ಕೆ ಅರ್ಹತೆವುಳ್ಳವರಾಗಿದ್ದೇವೆ ಎಂದರ್ಥ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಾಸು ಬಿಡದ ತಿಮ್ಮಪ್ಪ, ಮಾತು ಬಿಡದ ಮಂಜಪ್ಪ'

ನಿಮ್ಮ ಪತ್ರಗಳು

10ಎ, 11ಆರ್ ನಗರ ಸಾರಿಗೆ ಬಸ್ ಮರು ಕಾರ್ಯಾಚರಣೆಗೊಳಿಸಿ

ಮಾನ್ಯರೆ,

ಈ ಹಿಂದೆ ಕಾರ್ಯಾಚರಣೆಗೊಳ್ಳುತ್ತಿದ್ದ ಮಾರ್ಗ ಸಂಖ್ಯೆ 10ಎ ಮತ್ತು 11ಆರ್ ಬಸ್‌ಗಳು ಕೊರೊನಾದಿಂದಾಗಿ ಸ್ಥಗಿತವಾಗಿದ್ದು, ಇನ್ನೂ ಕಾರ್ಯಾಚರಣೆ ಆರಂಭಿಸಿರುವುದಿಲ್ಲ. ಈ ಬಸ್‌ಗಳಿಂದ ರೈಲು ನಿಲ್ದಾಣ, ಬಲ್ಲಾಳ್ ವೃತ್ತ, ರಾಮಸ್ವಾಮಿ ವೃತ್ತ, ಮಹಾರಾಣಿ ಕಾಲೇಜು, ಆಕಾಶವಾಣಿ, ಒಂಟಿಕೊಪ್ಪಲು, ಜಯದೇವ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ, ಸ್ಯಾನಿಟೋರಿಯಂ, ಮೇಟಗಳ್ಳಿ ಮತ್ತು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗುತ್ತಿತ್ತು. ಅಲ್ಲದೆ ಈ ಬಸ್‌ಗಳಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಹ ಪ್ರಯಾಣಿಸುತ್ತಿದ್ದರು. ಆದರೆ ಪ್ರಯಾಣಿಕರ ಕೊರತೆಯ ನೆಪವೊಡ್ಡಿ ಈ ಬಸ್‌ಗಳನ್ನು ಇನ್ನೂ ಮರು ಕಾರ್ಯಾಚರಣೆಗೊಳಿಸಿಲ್ಲ. ಈ ಕಾರಣದಿಂದ ಜೆ.ಪಿ. ನಗರದಿಂದ ರೈಲು ನಿಲ್ದಾಣಕ್ಕೆ, ಜಯದೇವ ಆಸ್ಪತ್ರೆ ಮತ್ತು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ನೇರ ಬಸ್ ಇಲ್ಲದಂತಾಗಿದೆ. ಸಾರ್ವಜನಿಕರು ನಗರ ಬಸ್ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ನೇರ ಬಸ್ಸಿನಲ್ಲಿ ತೆರಳುವಂತಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಶಾಲಾ ಕಾಲೇಜುಗಳು ಪ್ರಾರಂಭವಾಗಲಿದ್ದು, ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗುತ್ತದೆ.

ಎರಡನೆಯದಾಗಿ ನಗರ ಬಸ್ ನಿಲ್ದಾಣವನ್ನು ಹೊರತುಪಡಿಸಿದರೆ ಯಾವ ಬಸ್ ತಂಗುದಾಣಗಳಲ್ಲಿಯೂ ಬಸ್‌ಗಳ ಆಗಮನದ ಮಾಹಿತಿ ನೀಡುವ ಐಟಿಎಸ್ ಫಲಕಗಳು ಕಾರ್ಯನಿರ್ವಹಿಸುತ್ತಿಲ್ಲ. ಹೀಗಾಗಿ ಪ್ರಯಾಣಿಕರು ಬಸ್ಸಿಗಾಗಿ ಅನಿಶ್ಚಿತತೆಯಿಂದ ಕಾಯುವಂತಾಗಿದೆ.

ಆದ ಕಾರಣ ಸಂಬಂಧಪಟ್ಟ ನಗರ ಸಾರಿಗೆ ಅಧಿಕಾರಿಗಳು ದಯಮಾಡಿ ಇತ್ತ ಗಮನಹರಿಸಿ ಆದಷ್ಟು ಶೀಘ್ರ ಮೇಲ್ಕಂಡ ಬಸ್‌ಗಳನ್ನು ಮರು ಕಾರ್ಯಾಚರಣೆಗೊಳಿಸಬೇಕು ಮತ್ತು ಎಲ್ಲಾ ಬಸ್ ತಂಗುದಾಣಗಳಲ್ಲೂ ಐಟಿಎಸ್ ಫಲಕಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

– ಸರೋಜಮ್ಮ, ನಿವೃತ್ತ ಶಿಕ್ಷಕರು, ಜೆ.ಪಿ.ನಗರ, ಮೈಸೂರು.

ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಿ

ಮಾನ್ಯರೆ,

ಮೈಸೂರಿನ ಹೊರವಲಯದ ಕೆಲವು ಪ್ರದೇಶಗಳಲ್ಲಿ ಕಳೆದ 2–3 ವರ್ಷಗಳಿಂದ ಅಕ್ರಮ ಜೂಜಾಟ ಚಟುವಟಿಕೆಗಳು ನಡೆಯುತ್ತಿವೆ. ತಡರಾತ್ರಿ ಸಮಯದಲ್ಲಿ ಈ ಚಟುವಟಿಕೆಗಳು ಕಾನೂನುಬಾಹಿರವಾಗಿ ನಡೆಯುತ್ತಿವೆ. ಇದರ ಜೊತೆಗೆ ಮಾದಕ ದ್ರವ್ಯ ಸೇವನೆ, ಕಳ್ಳತನ ಮತ್ತು ವಿವಿಧ ಅಪರಾಧ ಕೃತ್ಯಗಳು ಗಮನಾರ್ಹವಾಗಿ ಹೆಚ್ಚಳವಾಗುತ್ತಿವೆ. ಈ ವಾತಾವರಣವು ಸ್ಥಳೀಯ ನಿವಾಸಿಗಳಲ್ಲಿ ವಿಶೇಷವಾಗಿ ಮಹಿಳೆಯರು, ಮಕ್ಕಳು ಮತ್ತು ಹಿರಿಯರಲ್ಲಿ ಅಭದ್ರತೆಯ ಸ್ಪಷ್ಟ ಭಾವನೆಯನ್ನು ಸೃಷ್ಟಿಸಿದೆ.

ಇದಕ್ಕೆ ರಾಜಕೀಯ ಮತ್ತು ಆರ್ಥಿಕವಾಗಿ ಪ್ರಭಾವಶಾಲಿಗಳ ಬೆಂಬಲವೂ ಇದೆ. ಮೈಸೂರು ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಬಹುತೇಕ ದಂಧೆಗಳನ್ನು ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್ ಹತ್ತಿಕ್ಕಿದ್ದರಿಂದ ಸಮಾಜಘಾತುಕ ಶಕ್ತಿಗಳು, ಹೆಚ್.ಡಿ. ಕೋಟೆ ರಸ್ತೆ, ಬೋಗಾದಿ ರಸ್ತೆ ಹಾಗೂ ಇನ್ನಿತರೆ ಆಯಕಟ್ಟಿನ ಸ್ಥಳಗಳಲ್ಲಿ ಅಕ್ರಮ ದಂಧೆಯಲ್ಲಿ ತೊಡಗಿವೆ. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಂಡು ಇಲ್ಲಿನ ನಿವಾಸಿಗಳು ನೆಮ್ಮದಿಯಿಂದ ಜೀವಿಸಲು ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ಅನಾಮಧೇಯ, ಮೈಸೂರು.

ಪಾಕ್‌ಗೆ ಐಎಂಎಫ್ ಸಾಲ

ಮಾನ್ಯರೆ,

ಭಾರತದ ವಿರುದ್ಧ ಯುದ್ಧ ಸಾರಿರುವ ಹೊತ್ತಿನಲ್ಲೇ ಐಎಂಎಫ್., ಪಾಕಿಸ್ತಾನಕ್ಕೆ 19500 ಕೋಟಿ ರೂ. ಸಾಲ ಮಂಜೂರು ಮಾಡಿದೆ. (11.5.25ರ ವರದಿ) ರೋಗಿ ಕೇಳಿದ್ದು ಹಾಲು ಅನ್ನ ಎನ್ನುವಂತೆ ತೀವ್ರ ಹಣಕಾಸು ಬಿಕ್ಕಟ್ಟಿನಿಂದ ಬಳಲುತ್ತಿದ್ದ ಪಾಕಿಸ್ತಾನಕ್ಕೆ ಇದು ಭಾರತದ ವಿರುದ್ಧ ಶಸ್ತ್ರಾಸ್ತ್ರ ಖರೀದಿಸಲು ನೆರವಾಗಬಹುದು. ತನ್ನಿಂದ ಪಾಕ್ ಶಸ್ತ್ರಾಸ್ತ್ರ ಖರೀದಿಸಲಿ ಎಂಬ ಉದ್ದೇಶದಿಂದ ಅಮೆರಿಕಾವೇ ಸಾಲ ಮಂಜೂರು ಮಾಡಲು ಕುಮ್ಮಕ್ಕು ನೀಡಿರುವ ಸಾಧ್ಯತೆ ಇದೆ.

ಇತ್ತ ಇದರ ವಿರುದ್ಧ ಭಾರತ ಮತದಾನದಿಂದ ಹೊರಗುಳಿದಿದ್ದು, ಕಾಂಗ್ರೆಸ್ ಇದನ್ನು ಖಂಡಿಸಿದೆ. ಆದರೆ ಸಾಲ ನೀಡಬಾರದೆಂದು ಒತ್ತಾಯಿಸಿ ಸಭೆಯಲ್ಲಿ ಮತ ಚಲಾಯಿಸುವ ಅವಕಾಶ ಯಾವ ದೇಶಕ್ಕೂ ಇಲ್ಲ ಎಂದು ಬಿಜೆಪಿ ಹೇಳಿದೆ. ಜನರಿಗೆ ವಾಸ್ತವಾಂಶವನ್ನು ತಿಳಿಸಬೇಕಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಗಾಯತ್ರಿಪುರಂನಲ್ಲಿ ರಸ್ತೆ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನ ಗಾಯತ್ರಿಪುರಂ ಮೊದಲ ಹಂತದ ಮುಖ್ಯ ರಸ್ತೆ ಹಳ್ಳಕೊಳ್ಳಗಳಿಂದ ಕೂಡಿದ್ದು, ವಾಹನ ಸವಾರರು, ಸಾರ್ವಜನಿಕರು ಸುಗಮವಾಗಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಈ ರಸ್ತೆಗೆ ಡಾಂಬರೀಕರಣ ಮಾಡಿ ಸುಮಾರು ವರ್ಷಗಳೇ ಕಳೆದಿವೆ. ಇದರ ಬಗ್ಗೆ ಈ ಪ್ರದೇಶದ ಪಾಲಿಕೆ ನಿಕಟಪೂರ್ವ ಸದಸ್ಯರಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆ ಡಾಂಬರೀಕರಣ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ದೀಪಾಗೌಡ, ಗಾಯತ್ರಿಪುರಂ, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಪ್ರೀತಿ ಮಾಡಬಾರದು ಮಾಡಿದರೆ ಎಂದಿಗೂ ಬೇರ್ಪಡಬಾರದು!

ನಾವು ತುಂಬಾ ಪ್ರೀತಿಸುತ್ತಿದ್ದವರು ನಮ್ಮೊಂದಿಗಿಲ್ಲದಿದ್ದರೆ ಅವರ ಗೈರು ಹಾಜರಿಯ ಪರಿಣಾಮ ಹೇಗಿರುತ್ತದೆಂದರೆ! ಆ ವ್ಯಕ್ತಿ ನಮ್ಮೊಂದಿಗಿಲ್ಲದ ಕ್ಷಣಗಳು ನಮಗೆ ನರಕ ಎನ್ನಿಸಿಬಿಡುತ್ತವೆ. ಒಬ್ಬರ ಅನಿವಾರ್ಯತೆ ಇನ್ನೊಬ್ಬರ ಮನಸ್ಸಿನ ಮೇಲೆ ಉಂಟು ಮಾಡುವ ಈ ಗಾಢ ಪರಿಣಾಮವನ್ನು ಏನೆನ್ನುತ್ತೀರಿ? ಅನುಮಾನವೇ ಇಲ್ಲ! ಅದು ನಮ್ಮದೇ ಪ್ರೀತಿ. ಅವರ ಮೇಲಿರುವ ಈ ಪ್ರೀತಿ ಅನ್ನೋದು ಸ್ನೇಹದ ಕಾರಣಕ್ಕೋ, ಅಕ್ಕರೆ ತೋರಿದ ಅನುಭೂತಿಯ ಕಾರಣಕ್ಕೋ ವಾತ್ಸಲ್ಯದ ಕಾರಣಕ್ಕೋ ಏನೋ ಒಂದಾಗಿ ಅವರನ್ನು ಕಂಡಾಗಲೆಲ್ಲಾ ಎದೆಯಲ್ಲಿ ಪ್ರೀತಿಯ ಪಕಳೆ ಉದುರುತ್ತಿರುತ್ತದೆ. Unless ಅವರು ನಮ್ಮ ಮನಸ್ಸಿನಿಂದ ಮಾಸುವತನಕ. ಆದರೆ ಈ ಗಂಡು ಹೆಣ್ಣಿನ ನಡುವಿನ ಪರಸ್ಪರ ಪ್ರೀತಿಯಿದೆಯಲ್ಲಾ! ಅದು ಮಾತ್ರ ಎಲ್ಲಾ ಕಾಲಕ್ಕೂ ಅರ್ಥವಾಗದ, ತನ್ನ ಗುಟ್ಟು ಬಿಡದ ಲಾಜಿಕ್ಕು. ಅದು ಯಾವತ್ತಿಗೂ ತನ್ನ ಗ್ಲಾಮರ್ ಕಳೆದುಕೊಳ್ಳದೆ ಮನುಷ್ಯಲೋಕದ ಅಚ್ಚರಿಯ ಗ್ರಾಮರ್ ಆಗಿಯೇ ಉಳಿದಿದೆ. ಈ ಪದವನ್ನು ನಮ್ಮ ಬರಹಗಾರರು, ಸಿನಿಮಾದವರು, ದಾರ್ಶನಿಕರು, ಯುವಕರು–ಯುವತಿಯರು, ಮಧ್ಯವಯಸ್ಕರು, ವಯೋವೃದ್ಧರು, ಶ್ರೀಸಾಮಾನ್ಯರು ಹೀಗೆ ಎಲ್ಲರೂ ತಮಗೆ ತೋಚಿದ ಹಾಗೆ ಬರೆದರು, ತೋರಿಸಿದರು, ಬದುಕಿದರು. ಆದರೆ ಯಾರು ಎಷ್ಟೇ ಬರೆದರೂ ಪ್ರೀತಿ ಮಾತ್ರ ದೇಹ ಕಾಮನೆಯ ಅಂಗಸೌಖ್ಯದ ಹೊರತಾಗಿ ಮನಸ್ಸೆಂಬ ಬೆಳ್ಳಿ ಪರದೆಯ ಮೇಲೆ ಅವರವರ ಭಾವಕ್ಕೆ, ಅವರವರ ಕಾಣ್ಕೆಗೆ ತಕ್ಕಷ್ಟೇ ದಕ್ಕುವ ವೈಯಕ್ತಿಕ ವಿಷಯ.

ದೇಶಕ್ಕೊಂದು ಭಾಷೆ, ನಾಡಿಗೊಂದು ಧ್ವಜ ಇರುವ ಹಾಗೆ ಪ್ರೀತಿ ಮಾತ್ರ ಜಗತ್ತಿನ ಅಷ್ಟೂ ಜನರ ಅನುಭೂತಿಗೆ ಸಿಕ್ಕುವ ಭಾವ ಸಂಪತ್ತು. ಹಾಗಾಗಿಯೇ ಇಡೀ ಮಾನವ ಲೋಕ ಅವರು ಎಷ್ಟೇ ದೊಡ್ಡವರಿರಲಿ, ಚಿಕ್ಕವರಿರಲಿ ಪ್ರೀತಿಗಾಗಿ ಏನೆಲ್ಲ ಮಾಡುತ್ತಾರೆ. ಅಂಥ ಪ್ರೀತಿಯ ಹಿಂದೆ ದೊಡ್ಡದೊಂದು ಕ್ಯೂನಲ್ಲಿರುವ ನಮ್ಮ ಹದಿಹರೆಯದವರ ಕಲ್ಪನೆ ಮಾತ್ರ ಈವತ್ತು ಬದಲಾಗಿ ಹೋಗಿದೆ. ಜೀವನ ವಿಧಾನ ಬದಲಾದಂತೆ, ಊಟ ತಿಂಡಿಗಳ ಆಯ್ಕೆ ಬದಲಾದಂತೆ, ಬಟ್ಟೆಬರೆಗಳ ವೈವಿಧ್ಯತೆ ಬದಲಾದಂತೆ... am sorry ಪ್ರೀತಿ ಮಾಡೋ ಯುವ ಮನಸ್ಸುಗಳ ಕಲ್ಪನೆ ಕೂಡ ಬದಲಾಗಿ ಬಿಟ್ಟಿದೆ. ಬೇರೆಲ್ಲವೂ ಬದಲಾದರೆ ಪರವಾಗಿಲ್ಲ! ಬದಲಾದ formatನಲ್ಲಿಯೇ ಅವನ್ನು ಸ್ವೀಕರಿಸಬಹುದು. ಆದರೆ ಪ್ರೀತಿ ಹಾಗಲ್ಲ; ವಿಷಯ ಖಾಸಗಿಯೇ ನಿಜ; ಆದರೆ ಪ್ರೀತಿಸುವ ಯುವ ಮನಸ್ಸುಗಳೆರಡೂ ನಮ್ಮ ಸುತ್ತಲೇ ಬದುಕುವ ಅನಿವಾರ್ಯತೆ ಇರುವ ಕಾರಣ ನಮ್ಮ ಕಾಲದ ತರುಣ ತಲೆಮಾರಿನ ಇತರರನ್ನು ಅದು ಪ್ರಭಾವಿಸುತ್ತಿರುತ್ತದೆ. ಒಂದೋ ಸಾಮಾಜಿಕ ಜವಾಬ್ದಾರಿಯನ್ನದು ಬೆಂಬಲಿಸುತ್ತಿರುತ್ತದೆ. ಇಲ್ಲವೆ ಸಾರಾಸಗಟಾಗಿ ಧಿಕ್ಕರಿಸುತ್ತಿರುತ್ತದೆ.

ಯುವ ಮನಸ್ಸಿನ ಹೊಸ ತುಡಿತಗಳನ್ನು ಹಾಗೆ ಸುಮ್ಮನೆ ಗಮನಿಸಿ ನೋಡಿ! ನೀನಿಲ್ಲದೇ ನಾನು ಬದುಕುವುದೇ ಇಲ್ಲ, ನನಗೆ ನೀನೇ ಎಲ್ಲ!? ಎನ್ನುತ್ತಾ ಪ್ರೀತಿಯ ಪ್ರಪೋಸಲ್ ಹಿಡಿದು ನಿಂತ ಹುಡುಗ ಎಷ್ಟು ವರ್ಷದಿಂದ ಆಕೆಗೆ ಗೊತ್ತು? ಎಷ್ಟು ವರ್ಷದಿಂದ ಆಕೆಯ ಒಡನಾಟ ಮತ್ತು ಸಾಮಿಪ್ಯದಲ್ಲಿದ್ದಾನೆ? ಅಂತ ಯೋಚಿಸಿದರೆ ಎಲ್ಲೋ ಕಾಲೇಜಿಗೆ ಸೇರಿದ ಆರು ತಿಂಗಳ ಪರಿಚಯವಿರಬಹುದು! ಕಾರ್ಪೋರೇಟ್ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ ಮೊದಲ ಮೂರು ತಿಂಗಳಿನ ಕಿರುನಗೆ ಇರಬಹುದು! ಅಥವಾ ಯಾವುದೋ ಮದುವೆಯಲ್ಲೋ! ಮುಂಜಿಯಲ್ಲೋ! ಸಭೆ ಸಮಾರಂಭಗಳಲ್ಲೋ! ಕಾಲೇಜಿನ ಕ್ಯಾಂಟೀನಿನಲ್ಲೋ? ಅಕ್ಕನ ಮನೆಯ ಪಕ್ಕದಲ್ಲೋ, ಭಾವನ ಆಫೀಸಿನಲ್ಲೋ! ಬಸ್ಸಲ್ಲಿ ಓಡಾಡುವಾಗಲೋ! ಎಲ್ಲೋ ಒಂದು ಕಡೆ ಒಂದು ಸಲ ನೋಡಿರುವ ಅವನು ಆ ಕ್ಷಣದ ಪ್ರೀತಿಯ ಸೆಳೆತಕ್ಕೆ ಒಳಗಾಗುತ್ತಾನೆ.

ಜೀವನ ಪರ್ಯಂತ 'love at first sight' ಎನ್ನುವ ಮಾತೊಂದನ್ನು ಹೇಳುತ್ತಲೇ ಇರುತ್ತಾನೆ. ಆದರೆ ಅವನು ಮೊದಲು ಸೋತಿದ್ದು ಆಕೆಯ ಮಾದಕತೆಗೆ, ಅಷ್ಟರಲ್ಲೇ ಅವನು ಕೈಯಲ್ಲಿ ಪ್ರೀತಿಯ ಪ್ರಪೋಸಲ್ಲಿಡಿದು ಭಾವುಕ ಮಾತುಗಳ ಸರದಾರನಾಗಿಬಿಡುತ್ತಾನೆ. ಪ್ರೀತಿಯ ಮೋಹಕ ಬಲೆಯಲ್ಲಿ ಸಿಕ್ಕಿದ್ದೇನೆಂಬ ಉದ್ಧುದ್ದದ ಮಾತಾಡುತ್ತಿರುತ್ತಾನೆ. ಆದರೆ ಹಲವು ವರ್ಷಗಳ ಕಾಲ ಆಕೆಯ ಸಾಮೀಪ್ಯದಲ್ಲಿದ್ದು, ಮದುವೆ, ಸಂಸಾರಗಳ ಬಳಿಕ ಅದೇ ಹುಡುಗ ಆ ಮಾತು ಹೇಳಿದಿದ್ದರೆ ಆ ಮಾತು ಬೇರೆ. ಹದಿಹರೆಯದಲ್ಲಿ ಪರಸ್ಪರ ಒಬ್ಬರ ಬಗ್ಗೆ ಮತ್ತೊಬ್ಬರಿಗೆ ಹುಟ್ಟುವ ಹೆಣ್ಣು ಗಂಡಿನ ಭಿನ್ನ ಲಿಂಗಾಸಕ್ತಿಯನ್ನೇ ಕೆಲವರು ಇವತ್ತು ಪ್ರೀತಿ, ಪ್ರೇಮ ಅಂತ ಭ್ರಮಿಸುವ ಆಕರ್ಷಣೆ ಶುರುವಾಗಿದೆ. ಅದು ಭಿನ್ನ ಲಿಂಗಾಸಕ್ತಿಯೇ ಹೊರತು ಪವಿತ್ರವಾದ ಪ್ರೀತಿಯೂ ಅಲ್ಲ. ಪ್ರೇಮವೂ ಅಲ್ಲ. ಅದೊಂದು ವ್ಯಾಮೋಹ ಅಷ್ಟೆ. ಅವನ ಮಾತೆಲ್ಲವೂ ಆಕೆಗೆ ಅನ್ವರ್ಥವಾಗೋದು ಅರವತ್ತರ ನಂತರದಲ್ಲೇ! ಭಿನ್ನಲಿಂಗಾಸಕ್ತಿಯ ಸುಖಸೌಖ್ಯಗಳ ಸಮಾಪ್ತಿಯ ನಂತರವೇ! ಅಂದರೆ ಅರವತ್ತರ ನಂತರದಲ್ಲಿ ಹುಟ್ಟುವ ಭಾವ ಸಂಪತ್ತು ಪ್ರೇಮ.

ಇವತ್ತು ಮಳೆಗಾಲದ ಸಾಯಂಕಾಲಗಳಲ್ಲಿ ಆಕಾಶದ ಶೃಂಗಾರದಂತೆ ಕಾಣುವ ಕಾಮನಬಿಲ್ಲಿನಂಥಾ ಈ ಪ್ರೀತಿಗೆ ಒಲಿಯುವ ಯುವ ಹೃದಯಗಳು ಚಿಕ್ಕವರ ಕಣ್ಣಿಗೆ ಕಾಮನಬಿಲ್ಲು ಕಣ್ಮರೆಯಾದಂತೆ ಸ್ವಲ್ಪ ದಿನಗಳಲ್ಲೇ ಕಣ್ಮರೆಯಾಗುತ್ತಿವೆ. ತಾವು ಕಂಡ ಒಲವಿನ ಬಣ್ಣಕ್ಕೆ ಸುಣ್ಣ ಹಚ್ಚಿಕೊಂಡು ಬದುಕಿನ ಬಣ್ಣ ಕೆಡಿಸಿಕೊಳ್ಳುವ ಅಣ್ಣಂದಿರಂತೆ ಕಾಣುತ್ತಾರೆ. ಕಾರಣ ಇಷ್ಟೆ ಪ್ರೀತಿ ನೀನಿಲ್ಲದೆ ನಾ ಹೇಗಿರಲಿ... ಎನ್ನುತ್ತಿದ್ದ ಜೋಡಿಜೀವಗಳಲ್ಲಿ ಪ್ರೀತಿಯಿದ್ದ ಜಾಗದಲ್ಲಿ ಸಣ್ಣಪುಟ್ಟದ್ದಕ್ಕೆಲ್ಲಾ ಅಸಹನೆ, ಹತಾಶೆ, ಪರಸ್ಪರ ದೂಷಣೆಗಳು ಶುರುವಾಗಿ ಪರಸ್ಪರ ದೂರವಾಗುವ ಮಾತುಗಳು ಹುಟ್ಟುತ್ತಿರುತ್ತವೆ. ಆಗ ಶುರುವಾಗುತ್ತೆ ನೋಡಿ ವಿಷ ಕುಡಿದು ಸಾಯುವ ಹೆಣ್ಣು ಮಗಳ ಕಥೆ, ಆತ್ಮಹತ್ಯೆಗೆ ಶರಣಾದ ಯುವಕನ ಅಂತ್ಯ, ಪ್ರೀತಿಸಿ ಮದುವೆಯಾಗಿ ಪ್ರೀತಿಯ ನೊಗಕ್ಕೆ ಹೆಗಲು ಕೊಟ್ಟ ಇಬ್ಬರೂ ನ್ಯಾಯಾಲಯದ ಅಂಗಳದಲ್ಲಿ ವಿಚ್ಛೇದನಕ್ಕಾಗಿ ಅರ್ಜಿ ಹಿಡಿದು ನಿಂತ ಅಲ್ಪಕಾಲದ ದಾಂಪತ್ಯ ಲೆಕ್ಕಾಚಾರ. ಹೀಗೆ ಒಂದೇ ಎರಡೇ ಹಾಗಾದರೆ ಇಲ್ಲಿಯವರೆಗೆ ಪ್ರೀತಿಯ ಹೆಸರಿನಲ್ಲಿ ಇವರು ಪ್ರೀತಿಸುತ್ತಿದ್ದುದಾದರೂ ಏನನ್ನು ಎನ್ನುವುದು ಅವರಿಗೇ ಸ್ಪಷ್ಟವಾಗಿ ಬಿಟ್ಟಿರುತ್ತದೆ!

ಹೀರೋಯಿಸಂನ ಬೆನ್ನು ಹತ್ತಿದ ಹುಡುಗಿ ಕಡೆಗೆ ತನ್ನ ಪೆದ್ದುತನಕ್ಕೆ ತಾನು ಕೊಟ್ಟುಕೊಳ್ಳುವ ಸಚಿತ್ರ ವಿವರಣೆಯ ಹೆಸರೇ ಪ್ರೀತಿ. ಇತ್ತ ಸುಂದರಿಯ ಮಾದಕತೆಗೆ ಮನಸೋತ ಹುಡುಗ ತನ್ನ ಆಕರ್ಷಣೆಗೆ ತಾನು ಕೊಟ್ಟುಕೊಳ್ಳುವ ಸಮಜಾಯಿಷಿಯ ಹೆಸರೇ ಪ್ರೀತಿ. ತಮಾಷೆಯೆಂದರೆ ಅವರಿಬ್ಬರೂ ಪರಸ್ಪರ ಪ್ರೀತಿಸುವಷ್ಟೂ ದಿನಗಳು ಪ್ರೇಮಿಗಳೇ ನಿಜ. ಅವರು ಗಂಡ–ಹೆಂಡತಿಯರಾದ ಮೇಲೂ ಆ ಪ್ರೀತಿ ವೈಯಕ್ತಿಕ ಅಭೀಪ್ಸೆಯ ಜವಾಬ್ದಾರಿಯನ್ನೂ ಹೊರಬೇಕು. ಪ್ರೀತಿಸುತ್ತಿದ್ದಾಗ ಬೆಳಗಿನಿಂದ ಸಂಜೆಯವರೆಗೂ ಹೊಟ್ಟೆಯ ಹಸಿವು ಗೊತ್ತಾಗದ ಹುಡುಗಿಗೆ, ಈಗ ಹಸಿವು ಗೊತ್ತಾಗುತ್ತೆ. ಹುಡುಗನಿಗೆ ತರಕಾರಿಯ ರೇಟು, ಟೊಮೊಟೊ ಬೆಲೆ ಜಾಸ್ತಿಯಾಗಿರೋದು ಗೊತ್ತಾಗುತ್ತೆ. ಅಕ್ಕಿ ಬೇಳೆಯ ಧಾರಣೆ ಕಣ್ಣಿಗೆ ಕಾಣಿಸುತ್ತೆ. ಇಷ್ಟಾಗಿದ್ದರೆ ತೊಂದರೆ ಇಲ್ಲ, ಪರವಾಗಿಲ್ಲ ಬಿಡಿ! ಹುಡುಗ ಸಂಸಾರ ಕಟ್ಟಿಕೊಳ್ಳುತ್ತಾನೆ. ಆದರೆ ಏನೇನೋ ಕಾರಣಗಳಿಗೆ ಶುರುವಾಗುವ ಸಿಡಿಮಿಡಿ, ಧಾವಂತ, ಅಸಹನೆ, ಆತಂಕಗಳು ಚಿಕ್ಕಪುಟ್ಟದ್ದಕ್ಕೆಲ್ಲ ಸ್ಫೋಟಗೊಳ್ಳುತ್ತವಲ್ಲ! ಅದಕ್ಕೇನು ಹೇಳುತ್ತೀರಿ!

ಪ್ರಣಯ ಕಾಲದ ಈ ಮೊದಲಿನ ಸಹನೆಗಳು ದಾಂಪತ್ಯದಲ್ಲಿ ಕೈಕೊಡುತ್ತವೆ. ಎಲ್ಲಿಯವರೆಗೆ ಎಂದರೆ ಪ್ರೇಮಿಗಳಾಗಿದ್ದವರು ಮದುವೆಯಾದ ಅಲ್ಪ ಕಾಲದಲ್ಲೇ ವಿಚ್ಛೇದನದವರೆಗೂ ಬಂದುಬಿಡುತ್ತಾರೆ. ಖಾಸಗಿ ಪ್ರೀತಿಯ ವಿಷಯ ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕ್ರಿಯೆ ಕಾಣಿಸೋದೇ ಆಗ! ವಿಚ್ಛೇದನಗಳು ಸಂಭವಿಸಲೇಬಾರದೆಂಬುದು ನನ್ನ ಮಾತಲ್ಲ. ನಮ್ಮ ಕಾನೂನಿನಲ್ಲಿ ಅದಕ್ಕೆ ಅವಕಾಶವಿದೆ. ಆದರೆ ಈ ಪ್ರೀತಿ ಅನ್ನೋದು ಜೀವ– ಜೀವನದ ಪರಿಧಿಯಲ್ಲಿ ನಡೆಯಬೇಕು. ಎಲ್ಲವೂ ಕಾನೂನು, ಆಧುನಿಕವಾದ ಅನುಕೂಲಗಳನ್ನೇ ಅವಲಂಬಿಸಿ ಅದು ಮಾತಾಡಬಾರದು. ಹಾಗೆ ಮಾತನಾಡುವುದೇ ಆದರೆ ಇವತ್ತು ಹದಿಹರೆಯದವರ ಕೈಯ್ಯಲ್ಲಿ ಉದ್ಯೋಗವಿದೆ. ಕೈತುಂಬಾ ಸಂಬಳವಿದೆ ಎಂಬ ಕಾರಣಕ್ಕೆ ಚಿಕ್ಕ ಪುಟ್ಟ ಕಾರಣಗಳನ್ನೇ ಮುಂದು ಮಾಡಿ ಮನಸ್ಸುಗಳನ್ನು ಮುರಿದುಕೊಳ್ಳುತ್ತಿರುವ ಈ ವಿಚ್ಛೇದನದ ಪರಿ ಮಾತ್ರ ದುರಂತ. ಕೆಲಸಕ್ಕಾಗಿ ಕಂಪನಿಗಳನ್ನು ಬದಲಿಸಿದ ಹಾಗೆ ಜೊತೆಯಾದ ವ್ಯಕ್ತಿಗಳನ್ನೇ ಬದಲಿಸುವ ಗಟ್ಟಿ ನಿರ್ಧಾರಗಳನ್ನು ನೋಡಿದರೆ ಸಂಬಂಧಗಳೂ ಕೂಡ ವ್ಯವಹಾರದಂತೆ ಕಾಣಿಸುತ್ತವೆ. ಆರಂಭದಲ್ಲಿ 'ನೀನಿಲ್ಲದೆ ನಾನಿಲ್ಲ' ಎನ್ನುವ ಮಾತಿನಿಂದ ಹುಟ್ಟಿದ ಪ್ರೀತಿ, ನಂತರ ಆಂತರ್ಯದಲ್ಲಿ ಬಲಿಯಬೇಕಿತ್ತು. ಹಾಗೆ ಬಲಿಯುವ ವೇಳೆಗೆ ದುರದೃಷ್ಟವಶಾತ್ ದೇಹಾಕರ್ಷಣೆಯ ಮಜಲಿನ ವಿರುದ್ಧ ದಿಕ್ಕಿನಲ್ಲಿ ಅವರು ನಡೆಯುತ್ತಿರುತ್ತಾರೆ. ಅಸೂಯೆ, ಅಹಂಗಳು ಅಲ್ಲಿ ಕೆಲಸ ಮಾಡುತ್ತಿರುತ್ತವೆ. ಹೊಂದಾಣಿಕೆ ಅನ್ನೋದು ಮರೀಚಿಕೆಯಾಗಿರುತ್ತವೆ. ಅಸಹನೆಯಿಂದ ಮನಸ್ಸು ಕತ್ತಲಾದಾಗ ಪ್ರೀತಿಯೇ ಅಲ್ಲಿ ಬೆಳಕಾಗಬೇಕಿತ್ತು. ಆದರೆ ಅದು ಇನ್ನು ವ್ಯಾಮೋಹದ ವರ್ತುಲದೊಳಗೇ ಸುತ್ತುತ್ತಿರುತ್ತದೆ.

ಈ ಕಾರಣಕ್ಕೆ ನಮ್ಮ ಕಾಲದಲ್ಲಿ ಮುಖ ಮುಚ್ಚಿಕೊಂಡ ಅಸಂಖ್ಯಾತ ದಾಂಪತ್ಯಗಳು ಅನಿವಾರ್ಯತೆಯಿಂದ ಹೆಜ್ಜೆ ಹಾಕುತ್ತವೆ. ಇನ್ನೂ ಮದುವೆಯಾಗದ, ಪ್ರೀತಿಯ ಹೊಸ್ತಿಲಲ್ಲಿ ನಿಂತ ಯುವ ಹೃದಯಗಳು ಟೈಂಪಾಸಿಗೆ ಪ್ರೀತಿಸಬಾರದು. ಆತುರದ ನಿರ್ಧಾರದಲ್ಲಿ ಜೀವನ ಕಟ್ಟಿಕೊಳ್ಳಬಾರದು. ಒಡೆದ ದೋಣಿಯ ಮೇಲಿನ ಯಾನ ಯಾವತ್ತಿಗೂ ದಾರಿ ತಪ್ಪುತ್ತದೆ. ಪ್ರೀತಿಸಿ ಜೀವಿಸುತ್ತಿರುವ ನಿಮ್ಮ ಪರಿಚಿತರು ಅನೇಕರು ನಿಮಗೆ ಸಿಕ್ಕುತ್ತಾರೆ ದಯವಿಟ್ಟು ಅವರನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸಿ. ಅವರ ಪ್ರೀತಿಯ ಯಶಸ್ಸಿನ ಕಾರಣ ಕೇಳಿ! ಸಮಸ್ಯೆಗಳ ಪ್ರವರ ಕೇಳಿ! ಅವರ ಹೊಂದಾಣಿಕೆಯ ಮರ್ಮ ಅರಿತುಕೊಳ್ಳಿ! ನಿಮ್ಮದೇ ಸ್ವಂತ ಬದುಕನ್ನು ನಿಮ್ಮ ಪ್ರೊಫೆಷನ್ನಿನ ಪ್ರಮೋಷನ್ ನೋಡಿದ ಹಾಗೆ ನೋಡಬೇಡಿ. ನಿಮ್ಮ ಮನಸ್ಸಿನ ಖಾಲಿತನವನ್ನು ತುಂಬಿಕೊಳ್ಳಲು ಅವಳು ಬರುವವರೆಗೆ ನೀವು ಕಾದಿರುವುದು ನಿಜವೇ ಆದರೆ; ನಿಮ್ಮ ಮದುವೆ ಆತ್ಮಾನುಸಂಧಾನ ವಾಗಬೇಕೇ ವಿನಃ ನ್ಯಾಯಾಲಯಗಳಲ್ಲಿ ಕೌನ್ಸಿಲಿಂಗ್ ಟೇಬಲ್ಲುಗಳಾ ಗೋದು ಬೇಡ. ಯಾಕೆಂದರೆ ನಿಮ್ಮ ಮದುವೆ ಕೇವಲ ನಿಮ್ಮಿಬ್ಬರ ವೈಯಕ್ತಿಕ ವಿಷಯವಲ್ಲ. ಅದಕ್ಕೊಂದು ಸಾಮಾಜಿಕ ಜವಾಬ್ದಾರಿ ಇದೆ.

ಪ್ರೀತಿಸಿ ಮದುವೆಯಾಗಿರುತ್ತೀರಿ. ವರದಕ್ಷಿಣೆ ಇರುವುದಿಲ್ಲ. ಜಾತಿಯ ಎಲ್ಲೆಯನ್ನು ಮೀರಿರುತ್ತೀರಿ. ಬೆನ್ನಿಗೆ ಅಪ್ಪ ಅಮ್ಮನ ಬೆಂಬಲಗಳಿರುವುದಿಲ್ಲ. ನಿಮ್ಮಿಬ್ಬರನ್ನೂ ಜೊತೆ ಮಾಡುವವರೆಗೆ ನಾವಿದ್ದೇವೆ ಹೆದರಬೇಡಿ ಎನ್ನುವ ಓರಗೆಯ ಮಿತ್ರರ ಸಹಾಯ ಸಹಕಾರಗಳಿರುತ್ತವೆ. ನಾವು ಉಬ್ಬಿ ಹೋಗುತ್ತೇವೆ. ನಂತರದಲ್ಲಿ ಅವರೂ ಇರುವುದಿಲ್ಲ. ನಿಮ್ಮ ಜಗಳಗಳನ್ನು ಬಿಡಿಸಲು ನಿಮಗೆ ಸಂಧಾನಕಾರರೂ ಇರುವುದಿಲ್ಲ. ಸಂಬಳದ ಕಾರಣಕ್ಕೆ, ಮಗುವಿನ ಕಾರಣಕ್ಕೆ, ಇನ್ಯಾರ ಜೊತೆಯಲ್ಲೋ ಕೂತು ಕಾಫಿ ಕುಡಿದ ಕಾರಣಕ್ಕೆ, ಹೀಗೆ ಒಂದಲ್ಲ ಒಂದು ಸಣ್ಣಪುಟ್ಟ ಕಾರಣಕ್ಕೆ ಜಗಳ ಮಾಡಿಕೊಂಡು ಎದ್ದು ಹೊರಟು ಬಿಡುವ ಆತುರದ ನಿರ್ಧಾರಗಳನ್ನು ತಡೆಯುವ ಶಕ್ತಿ ನಿಮ್ಮ ಪ್ರೀತಿಗಿರುವುದಿಲ್ಲ. ರೀಸನ್ ಇಲ್ಲದೆ ಪ್ರೀತಿಯ season ಸೃಷ್ಟಿಸಿಕೊಂಡರೆ ಅಪಾಯದ ಅಂಚಿನಲ್ಲೇ ನೀವಿರುತ್ತೀರಿ ಎಂಬುದಂತೂ ಸತ್ಯ.


ದುಡಿದ ಹಣವೆಲ್ಲಾ ಕೌನ್ಸಿಲ್ ಸೆಂಟರ್‌ಗಳ ಪಾಲಾಗುತ್ತದೆ. ಅಪ್ಪ ಅಮ್ಮ ನೋಡಿ ಮಾಡಿದ ಮದುವೆಗಳೇ ಸರಿ ಎಂದು ಯಾರೂ ಹೇಳುವುದಿಲ್ಲ. ಅಲ್ಲಿಯೂ ಇಂಥದೇ ಸಾವಿರ ಬಿರುಕುಗಳಿರುತ್ತವೆ. ಆದರೆ ಆ ಬಿರುಕುಗಳನ್ನು ಮುಚ್ಚಲು ಅಲ್ಲಿ ನಿಮಗೆ ಜನ ಇರುತ್ತಾರೆ. ಇಲ್ಲಿ ಜನ ಇರುವುದಿಲ್ಲ ಕೇವಲ ಮನಸ್ಸಿರುತ್ತದೆ. ಅಂಥ ಮನಸ್ಸನ್ನು ಆಯ್ಕೆ ಮಾಡಿಕೊಳ್ಳುವಾಗ ನಿಮ್ಮ ಸ್ವಭಾವಗಳ ಬಗೆಗೆ ನಿಮ್ಮ ಹಿನ್ನೆಲೆಗಳ ಬಗೆಗೆ ಪರಿಚಯ ಮಾಡಿಕೊಡಿ. ಪರಸ್ಪರ ಮಾತಾಡಿ ಎಲ್ಲವನ್ನೂ ಕ್ಲಿಯರ್ ಮಾಡಿಕೊಳ್ಳಿ. ಸಾಧ್ಯವಾದಷ್ಟು ಗೆಳೆಯರ ಜೊತೆಗಿದ್ದಾಗ ಹೆಂಡತಿಯ ಬಗ್ಗೆ ಕಂಪ್ಲೆಂಟ್ ಹೇಳಬೇಡಿ. ಈ ಮಾತು ಆಕೆಗೂ ಅನ್ವಯಿಸುತ್ತದೆ. ಹತ್ತಿಪ್ಪತ್ತು ವರ್ಷ ಕೌಟುಂಬಿಕವಾಗಿ ಒಡನಾಡಿದವರೊಂದಿಗೆ ಒಂದು ಚಿಕ್ಕ ಸ್ನೇಹ ಬೆಳೆಸಿಕೊಳ್ಳಿ, ಎಲ್ಲವನ್ನೂ, ಎಲ್ಲರನ್ನೂ ಬಿಟ್ಟು ನಿಮ್ಮನ್ನೇ ನಂಬಿ ಜೊತೆಯಾದ ಆಕೆಯ ಆರಂಭದ ಮುಗುಳುನಗೆಯನ್ನೊಮ್ಮೆ ನೆನಪಿಸಿಕೊಳ್ಳಿ. ಅಸಹನೆ, ಸಿಡಿಮಿಡಿ, ಅನುಮಾನಗಳ ಬೆಂಕಿಗೆ ತುಪ್ಪ ಸುರಿಯಬೇಡಿ. ಸುಖೀದಾಂಪತ್ಯದ ಸಖೀಗೀತದ ಹೆದ್ದಾರಿಯಲ್ಲಿ Walk together, sleep together, live together–ಎಂಬ ಮಾತಿನಂತೆ ಜೊತೆಯಲ್ಲೇ ಹೆಜ್ಜೆ ಹಾಕಿಬಿಡಿ. ಚಿಕ್ಕದೊಂದು ಸಿಲ್ವರ್ ಜುಬಿಲಿ ಆಚರಿಸಿಕೊಂಡ ನಿಮ್ಮ ದಾಂಪತ್ಯದ ಇಪ್ಪತ್ತೈದನೇ ವಸಂತದಲ್ಲಿ ನೀವೇ ನಿಮ್ಮ ಮಕ್ಕಳಿಗೊಂದು ಪ್ರೀತಿಯ ಸಂಪುಟವಾಗಿ ಕಾಣುತ್ತೀರಿ. ನಿಮ್ಮ ಮಕ್ಕಳ ಕೈಯ್ಯಲ್ಲಿ ಪುಟ್ಟ ನೋಟ್ಸಿನ ಹಾಗೆ ನೀವೇ ಬಿಚ್ಚಿಟ್ಟ ಪ್ರೀತಿಯ ಪುಟ ತೆರೆಯುತ್ತದೆ. ಅಸಹನೆಯನ್ನೇ ಸಹನೆಯನ್ನಾಗಿಸಿಕೊಂಡು, ಬದುಕನ್ನೇ ಅರಗಿಸಿಕೊಂಡ ನಿಮ್ಮ ಆ ಪುಟದಲ್ಲಿ ನಾಲ್ಕು ಸಾಲುಗಳಿರುತ್ತವೆ, ಅದೇನು ಗೊತ್ತ? ಪ್ರೀತಿ ಅನ್ನೋ ವಿಷಯ ಖಾಸಗೀಯದೇ ಆದರೂ ಒಟ್ಟಾಗಿ ಬಾಳಿದಾಗ ನಾವೇ ಕಟ್ಟಿಕೊಂಡ ಸಮಾಜಕ್ಕೆ ಅದು ಜವಾಬ್ದಾರಿಯ ಸಂದೇಶವೂ ಆಗಿರುತ್ತದೆ. ವೈಯಕ್ತಿಕ ಸಂತೋಷವೂ ಹುಟ್ಟುತ್ತದೆ.

ಬಿಡುವಾಗಿದ್ದಾಗ ನಿಮ್ಮ ಕಂಪನಿ ಕಚೇರಿಯಲ್ಲೋ, ನಿಮ್ಮ ಕಾರಿನಲ್ಲೋ ಅಥವಾ ನಿಮ್ಮ ಮೊಬೈಲಿನ ಆಡಿಯೋ ಆಪ್ಪನ್ನಿನಲ್ಲೋ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ....

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನನಗದೆ ಕೋಟಿ ರೂಪಾಯಿ
ಹೆಂಡತಿಯೊಬ್ಬಳು ಹತ್ತಿರವಿದ್ದರೆ
ನಾನು ಒಬ್ಬ ಸಿಪಾಯಿ!

ಎರಡು ಸಾಲು ಕೇಳಿಕೊಂಡು ಮನೆಗೆ ಹೋಗಿ.

ಪ್ರೀತಿಯೊಂದಿಗೆ ಬಾಳಿರದಿದ್ದರೂ ಚಿಂತೆಯಿಲ್ಲ. ಬಾಳಿನಲ್ಲಾದರೂ ಪ್ರೀತಿಯಿರಲಿ ಎಂಬುದು ದೊಡ್ಡವರ ಹಾರೈಕೆ. ಹೀಗೆ ಕೂಡಿ ಬಾಳಿದರೆ ಸಾಕು! ವೈಯಕ್ತಿಕ ವಿಷಯವಾದ ಪ್ರೀತಿ ಕೂಡ ಸಾಮಾಜಿಕ ಜವಾಬ್ದಾರಿ ಆಗುತ್ತದೆ. ಕುಟುಂಬಕ್ಕೆ ದಿನದ ಮುಂಜಾನೆಯಾಗುತ್ತದೆ. ಲವ್ವಿಗೆ ಲೈಸೆನ್ಸಿಲ್ಲ; ನಿಜ ಆದರೆ ದಾಂಪತ್ಯಕ್ಕೆ ಪರ್ಮಿಟ್ಟಿದೆ ಏನಂತೀರಿ?



> “ಪ್ರೀತಿಸಿ ಮದುವೆಯಾಗಿರುತ್ತೀರಿ. ವರದಕ್ಷಿಣೆ ಇರುವುದಿಲ್ಲ. ಜಾತಿಯ ಎಲ್ಲೆಯನ್ನು ಮೀರಿರುತ್ತೀರಿ. ಬೆನ್ನಿಗೆ ಅಪ್ಪ–ಅಮ್ಮನ ಬೆಂಬಲಗಳಿರುವುದಿಲ್ಲ. ನಿಮ್ಮಿಬ್ಬರನ್ನೂ ಜೊತೆ ಮಾಡುವವರೆಗೆ ನಾವಿದ್ದೇವೆ ಹೆದರಬೇಡಿ ಎನ್ನುವ ಓರಗೆಯ ಮಿತ್ರರ ಸಹಾಯ ಸಹಕಾರಗಳಿರುತ್ತವೆ. ನಾವು ಉಬ್ಬಿ ಹೋಗುತ್ತೇವೆ. ನಂತರದಲ್ಲಿ ಅವರೂ ಇರುವುದಿಲ್ಲ. ನಿಮ್ಮ ಜಗಳಗಳನ್ನು ಬಿಡಿಸಲು ನಿಮಗೆ ಸಂಧಾನಕಾರರೂ ಇರುವುದಿಲ್ಲ. ಸಂಬಳದ ಕಾರಣಕ್ಕೆ, ಮಗುವಿನ ಕಾರಣಕ್ಕೆ, ಇನ್ಯಾರ ಜೊತೆಯಲ್ಲೋ ಕೂತು ಕಾಫಿ ಕುಡಿದ ಕಾರಣಕ್ಕೆ, ಹೀಗೆ ಒಂದಲ್ಲ ಒಂದು ಸಣ್ಣಪುಟ್ಟ ಕಾರಣಕ್ಕೆ ಜಗಳ ಮಾಡಿಕೊಂಡು ಎದ್ದು ಹೊರಟು ಬಿಡುವ ಆತುರದ ನಿರ್ಧಾರಗಳನ್ನು ತಡೆಯುವ ಶಕ್ತಿ ನಿಮ್ಮ ಪ್ರೀತಿಗಿರುವುದಿಲ್ಲ. ರೀಸನ್ ಇಲ್ಲದೆ ಪ್ರೀತಿಯ season ಸೃಷ್ಟಿಸಿಕೊಂಡರೆ ಅಪಾಯದ ಅಂಚಿನಲ್ಲೇ ನೀವಿರುತ್ತೀರಿ ಎಂಬುದಂತೂ ಸತ್ಯ

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಮೇ 20ಕ್ಕೆ ಎರಡು ವರ್ಷ


ಅದ್ದೂರಿ ಸಂಭ್ರಮಾಚರಣೆ ವಿಚಾರದಲ್ಲಿ ಸಿಎಂ–ಡಿಸಿಎಂ ನಡುವೆ ಗೊಂದಲ

■ ಭಾರತ–ಪಾಕ್ ಉದ್ವಿಗ್ನ ಪರಿಸ್ಥಿತಿಯಲ್ಲಿ ಸಂಭ್ರಮಾಚರಣೆ ಮುಂದೂಡಿಕೆ: ಸಿಎಂ ■ ಕದನ ವಿರಾಮ ಘೋಷಣೆ ಆಗಿರುವುದರಿಂದ ಸಮಾವೇಶವನ್ನು ನಿಗದಿಯಂತೆ ಮಾಡ್ತೇವೆ: ಡಿಸಿಎಂ


ಬೆಂಗಳೂರು, ಮೇ 12(ಕೆಎಂಶಿ)– ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತ ಮೇ 20ಕ್ಕೆ ಎರಡು ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಗೊಂದಲ ನಿರ್ಮಾಣವಾಗಿದೆ.

ಭಾರತ–ಪಾಕಿಸ್ತಾನ ನಡುವಿನ ಉದ್ವಿಗ್ನತೆ ಹಿನ್ನೆಲೆಯಲ್ಲಿ ಮೇ 20ರಂದು ಬಳ್ಳಾರಿಯ ಹೊಸಪೇಟೆಯಲ್ಲಿ ನಡೆಯಬೇಕಿದ್ದ ಸಂಭ್ರಮಾಚರಣೆ ಸಮಾವೇಶ ಮುಂದೂಡಲ್ಪಟ್ಟಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಗಡಿಯಲ್ಲಿನ ಉದ್ವಿಗ್ನ ಪರಿಸ್ಥಿತಿಯಿಂದಾಗಿ ಎರಡನೇ ವರ್ಷಾಚರಣೆ ಸಮಾರಂಭ ಮುಂದೂಡಲು ಆಲೋಚಿಸಲಾಗಿತ್ತು ಆದರೆ, ಇದೀಗ ಅಂದೇ ಸಮಾವೇಶ ನಡೆಸುವುದಾಗಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದ್ದಾರೆ.



ಸಿದ್ದರಾಮಯ್ಯ



ಡಿ.ಕೆ.ಶಿವಕುಮಾರ್

ಹೊಸಪೇಟೆಯಲ್ಲಿ ನಡೆಯಬೇಕಿದ್ದ ಸಂಭ್ರಮಾಚರಣೆಯನ್ನು ತಾತ್ಕಾಲಿಕವಾಗಿ ಮುಂದೂಡಿದ್ದೇವೆ, ಹೊಸ ದಿನಾಂಕ ಪ್ರಕಟಿಸುವುದಾಗಿ ಮುಖ್ಯಮಂತ್ರಿ ಅವರು ಸುದ್ದಿಗಾರರಿಗೆ ಪ್ರತ್ಯೇಕವಾಗಿ ತಿಳಿಸಿದ್ದಾರೆ.

ಭಾರತ–ಪಾಕ್ ಯುದ್ಧ ಭೀತಿ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ಬೇಡ ಎಂದು ಕಳೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡಿರುವುದಲ್ಲದೆ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಹಿತಿಯನ್ನೂ ರವಾನಿಸಿದ್ದೇವೆ.

ರಾಹುಲ್ ಮತ್ತು ಖರ್ಗೆ ಮುಂದಿನ ದಿನಗಳಲ್ಲಿ ತಿಳಿಸುವ ದಿನಾಂಕದಂದು ಸರ್ಕಾರದ ಸಂಭ್ರಮಾಚರಣೆ ನಡೆಸಲಾಗುವುದು. ರಾಜ್ಯದಲ್ಲಿ ಪಕ್ಷದ ಉಸ್ತುವಾರಿ ವಹಿಸಿರುವ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ಖರ್ಗೆ ಮತ್ತು ರಾಹುಲ್ ಅವರಿಂದ ದಿನಾಂಕ ಪಡೆದು ಪ್ರಕಟಿಸಲಿದ್ದಾರೆ ಎಂದರು.

ನಿಗದಿಯಂತೆ ಮಾಡ್ತೇವೆ : ಇತ್ತ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ ನಡೆಯುತ್ತಿದೆ. ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಯಂತೆ ಐದು ಲಕ್ಷ ಪಟ್ಟಾ ಖಾತೆ ಹಂಚಿಕೆ ಮಾಡಲಾಗುತ್ತಿದೆ. ಇದು ಸರ್ಕಾರದ ಸಂಭ್ರಮಾಚರಣೆ ಮಾತ್ರವಲ್ಲ. ಇಡೀ ರಾಜ್ಯದ ಜನ ಸಂಭ್ರಮಿಸುವ ಕ್ಷಣ ಎಂದರು.

ಗಡಿಯಲ್ಲಿನ ಉದ್ವಿಗ್ನ ಪರಿಸ್ಥಿತಿ ಹಿನ್ನೆಲೆಯಲ್ಲಿ ಸಂಭ್ರಮ ಮುಂದೂಡಲು ಆಲೋಚಿಸಿದ್ದೆವು. ಆದರೆ, ಈಗ ಕದನ ವಿರಾಮ ಘೋಷಣೆಯಾಗಿದ್ದು, ಕಾರ್ಯಕ್ರಮ ನಡೆಸಲು ನಿರ್ಧರಿಸಿದ್ದೇವೆ.

ಐದೂ ಜಿಲ್ಲೆಗಳ ಉಸ್ತುವಾರಿ ಸಚಿವರು, ಶಾಸಕರು ಹಾಗೂ ವಿಧಾನಸಭಾ ಕ್ಷೇತ್ರ ಮಟ್ಟದ ಕಾರ್ಯಕರ್ತರು, ಪದಾಧಿಕಾರಿಗಳಿಗೆ ಈ ಸಂಬಂಧ ಸಭೆ ನಡೆಸಲು ತಿಳಿಸಿದ್ದೇವೆ. ಭಾರತ–ಪಾಕ್ ಕದನ ವಿರಾಮ ಬೆನ್ನಲ್ಲೇ ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿ ಹೇಳಿಕೆ ವೈರಲ್ ಆಗುತ್ತಿದ್ದು, ಕೇಂದ್ರ ಸರ್ಕಾರದ ವಿರುದ್ಧ ಟೀಕೆ ವಿಚಾರವಾಗಿ ಪ್ರತಿಕ್ರಿಯಿಸುವುದಿಲ್ಲ. ಈ ಬಗ್ಗೆ ಪಕ್ಷದ ರಾಷ್ಟ್ರೀಯ ನಾಯಕರು ನಿಲುವು ತಿಳಿಸಲಿದ್ದಾರೆ ಎಂದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷಗಳು ಭರ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಬೃಹತ್ ಪ್ರಮಾಣದಲ್ಲಿ ಸಂಭ್ರಮಾಚರಣೆ ನಡೆಸಲು ಅವರ ಆಪ್ತ ಸಚಿವರು ದೊಡ್ಡ ಯೋಜನೆಗಳನ್ನೇ ರೂಪಿಸಿದ್ದಾರೆ.


ವಿಜಯನಗರ ಉಸ್ತುವಾರಿ ಸಚಿವರೂ ಆಗಿರುವ ವಸತಿ ಸಚಿವ ಜಮೀರ್ ಅಹಮದ್ ಖಾನ್ ಈಗಾಗಲೇ ಜಿಲ್ಲಾಮಟ್ಟದ ಎರಡು ಸಭೆಗಳನ್ನು ನಡೆಸಿ ಪೂರ್ವ ಸಿದ್ಧತೆ ಮಾಡಿದ್ದಾರೆ.

ಅಲ್ಲದೆ, ವಿಜಯನಗರ ಗಡಿ ಭಾಗದ ಜಿಲ್ಲೆಗಳನ್ನು ಪ್ರತಿನಿಧಿಸುವ ಪಕ್ಷದ ಸಂಸದರು ಮತ್ತು ಶಾಸಕರ ಸಭೆ ನಡೆಸಿರುವ ಜಮೀರ್, ಕರ್ನಾಟಕದಲ್ಲಿ ಹಿಂದೆಂದೂ ಕಂಡರಿಯದ ಸಮಾವೇಶ ಇದಾಗಬೇಕೆಂದು ಕಾರ್ಯಕ್ರಮ ರೂಪಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಯುದ್ಧ ರೊಮ್ಯಾಂಟಿಕ್, ಬಾಲಿವುಡ್ ಸಿನಿಮಾವಲ್ಲ

ಕದನ ವಿರಾಮ ಒಪ್ಪಂದ ಪ್ರಶ್ನಿಸುವವರಿಗೆ ಮಾಜಿ ಸೇನಾ ಮುಖ್ಯಸ್ಥರ ಖಡಕ್ ಸಂದೇಶ!



ಜನರಲ್ ಮನೋಜ್ ನರವಾಣೆ

ಪುಣೆ: ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮ ಒಪ್ಪಂದವನ್ನು ಜನರು ಪ್ರಶ್ನಿಸುತ್ತಿರುವುದರ ಬಗ್ಗೆ ಭಾರತೀಯ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಮನೋಜ್ ನರವಾಣೆ ತೀವ್ರ ಟೀಕಾ ಪ್ರಹಾರ ನಡೆಸಿದ್ದಾರೆ.

ಯುದ್ಧವು ರೋಮ್ಯಾಂಟಿಕ್ ಅಥವಾ ಬಾಲಿವುಡ್ ಸಿನಿಮಾವಲ್ಲ ಎಂದಿದ್ದಾರೆ. ಭಾನುವಾರ ಪುಣೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಜನರಲ್ ನರವಾಣೆ, ಆದೇಶ ನೀಡಿದರೆ ಯುದ್ಧಕ್ಕೆ ಹೋಗುತ್ತೇನೆ. ಆದರೆ ರಾಜತಾಂತ್ರಿಕತೆಯು ನನ್ನ ಮೊದಲ ಆಯ್ಕೆಯಾಗಿದೆ ಎಂದು ಹೇಳಿದರು.

ಇದು ಮಿಲಿಟರಿ ಕಾರ್ಯಾಚರಣೆ ನಿಲುಗಡೆ ಮಾತ್ರ: ಆಪರೇಷನ್ ಸಿಂಧೂರದಿಂದ ಹಿಡಿದು ಭಾರತೀಯ ಸಶಸ್ತ್ರ ಪಡೆಗಳು ಪಾಕ್ ಆಕ್ರಮಿತ ಪ್ರದೇಶ ಮತ್ತು ಪಾಕಿಸ್ತಾನದಲ್ಲಿನ ಉಗ್ರರ ಶಿಬಿರಗಳ ಮೇಲಿನ ದಾಳಿ, ತದನಂತರದ ನಾಲ್ಕು ದಿನಗಳ ತೀವ್ರ ವೈಮಾನಿಕ ಮತ್ತು ಕೆಲವು ಭೂ ದಾಳಿಗಳಿಂದ ಇದು ಪ್ರಕ್ಷುಬ್ಧವಾಗಿತ್ತು. ಇದು ಅಂತಿಮವಾಗಿ ಕದನ ವಿರಾಮ ಒಪ್ಪಂದ ಘೋಷಣೆಯೊಂದಿಗೆ ಮುಕ್ತಾಯವಾಯಿತು. ಇದು ಮಿಲಿಟರಿ ಕಾರ್ಯಾಚರಣೆಗಳ ನಿಲುಗಡೆ ಮಾತ್ರ ಎಂದು ನಾನು ಪುನರಾವರ್ತಿಸಲು ಬಯಸುತ್ತೇನೆ. ಕದನ ವಿರಾಮವಲ್ಲ. ಮುಂಬರುವ ದಿನಗಳು ಮತ್ತು ವಾರಗಳಲ್ಲಿ ವಿಷಯಗಳು ಹೇಗೆ ತೆರೆದುಕೊಳ್ಳುತ್ತವೆ ಎಂಬುದನ್ನು ನೋಡಿ ಎಂದರು.

ಯುದ್ಧದ ನಷ್ಟ ತುಂಬಾ ದೊಡ್ಡದಾಗಿದೆ: ಕದನ ವಿರಾಮ ಒಪ್ಪಂದ ಕುರಿತು ಹಲವು ಜನರು ಪ್ರಶ್ನೆಗಳನ್ನು ಎತ್ತಿದ್ದಾರೆ. ನೀವು ಯುದ್ಧದ ನೈಜ ಅಂಕಿ ಅಂಶಗಳು, ವಿಶೇಷವಾಗಿ ಯುದ್ಧದ ವೆಚ್ಚವನ್ನು ಪರಿಗಣಿಸಿದರೆ ನಷ್ಟವು ತುಂಬಾ ದೊಡ್ಡದಾಗಿದೆ ಎಂಬುದು ನಿಮಗೆ ಮನವರಿಕೆಯಾಗುತ್ತದೆ. ನಮ್ಮಲ್ಲಿ ತಾಕತ್ತನ್ನು ಪಾಕಿಸ್ತಾನಕ್ಕೆ ಸಾಬೀತುಪಡಿಸಿದ್ದೇವೆ ಎಂದು ನಾನು ನಂಬಿದ್ದೇನೆ. ಉಗ್ರರ ಮೂಲಸೌಕರ್ಯಗಳ ಮೇಲೆ ಮಾತ್ರವಲ್ಲದೆ ಅವರ ವಾಯುನೆಲೆಗಳ ಮೇಲೂ ನಾವು ದಾಳಿ ನಡೆಸಿದ್ದೇವೆ. ಅದನ್ನು ಅರಿತು ಪಾಕಿಸ್ತಾನದ DGMO ಭಾರತದ DGMOಗೆ ಕರೆ ಮಾಡಿ, ಅಂತಿಮವಾಗಿ ಕದನ ವಿರಾಮ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಾಮಾಜಿಕ ಅಂಶವಿದೆ: ಮೂರನೆಯದು ಸಾಮಾಜಿಕ ಅಂಶವಿದೆ. ನಾನು ಶಕ್ತಿ ಮತ್ತು ವಿನಾಶವನ್ನು ಪ್ರಸ್ತಾಪಿಸಿದೆ. ಆದರೆ ಈ ಸಾಮಾಜಿಕ ಭಾಗ ಪ್ರಾಣ ಕಳೆದುಕೊಂಡವರನ್ನು ಒಳಗೊಂಡಿದೆ. ಪೋಷಕರು ಅಥವಾ ಗಡಿ ಪ್ರದೇಶಗಳಲ್ಲಿ ಶೆಲ್ ದಾಳಿಯಲ್ಲಿ ಸಾಯುವ ಮಕ್ಕಳು. ಅಂತಹ ವಿನಾಶಕ್ಕೆ ಯಾರೂ ಕಾರಣವಾಗುವುದಿಲ್ಲ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ಎದುರಾಗುವ ಆಘಾತ ಮುಂದಿನ ಪೀಳಿಗೆಗೆ ತಲುಪುತ್ತದೆ. ಯುದ್ಧವು ರೊಮ್ಯಾಂಟಿಕ್ ಅಲ್ಲ. ಇದು ಬಾಲಿವುಡ್ ಸಿನಿಮಾವಲ್ಲ. ಇದು ತುಂಬಾ ಗಂಭೀರವಾದ ವ್ಯವಹಾರವಾಗಿದೆ. ಅದಕ್ಕಾಗಿಯೇ ನಮ್ಮ ಪ್ರಧಾನಿ ಇದು ಯುದ್ಧದ ಯುಗವಲ್ಲ ಎಂದು ಹೇಳಿದರು. ಯುದ್ಧವು ನಮ್ಮ ಮೇಲೆ ವಿವೇಚನೆಯಿಲ್ಲದವರಿಂದ ಬಲವಂತವಾಗಿ ಬಂದರೂ ನಾವು ಅದಕ್ಕೆ ಹುರಿದುಂಬಿಸಬಾರದು ಎಂದು ಅವರು ಹೇಳಿದರು.

ಯುದ್ಧ ನನ್ನ ಮೊದಲ ಆಯ್ಕೆಯಾಗಿರುವುದಿಲ್ಲ: ಆದರೂ, ನಾವು ಪೂರ್ಣ ಪ್ರಮಾಣದ ಯುದ್ಧಕ್ಕೆ ಏಕೆ ಹೋಗಲಿಲ್ಲ ಎಂದು ಜನರು ಕೇಳುತ್ತಿದ್ದಾರೆ. ಮಿಲಿಟರಿ ವ್ಯಕ್ತಿಯಾಗಿ, ಆದೇಶ ನೀಡಿದರೆ, ನಾನು ಯುದ್ಧಕ್ಕೆ ಹೋಗುತ್ತೇನೆ, ಆದರೆ ಅದು ನನ್ನ ಮೊದಲ ಆಯ್ಕೆಯಾಗಿರುವುದಿಲ್ಲ. ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವುದು ನನ್ನ ಮೊದಲ ಆಯ್ಕೆಯಾಗಿರುತ್ತದೆ ಎಂದರು. ರಾಷ್ಟ್ರೀಯ ಭದ್ರತೆಯಲ್ಲಿ ನಾವೆಲ್ಲರೂ ಸಮಾನ ಪಾಲುದಾರರು. ನಾವು ದೇಶಗಳ ನಡುವೆ ಮಾತ್ರವಲ್ಲ, ನಮ್ಮ ನಡುವೆಯೇ, ಕುಟುಂಬಗಳಲ್ಲಿ ಅಥವಾ ರಾಜ್ಯಗಳು, ಪ್ರದೇಶಗಳು ಮತ್ತು ಸಮುದಾಯಗಳ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಪ್ರಯತ್ನಿಸಬೇಕು. ಹಿಂಸೆಯು ಉತ್ತರವಲ್ಲ ಎಂದು ಅವರು ಹೇಳಿದರು.

ಆಪರೇಷನ್ ಸಿಂಧೂರ

ದಯೆಯನ್ನು ದೌರ್ಬಲ್ಯ ಎಂದು ಭಾವಿಸಬೇಡಿ

ಮತ್ತೊಂದು ಇಂಡೋ–ಪಾಕ್ ಯುದ್ಧವಾದರೆ ಇದಕ್ಕಿಂತಲೂ ಭಿನ್ನ



ಏರ್ ಮಾರ್ಷಲ್ ಎ.ಕೆ ಭಾರ್ತಿ

ನವದೆಹಲಿ: ಭಾರತ–ಪಾಕ್ ನಡುವೆ ಕದನ ವಿರಾಮ ಘೋಷಣೆಯಾದ ಸತತ ಎರಡನೇ ದಿನವೂ ಭಾರತೀಯ ಸೇನೆಯ DGMO ಅಧಿಕಾರಿಗಳು ಸುದ್ದಿಗೋಷ್ಠಿ ನಡೆಸಿ ಪಾಕ್ ವಿರುದ್ಧ ಭಾರತ ನಡೆಸಿದ ದಾಳಿಗಳ ಬಗ್ಗೆ ಸಾಕ್ಷ್ಯ ಸಹಿತ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಏರ್ ಮಾರ್ಷಲ್ ಎ.ಕೆ ಭಾರ್ತಿ, ನಮ್ಮ ಹೋರಾಟ ಇರುವುದು ಉಗ್ರರ ವಿರುದ್ಧವೇ ಹೊರತು ಪಾಕ್ ಸೇನೆ ಅಥವಾ ಅಲ್ಲಿನ ನಾಗರಿಕರ ವಿರುದ್ಧವಲ್ಲ ಎಂದು ಹೇಳಿದ್ದಾರೆ.

ಆಪರೇಷನ್ ಸಿಂಧೂರ್ ಸಮಯದಲ್ಲಿ ಭಾರತೀಯ ಸಶಸ್ತ್ರ ಪಡೆಗಳು ನಿಖರವಾದ ದಾಳಿಗಳ ಮೂಲಕ ತಮ್ಮ ಪರಿಣಾಮಕಾರಿತ್ವವನ್ನು ಪ್ರದರ್ಶಿಸಿವೆ ಎಂದು ಏರ್ ಮಾರ್ಷಲ್ ಒತ್ತಿ ಹೇಳಿದರು.

ನಮ್ಮ ಪ್ರತಿದಾಳಿ ವ್ಯವಸ್ಥೆಗಳು ಮತ್ತು ತರಬೇತಿ ಪಡೆದ ವಾಯು ರಕ್ಷಣಾ ನಿರ್ವಾಹಕರು ಸಂಪೂರ್ಣವಾಗಿ ಸಮರ್ಥರಾಗಿದ್ದಾರೆ ಮತ್ತು ನಮ್ಮ ರಾಷ್ಟ್ರದ ಸ್ಥಳೀಯ ಸಾಮರ್ಥ್ಯವು ಅದರ ಪರಿಣಾಮಕಾರಿತ್ವವನ್ನು ಸಾಬೀತುಪಡಿಸಿದೆ. ಯಾವುದೇ ರೀತಿಯ ತಂತ್ರಜ್ಞಾನ ಹೊರಹೊಮ್ಮಿದರೂ, ಅದನ್ನು ಎದುರಿಸಲು ನಾವು ಸಿದ್ಧರಿದ್ದೇವೆ ಎಂದು ಪ್ರದರ್ಶಿಸಲಾಗಿದೆ. ಅತಿಯಾದ ಮಾತುಗಳ ಅಗತ್ಯವಿಲ್ಲ, ನಾವು ನೀಡಿದ ಪರಿಣಾಮಗಳನ್ನು ನೀವು ನಿಮ್ಮ ಸ್ವಂತ ಕಣ್ಣುಗಳಿಂದ ನೋಡಿದ್ದೀರಿ ಎಂದು ಅವರು ಹೇಳಿದರು.

ಚೀನಾದ ಕ್ಷಿಪಣಿಯ ಪಾಕ್ ಬಳಸಿರುವುದಕ್ಕೆ ಪುರಾವೆ

ಆಪರೇಷನ್ ಸಿಂಧೂರ್‌ನ ಕಾರ್ಯಾಚರಣೆಯ ವಿವರಗಳಿಗೆ ಸಂಬಂಧಿಸಿದ ಕೆಲವು ಅಂಶಗಳನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಲಾಗುವುದಿಲ್ಲ ಎಂದು ಹೇಳಿದ ಏರ್ ಮಾರ್ಷಲ್ ಎ.ಕೆ. ಭಾರ್ತಿ, ಇದು ವಿಭಿನ್ನ ರೀತಿಯ ಯುದ್ಧವಾಗಿದ್ದು ಅದು ಖಂಡಿತವಾಗಿಯೂ ಸಂಭವಿಸಲಿದೆ ಎಂದು ಹೇಳಿದರು.

ಮುಂದೆ ವಿಭಿನ್ನ ರೀತಿಯ ಯುದ್ಧವಾಗಿರುತ್ತದೆ. ಇದು ಖಂಡಿತವಾಗಿಯೂ ಸಂಭವಿಸುತ್ತದೆ. ದೇವರು ಅದನ್ನು ತಡೆಯಲಿ. ಆದರೆ ನಾವು ಇನ್ನೊಂದು ಯುದ್ಧವನ್ನು ಮಾಡಿದರೆ, ಅದು ಇದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಇದು ಬೆಕ್ಕು–ಮತ್ತು–ಇಲಿಯ ಆಟವಾಗಿದೆ ಎಂದು ಭಾರ್ತಿ ಹೇಳಿದ್ದಾರೆ.

ಇದೇ ವೇಳೆ ಭಾರತೀಯ ಸೇನೆ ಸೋಮವಾರ ಚೀನಾ ಮೂಲದ ಮತ್ತು ಭಾರತದ ಮೇಲಿನ ದಾಳಿಯ ಸಮಯದಲ್ಲಿ ಪಾಕಿಸ್ತಾನ ಬಳಸಿದ್ದ ಸಂಭಾವ್ಯ PL-15 ಏರ್–ಟು–ಏರ್ ಕ್ಷಿಪಣಿಯ ಅವಶೇಷಗಳ ಚಿತ್ರಗಳನ್ನು ಪ್ರದರ್ಶಿಸಿದೆ.

ಭಾರತ ಹೊಡೆದುರುಳಿಸಿದ ಟರ್ಕಿಶ್ ಮೂಲದ YIHA ಮತ್ತು ಸೊಂಗಾರ್ ಡ್ರೋನ್‌ಗಳ ಅವಶೇಷಗಳ ಚಿತ್ರಗಳನ್ನು ಸಹ ತೋರಿಸಲಾಗಿದೆ.

ಭಾರತೀಯ ಸೇನೆಯ ಯುದ್ಧ–ಸಾಬೀತಾದ ರಕ್ಷಣಾ ವ್ಯವಸ್ಥೆಗಳು ಕಾಲದ ಪರೀಕ್ಷೆಯನ್ನು ಎದುರಿಸಿವೆ ಮತ್ತು ಪಾಕಿಸ್ತಾನಿ ಕ್ಷಿಪಣಿಗಳು ಹಾಗೂ ಡ್ರೋನ್‌ಗಳನ್ನು ಮುಖಾಮುಖಿಯಾಗಿ ಎದುರಿಸಿವೆ ಎಂದು ಹೇಳಿದರು.

ನಮ್ಮ ಯುದ್ಧ–ಸಾಬೀತಾದ ವ್ಯವಸ್ಥೆಗಳು ಪರೀಕ್ಷೆಯನ್ನು ಎದುರಿಸಿವೆ. ಮತ್ತೊಂದು ಪ್ರಮುಖ ಅಂಶವೆಂದರೆ ಸ್ಥಳೀಯ ವಾಯು ರಕ್ಷಣಾ ವ್ಯವಸ್ಥೆಯಾದ ಆಕಾಶ್ ವ್ಯವಸ್ಥೆಯ ಅದ್ಭುತ ಕಾರ್ಯಕ್ಷಮತೆ ಪ್ರದರ್ಶಿಸಿದೆ. ಕಳೆದ ದಶಕದಲ್ಲಿ ಭಾರತ ಸರ್ಕಾರದಿಂದ ಬಜೆಟ್ ಮತ್ತು ನೀತಿ ಬೆಂಬಲದಿಂದಾಗಿ ಮಾತ್ರ ಪ್ರಬಲವಾದ ಕ್ಷಿಪಣಿ ಪರಿಸರವನ್ನು ಒಟ್ಟುಗೂಡಿಸುವುದು ಮತ್ತು ಕಾರ್ಯಗತಗೊಳಿಸುವುದು ಸಾಧ್ಯವಾಗಿದೆ ಎಂದು ಭಾರ್ತಿ ಹೇಳಿದ್ದಾರೆ.

ಕಿರ್ನಾ ಬೆಟ್ಟದಲ್ಲಿ ಪಾಕ್ ಪರಮಾಣು ಸೌಲಭ್ಯ ಇರುವುದನ್ನು ತಿಳಿಸಿದ್ದಕ್ಕೆ ಧನ್ಯವಾದಗಳು!

ಕಿರ್ನಾ ಬೆಟ್ಟದಲ್ಲಿರುವ ಪಾಕಿಸ್ತಾನದ ಪರಮಾಣು ಸೌಲಭ್ಯದ ಮೇಲೆ ದಾಳಿ ನಡೆಸಿರುವುದನ್ನು ಭಾರತ ನಿರಾಕರಿಸಿದೆ. ಈ ಕುರಿತಾದ ವರದಿಗಳನ್ನು ಸೋಮವಾರ ಭಾರತೀಯ ಸೇನೆ ತಿರಸ್ಕರಿಸಿದೆ. ಕಿರ್ನಾ ಬೆಟ್ಟವು ನೆರೆಯ ದೇಶದ ಪರಮಾಣು ಸೌಲಭ್ಯವನ್ನು ಹೊಂದಿದೆ ಎಂದು ತನಗೆ ತಿಳಿದಿಲ್ಲ ಎಂದು ಸೇನೆ ಹೇಳಿದೆ.

ಕಿರ್ನಾ ಬೆಟ್ಟವು ಕೆಲವು ಪರಮಾಣು ಸ್ಥಾಪನೆಗಳನ್ನು ಹೊಂದಿದೆ ಎಂದು ನಮಗೆ ಹೇಳಿದ್ದಕ್ಕಾಗಿ ಧನ್ಯವಾದಗಳು, ನಮಗೆ ಅದರ ಬಗ್ಗೆ ತಿಳಿದಿರಲಿಲ್ಲ ಎಂದು ಏರ್ ಮಾರ್ಷಲ್ ಎ.ಕೆ. ಭಾರ್ತಿ ಪ್ರಮುಖ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು. ಅಲ್ಲಿ ಏನೇ ಇರಲಿ, ನಾವು ಕಿರ್ನಾ ಬೆಟ್ಟಗಳ ಮೇಲೆ ದಾಳಿ ಮಾಡಿಲ್ಲ ಎಂದು ಅವರು ಒತ್ತಿ ಹೇಳಿದರು.

ಭಾರತದ ಭದ್ರತೆಗೆ 10 ಉಪಗ್ರಹಗಳು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿವೆ: ಇಸ್ರೋ





ನವದೆಹಲಿ: ಭಾರತ ಮತ್ತು ಪಾಕಿಸ್ತಾನ ನಡುವಿನ ಸೇನಾ ಸಂಘರ್ಷ ಮುಂದುವರೆದಿರುವಂತೆಯೇ ಭಾರತದ ರಕ್ಷಣೆ ಕುರಿತು ಮಹತ್ವದ ಮಾಹಿತಿ ನೀಡಿರುವ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ದೇಶದ ರಕ್ಷಣೆಗೆ 10 ಉಪಗ್ರಹಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಮಾಹಿತಿ ನೀಡಿದೆ.

ಅಗರ್ತಲದಲ್ಲಿರುವ ಕೇಂದ್ರೀಯ ಕೃಷಿ ವಿಶ್ವವಿದ್ಯಾನಿಲಯದ 5ನೇ ಘಟಿಕೋತ್ಸವದಲ್ಲಿ ಮಾತನಾಡಿದ ಇಸ್ರೋ ಅಧ್ಯಕ್ಷ ವಿ.ನಾರಾಯಣನ್ ಅವರು, 'ಭಾರತದ ರಕ್ಷಣೆ ಮತ್ತು ಸುಭದ್ರತೆಯನ್ನು ಖಾತರಿಪಡಿಸುವ ಉದ್ದೇಶದಿಂದ ದೇಶದ 10 ಉಪಗ್ರಹಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ನಾವು ದೇಶದ ಸುರಕ್ಷತೆಯನ್ನು ಖಾತರಿಪಡಿಸಲು ಬಯಸುವುದಾದರೆ, ಅದನ್ನು ನಮ್ಮ ಉಪಗ್ರಹಗಳ ಮೂಲಕ ಸಾಧಿಸಬೇಕು ಎಂದು ಹೇಳಿದರು.

ನಾವು ನಮ್ಮ 7 ಸಾವಿರ ಕಿಲೋಮೀಟರ್ ಕಡಲ ಕಿನಾರೆಯ ಮೇಲೆ ನಿಗಾ ಇಡಬೇಕು. ಉಪಗ್ರಹ ಮತ್ತು ಡ್ರೋನ್ ತಂತ್ರಜ್ಞಾನದ ಹೊರತಾಗಿ, ಹಲವು ಅಂಶಗಳನ್ನು ನಾವು ಸಾಧಿಸಲಾಗದು. ಇದುವರೆಗೆ ಇಸ್ರೋ 127 ಉಪಗ್ರಹಗಳನ್ನು ಉಡಾಯಿಸಿದೆ. ಇದರಲ್ಲಿ ಖಾಸಗಿ ಕಾರ್ಯಾಚರಣೆಗಾಗಿ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಕಾರ್ಯನಿರ್ವಹಿಸುವ ಉಪಗ್ರಹಗಳೂ ಸೇರಿವೆ.

ಈ ಪೈಕಿ 22 ಕೆಳ ಭೂ ಕಕ್ಷೆಯಲ್ಲಿದ್ದರೆ 29 ಕೇಂದ್ರ ಸರ್ಕಾರದ ಸ್ವಾಮ್ಯದ ಜಿಯೊ ಸಿಂಕ್ರೈಸ್ ಕಕ್ಷೆಯಲ್ಲಿವೆ. ಭಾರತ ಸುಮಾರು 12 ಬೇಹುಗಾರಿಕೆ ಉಪಗ್ರಹಗಳನ್ನು ಹೊಂದಿದೆ. ಇದರಲ್ಲಿ ನಿರ್ದಿಷ್ಟ ಕಣ್ಗಾವಲು ಉದ್ದೇಶಗಳಿಗಾಗಿ ತಯಾರಿಸಿದ ಕಾರ್ಟೊಸ್ಯಾಟ್ ಮತ್ತು ಆರ್ ಐಎಸ್‌ಎಟಿ ಸರಣಿಯ ಉಪಗ್ರಹಗಳು, ಇಎಂಐಎಸ್‌ಎಟಿ ಮತ್ತು ಮೈಕ್ರೊಸ್ಯಾಟ್ ಸರಣಿಯ ಉಪಗ್ರಹಗಳು ಸೇರಿವೆ ಎಂದು ವಿವರಿಸಿದರು.

ನಮ್ಮ ನೆರೆಹೊರೆಯವರ ಬಗ್ಗೆ ನಿಮಗೆಲ್ಲರಿಗೂ ತಿಳಿದಿದೆ. ನಮ್ಮ ದೇಶದ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕಾದರೆ, ನಾವು ನಮ್ಮ ಉಪಗ್ರಹಗಳ ಮೂಲಕ ಸೇವೆ ಸಲ್ಲಿಸಬೇಕು. ನಮ್ಮ 7,000 ಕಿಮೀ ಸಮುದ್ರ ತೀರ ಪ್ರದೇಶಗಳನ್ನು ನಾವು ಮೇಲ್ವಿಚಾರಣೆ ಮಾಡಬೇಕು.

ನಾವು ಸಂಪೂರ್ಣ ಉತ್ತರ ಭಾಗವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಬೇಕು. ಉಪಗ್ರಹ ಮತ್ತು ಡ್ರೋನ್ ತಂತ್ರಜ್ಞಾನವಿಲ್ಲದೆ, ನಾವು ಅದನ್ನು ಸಾಧಿಸಲು ಸಾಧ್ಯವಿಲ್ಲ ಎಂದು ವಿ. ನಾರಾಯಣನ್ ಹೇಳಿದರು.

ಭಾರತದ ಕಣ್ಗಾವಲು ಸಾಮರ್ಥ್ಯ ಅಭಿವೃದ್ಧಿಗಾಗಿ ಮುಂದಿನ ಐದು ವರ್ಷಗಳಲ್ಲಿ ಭಾರತ 52 ಉಪಗ್ರಹಗಳನ್ನು ಉಡಾಯಿಸಲಿದೆ ಎಂದು ಕೆಲ ದಿನಗಳ ಹಿಂದೆ ಭಾರತದ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನಾ ಮತ್ತು ಅನುಮತಿ ಕೇಂದ್ರದ ಅಧ್ಯಕ್ಷ ಪವನ್ ಕುಮಾರ್ ಗೋಯಂಕಾ ಪ್ರಕಟಿಸಿದ್ದರು. ಭಾರತ ಹಾಗೂ ಪಾಕಿಸ್ತಾನ ನಡುವಿನ ಸಂಘರ್ಷದ ಸಂದರ್ಭದಲ್ಲಿ ಇಸ್ರೋ ಮುಖ್ಯಸ್ಥರ ಹೇಳಿಕೆ ವಿಶೇಷ ಮಹತ್ವ ಪಡೆದಿದೆ.

ಭಯೋತ್ಪಾದನೆ ಎದುರು ಭಾರತ ಬಗ್ಗುವುದಿಲ್ಲ ಎಂಬ ಸ್ಪಷ್ಟ ಸಂದೇಶ ಜಗತ್ತಿಗೆ ರವಾನೆ; ಕಮಲ್



ಚೆನ್ನೈ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಸಶಸ್ತ್ರ ಪಡೆಯು ಆಪರೇಷನ್ ಸಿಂಧೂರ ಮೂಲಕ ದಿಟ್ಟ ಉತ್ತರ ನೀಡಿದೆ. ಈ ಮೂಲಕ ಭಾರತ ಭಯೋತ್ಪಾದನೆ ಎದುರು ಬಗ್ಗುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಜಗತ್ತಿಗೆ ರವಾನಿಸಿದೆ ಎಂದು ನಟ, ರಾಜಕಾರಣಿ ಕಮಲ್ ಹಾಸನ್ ಸೋಮವಾರ ತಿಳಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಇದು ವಿಜಯೋತ್ಸವದ ಸಮಯವಲ್ಲ, ಬದಲಾಗಿ ಬಲಿಷ್ಠ ಭಾರತವನ್ನು ಮತ್ತಷ್ಟು ಬಲಪಡಿಸಲು ಚಿಂತನೆ ನಡೆಸುವ ಸಮಯ ಎಂದು ಕಮಲ್ ತಿಳಿಸಿದ್ದಾರೆ.

ಭಯೋತ್ಪಾದನೆಯ ಎದುರು ಭಾರತ ಬಗ್ಗುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಜಗತ್ತಿಗೆ ರವಾನಿಸಿದೆ. ದಿಟ್ಟ ಉತ್ತರ ಕೊಟ್ಟ ಸೇನೆ ಮತ್ತು ಕೇಂದ್ರ ಸರ್ಕಾರವನ್ನು ಶ್ಲಾಘಿಸುತ್ತೇನೆ ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಕಣ್ಣುಗಳಲ್ಲಿ ತ್ರಿವರ್ಣ ಧ್ವಜ, ಕರ್ತವ್ಯದಿಂದ ತುಂಬಿದ ಹೃದಯ, ಅಪಾಯದ ಎದುರು ನಿಂತಿದ್ದ ವೀರಯೋಧರ ಧೈರ್ಯ ಅಚಲವಾದದ್ದು. ನೀವು ಭಾರತದ ಹೆಮ್ಮೆ, ನಮ್ಮನ್ನು ರಕ್ಷಿಸುತ್ತಿದ್ದೀರಿ, ಶಾಂತಿಯನ್ನು ಕಾಪಾಡುತ್ತಿದ್ದೀರಿ ಎಂದು ಸಶಸ್ತ್ರ ಪಡೆಗಳನ್ನು ಕಮಲ್ ಶ್ಲಾಘಿಸಿದ್ದಾರೆ.

ಕಠಿಣ ಸಮಯದಲ್ಲಿ ದೇಶದಾದ್ಯಂತ ಜನರು ಒಂದೇ ಶಕ್ತಿಯಾಗಿ ಒಗ್ಗಟ್ಟಿನಿಂದ ಇದ್ದರು ಎಂದು ಕಮಲ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಬಿಎಸ್‌ಎಫ್ ಯೋಧನ ಬಿಡುಗಡೆಗೆ ಪವನ್ ಖೇರಾ ಮನವಿ: ಟ್ರಂಪ್‌ಗೆ ಟ್ಯಾಗ್!



ಪವನ್ ಖೇರಾ

ನವದೆಹಲಿ: ಬಿಎಸ್‌ಎಫ್ ಯೋಧ ಪೂರ್ಣಂ ಸಾಹು ಅವರನ್ನು ಪಾಕಿಸ್ತಾನದ ಸೆರೆಯಿಂದ ಯಾವಾಗ ಬಿಡುಗಡೆ ಮಾಡಲಾಗುತ್ತದೆ ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಸಾಮಾಜಿಕ ಮಾಧ್ಯಮದಲ್ಲಿ ಪ್ರಶ್ನಿಸಿದ್ದಾರೆ.

ನಮ್ಮ ಬಿಎಸ್‌ಎಫ್ ಜವಾನ ಪೂರ್ಣಂ ಸಾಹು ಅವರನ್ನು ಪಾಕಿಸ್ತಾನದ ಸೆರೆಯಿಂದ ಯಾವಾಗ ಬಿಡುಗಡೆ ಮಾಡಲಾಗುತ್ತದೆ ಎಂದು ಅವರು ಟ್ವೀಟ್ ಮಾಡಿದ್ದಾರೆ ಮತ್ತು ಈ ವಿಷಯವಾಗಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಟ್ಯಾಗ್ ಮಾಡಿದ್ದಾರೆ. ಇದಕ್ಕೂ ಮೊದಲು, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಪಾಕಿಸ್ತಾನ ರೇಂಜರ್ಸ್ ಬಂಧಿಸಿರುವ ಹೂಗ್ಲಿಯ ಬಿಎಸ್‌ಎಫ್ ಜವಾನರ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದ್ದರು.

ತೃಣಮೂಲ ಕಾಂಗ್ರೆಸ್ ನಾಯಕ ಕಲ್ಯಾಣ್ ಬ್ಯಾನರ್ಜಿ ಅವರು ಕುಟುಂಬ ಸದಸ್ಯರೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಬ್ಯಾನರ್ಜಿ ಹೇಳಿದ್ದಾರೆ. ಇದು ಅತ್ಯಂತ ದುಃಖಕರ ಪರಿಸ್ಥಿತಿ. ಅವರ ಹೆಸರು ಸಾಹು. ನಮ್ಮ ಪಕ್ಷದ ಕಲ್ಯಾಣ್ ಬ್ಯಾನರ್ಜಿ ಅವರು ಕುಟುಂಬ ಸದಸ್ಯರೊಂದಿಗೆ ಸಂಪರ್ಕದಲ್ಲಿದ್ದಾರೆ. ಅವರನ್ನು ಆದಷ್ಟು ಬೇಗ ರಕ್ಷಿಸಬೇಕೆಂದು ನಾನು ಬಯಸುತ್ತೇನೆ. ಆಂತರಿಕ ಮತ್ತು ಬಾಹ್ಯ ಭದ್ರತೆಯ ವಿಷಯಗಳಲ್ಲಿ ನಮ್ಮ ಪಕ್ಷ ಸರ್ಕಾರದೊಂದಿಗಿದೆ ಎಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ನಾವು ಇಲ್ಲಿ ಒಡೆದು ಆಳುತ್ತಿಲ್ಲ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಆಪರೇಷನ್ ಸಿಂಧೂರ': 17 ಶಿಶುಗಳಿಗೆ 'ಸಿಂಧೂರ' ಹೆಸರು

ಖುಷಿನಗರ: ಪಹಲ್ಗಾವ್ ದಾಳಿಗೆ ಪ್ರತಿಕಾರವಾಗಿ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಈಗ ದೇಶದ ಜನರ ಹೆಮ್ಮೆಯ ಪ್ರತೀಕ ಎನಿಸಿದೆ. ಈ ಕಾರ್ಯಾಚರಣೆ ನೆನಪಿಗಾಗಿ ನವಜಾತ ಶಿಶುಗಳಿಗೆ 'ಸಿಂಧೂರ್' ಎಂದು ನಾಮಕರಣ ಮಾಡಲಾಗುತ್ತಿದೆ.

ಉತ್ತರ ಪ್ರದೇಶದ ಖುಷಿನಗರ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಮೇ 9 ಮತ್ತು 10ರಂದು ಜನಿಸಿದ 17 ಹೆಣ್ಣು ಮಕ್ಕಳಿಗೆ ಸಿಂಧೂರ ಎಂದು ನಾಮಕರಣ ಮಾಡಲಾಗಿದೆ ಎಂದು ಪ್ರಾಂಶುಪಾಲ ಆರ್.ಕೆಶಹಿ ತಿಳಿಸಿದ್ದಾರೆ.

'ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿದ ಭಾರತೀಯ ಸೇನೆಗೆ ಅಭಿನಂದನೆ ಸಲ್ಲಿಸಲು ನನ್ನ ಮಗುವಿಗೆ ಸಿಂಧೂರ ಎಂದು ಹೆಸರು ಇಟ್ಟಿದ್ದೇನೆ' ಎಂದು ಖುಷಿನಗರದ ನಿವಾಸಿ ಅರ್ಚನಾ ಶಾಹಿ ಹೆಮ್ಮೆಯಿಂದ ಹೇಳಿದ್ದಾರೆ. 'ಈ ಪದವು ನಮಗೆ ಸ್ಫೂರ್ತಿದಾಯಕವಾಗಿದೆ' ಎಂದು ಅವರ ಪತಿ ಅಜಿತ್ ಶಾಹಿ ತಿಳಿಸಿದ್ದಾರೆ.

ಮತ್ತೊಂದು ಮಗುವಿನ ತಂದೆ ಪದ್ರೌನದ ನಿವಾಸಿ ಮದನ್ ಗುಪ್ತಾ, '26 ಅಮಾಯಕರನ್ನು ಕೊಂದವರ ವಿರುದ್ಧ ಪ್ರತೀಕಾರ ತೀರಿಸಿಕೊಂಡ ಕ್ಷಣದಿಂದಲೇ ಕಾರ್ಯಾಚರಣೆಯ ಹೆಸರನ್ನು ಮಗುವಿಗೆ ಇಡಲು ನನ್ನ ಸೊಸೆ ಬಯಸಿದ್ದರು' ಎಂದರು.

ವ್ಯಾಸ್‌ಮುನಿ ಎಂಬುವರೂ ತಮ್ಮ ಮಗುವಿಗೆ ಸಿಂಧೂರ ಎಂದು ಹೆಸರು ಇಟ್ಟಿದ್ದು, 'ಈ ಹೆಸರು ನನ್ನ ಮಗಳಿಗೆ ಸ್ಫೂರ್ತಿ ತುಂಬುತ್ತದೆ. ನನ್ನ ಮಗಳು ಬೆಳೆಯುತ್ತಾ ಈ ಪದದ ಅರ್ಥ ತಿಳಿದುಕೊಂಡು ಭಾರತ ಮಾತೆಯ ಸೇವೆ ಮಾಡಲು ಪ್ರೇರಣೆ ನೀಡುತ್ತದೆ ಎಂದರು.

ಸಿಂಧೂರ ಎನ್ನುವುದು ಸರಳ ಪದವಲ್ಲ. ಈಗ ಅದು ನಮ್ಮ ಭಾವನೆಗಳ ಪ್ರತೀಕವಾಗಿದೆ' ಎಂದು ಪ್ರಿಯಾಂಕ ದೇವಿ ಎಂಬುವರು ತಮ್ಮ ಮಗುವಿಗೆ ಸಿಂಧೂರ ಹೆಸರಿಟ್ಟು ಸಂತಸ ಹಂಚಿಕೊಂಡರು.

ಭಾರತದ ವಾಯುನೆಲೆ ಹೊಡೆದ್ ಹಾಕಿದ್ವಿ ಎಂದಿದ್ದ ಪಾಕ್ ಸೇನೆಯ ಬಣ್ಣ ಬಯಲು

ನವದೆಹಲಿ: ಪಹಲ್ಗಾಮ್ ಉಗ್ರ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ ಕಾರ್ಯಾಚರಣೆ ಬಳಿಕ ಭಾರತ ಮತ್ತು ಪಾಕಿಸ್ತಾನ ನಡುವೆ ನಡೆದ ಸೇನಾ ಸಂಘರ್ಷದಿಂದಾಗಿ ಪಾಕಿಸ್ತಾನಕ್ಕೆ ಅಪಾರ ಪ್ರಮಾಣದ ನಷ್ಟವುಂಟಾಗಿದೆ.

ಆದಾಗ್ಯೂ ತಮಗೇನೂ ಆಗಿಲ್ಲ. ಭಾರತದ ಜೊತೆಗಿನ ಸಂಘರ್ಷದಲ್ಲಿ ಪಾಕಿಸ್ತಾನವೇ ಗೆದ್ದಿದೆ ಎಂದು ಬೀಗುತ್ತಿದ್ದ ಪಾಕಿಸ್ತಾನಕ್ಕೆ ಮುಜುಗರ ಏರ್ಪಟ್ಟಿದೆ. ಈ ಹಿಂದೆ ಭಾರತದ ವಾಯುನೆಲೆ ಹೊಡೆದುರುಳಿಸಿದ್ದೇವೆ ಎಂದು ಸುದ್ದಿಗೋಷ್ಠಿಯಲ್ಲಿ ಪಾಕಿಸ್ತಾನ ಸೇನಾ ವಕ್ತಾರ ಅಹ್ಮದ್ ಷರೀಫ್ ಹೇಳಿದ್ದರು.

ಅಲ್ಲದೆ ಇದಕ್ಕೆ ಸಂಬಂಧಿಸಿದಂತೆ ವಿಡಿಯೋವೊಂದನ್ನು ತೋರಿಸಿದ್ದರು. ಆ ವಿಡಿಯೋದಲ್ಲಿ ನಿರೂಪಕಿಯೊಬ್ಬರು ವಾಯುನೆಲೆ ಧ್ವಂಸವಾದ ಕುರಿತು ಮಾಹಿತಿ ನೀಡುತ್ತಿದ್ದರು. ಇದನ್ನೇ ಆಧಾರವಾಗಿಟ್ಟು ಕೊಂಡು ಪಾಕಿಸ್ತಾನ ವಾಯುಸೇನೆ ಭಾರತದ ವಾಯುನೆಲೆ ಧ್ವಂಸ ಮಾಡಿದೆ ಎಂದು ಷರೀಫ್ ಹೇಳಿದ್ದರು.

ಅಸಲೀಯತ್ತೇ ಬೇರೆ: ಆದರೆ ಅಚ್ಚರಿ ಎಂದರೆ ಪಾಕ್ ಸೇನಾ ವಕ್ತಾರ ತೋರಿಸಿದ್ದ ವಿಡಿಯೋ ಭಾರತದ್ದು ಅಲ್ಲವೇ ಅಲ್ಲ. ಬದಲಿಗೆ ಅದು ಪಾಕಿಸ್ತಾನದ್ದು. ಅದೂ ಅಲ್ಲದೆ ಅಂದು ನಿರೂಪಣೆ ಮಾಡುತ್ತಿದ್ದದ್ದು ಭಾರತದ ಆಜ್ ತಕ್ ಸುದ್ದಿ ವಾಹಿನಿಯ ನಿರೂಪಕಿ.

ಭಾರತೀಯ ವಾಯುಸೇನೆ ಪಾಕಿಸ್ತಾನದ ವಾಯುನೆಲೆ ಧ್ವಂಸ ಮಾಡಿದ್ದ ವಿಡಿಯೋವನ್ನೇ ಪಾಕಿಸ್ತಾನ ವಕ್ತಾರರು ಪಾಕ್ ಮಾಧ್ಯಮಗಳಿಗೆ ತೋರಿಸಿದ್ದಾರೆ. ಆದರೆ ಈ ವಿಡಿಯೋ ಭಾರತದಲ್ಲ.. ಬದಲಿಗೆ ಪಾಕಿಸ್ತಾನದ್ದು ಎಂದು ಗೊತ್ತಾಗಿದೆ. ಆ ಮೂಲಕ ಪಾಕಿಸ್ತಾನ ಸೇನಾಧಿಕಾರಿಗಳ ಸುಳ್ಳಿನ ಸರಣಿಗೆ ಇದೂ ಒಂದು ಸೇರಿದೆ.

ಭಾರತ-ಪಾಕಿಸ್ತಾನ ಕದನ ವಿರಾಮ

ಪರಮಾಣು ಸಂಘರ್ಷವನ್ನು ತಡೆದಿದ್ದೇವೆ: ಕ್ರೆಡಿಟ್ ತೆಗೆದುಕೊಂಡ ಡೊನಾಲ್ಡ್ ಟ್ರಂಪ್!



ವಾಷಿಂಗ್ಟನ್: ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಭಾವ್ಯ ಪರಮಾಣು ಸಂಘರ್ಷವನ್ನು ಅಮೆರಿಕ ಮಧ್ಯ ಪ್ರವೇಶಿಸಿ ತಡೆಹಿಡಿದಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದಾರೆ.

ನಾಲ್ಕು ರಾತ್ರಿ ಗಡಿಯಾಚೆಗೆ ನಡೆದ ಸೇನಾ ಕಾರ್ಯಾಚರಣೆ ನಂತರ ಉಭಯ ರಾಷ್ಟ್ರಗಳು ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಗೆ ನೀಡಿದ ನಂತರ ಡೊನಾಲ್ಡ್ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

ಶ್ವೇತ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಪರಮಾಣು ಸಂಘರ್ಷವನ್ನು ನಾವು ತಡೆದಿದ್ದೇವೆ. ಕೆಟ್ಟ ಪರಮಾಣು ಯುದ್ಧ ನಡೆದು ಲಕ್ಷಾಂತರ ಜನರು ಸಾವನ್ನಪ್ಪುವ ಸಾಧ್ಯತೆ ಇರುವುದಾಗಿ ನನಗೆ ಅನಿಸಿತು. ಹಾಗಾಗಿ ಅದರ ಬಗ್ಗೆ ನಾನು ತುಂಬಾ ಹೆಮ್ಮೆ ಪಡುತ್ತೇನೆ. ಬಿಕ್ಕಟ್ಟನ್ನು ಶಮನಗೊಳಿಸುವಲ್ಲಿ ಅಮೆರಿಕದ ರಾಜತಾಂತ್ರಿಕ ಪ್ರಯತ್ನಗಳು ನಿರ್ಣಾಯಕ ಪಾತ್ರ ವಹಿಸಿವೆ ಎಂದರು.

ಭಾರತ ಹಾಗೂ ಪಾಕಿಸ್ತಾನದೊಂದಿಗೆ ಸಾಕಷ್ಟು ವ್ಯಾಪಾರ ಮಾಡಲು ಹೊರಟ್ಟಿದ್ದೇವೆ. ಈಗ ಭಾರತದೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ. ಶೀಘ್ರದಲ್ಲಿಯೇ ಪಾಕಿಸ್ತಾನದೊಂದಿಗೂ ಮಾತುಕತೆ ನಡೆಸಲಿದ್ದೇವೆ ಎಂದು ತಿಳಿಸಿದರು.

ಈ ಹಿಂದೆ ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಪೋಸ್ಟ್ ಮಾಡುವ ಮೂಲಕ ಕದನ ವಿರಾಮದ ಮೊದಲ ಕ್ರೆಡಿಟ್ ಅನ್ನು ಟ್ರಂಪ್ ತೆಗೆದುಕೊಂಡಿದ್ದರು. ಸಾಮಾನ್ಯ ತಿಳುವಳಿಕೆ ಮತ್ತು ಅತ್ಯುತ್ತಮವಾಗಿ ನಡೆದುಕೊಂಡಿದ್ದಕ್ಕೆ ಎರಡೂ ದೇಶಗಳಿಗೆ ಅಭಿನಂದನೆಗಳು ಎಂದು ಹೆಡ್ ಮಾಸ್ಟರ್ ಟೋನ್‌ನಲ್ಲಿ ಬರೆದುಕೊಂಡಿದ್ದರು.

ಕುತೂಹಲಕಾರಿ ಸಂಗತಿಯೆಂದರೆ, ಪಾಕಿಸ್ತಾನ ಅಥವಾ ಭಾರತದಿಂದ ಯಾವುದೇ ಅಧಿಕೃತ ಪ್ರಕಟಣೆ ಹೊರಬೀಳುವ ಮುನ್ನವೇ ಟ್ರಂಪ್ ಕದನ ವಿರಾಮ ಒಪ್ಪಂದ ಘೋಷಣೆ ಮಾಡಿದ್ದರು. ಇದು ತೀವ್ರ ಟೀಕೆಗಳಿಗೂ ಗುರಿಯಾಗಿದೆ.

ಭಾರತ– ಪಾಕಿಸ್ತಾನ ವಿಚಾರದಲ್ಲಿ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆ ಬಗ್ಗೆ ವಿರೋಧ ಪಕ್ಷ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ. ಈ ವಿಚಾರದಲ್ಲಿ ಮೂರನೇ ವ್ಯಕ್ತಿ ಮಧ್ಯಪ್ರವೇಶಿಸಿದ್ದಕ್ಕೆ ಕಾಂಗ್ರೆಸ್, ಎಎಪಿ ಸೇರಿದಂತೆ ಹಲವು ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮುಂದುವರೆಸಿವೆ.

ಮೇ 17 ರಿಂದ ಮತ್ತೆ ಐಪಿಎಲ್ ಪುನರಾರಂಭ

ಬಿಸಿಸಿಐನಿಂದ ಪರಿಷ್ಕೃತ ವೇಳಾಪಟ್ಟಿ ಪ್ರಕಟ: ಜೂ.3ಕ್ಕೆ ಫೈನಲ್



ನವದೆಹಲಿ, ಮೇ 12– ಆಪರೇಶನ್ ಸಿಂಧೂರ್ ವೇಳೆ ಉದ್ಭವವಾದ ಇಂಡೋ–ಪಾಕ್ ಸಂಘರ್ಷದ ಹಿನ್ನೆಲೆಯಲ್ಲಿ ಮುಂದೂಡಲ್ಪಟ್ಟಿದ್ದ ಐಪಿಎಲ್ 2025ರ ಉಳಿದ ಪಂದ್ಯಗಳು ಮೇ 17 ರಂದು ಮತ್ತೆ ಆರಂಭವಾಗಲಿದೆ. ಈ ಸಂಬಂಧ ಪರಿಷ್ಕೃತ ವೇಳಾಪಟ್ಟಿಯನ್ನು ಬಿಸಿಸಿಐ ಸೋಮವಾರ ರಾತ್ರಿ ಪ್ರಕಟಿಸಿದೆ.

ಸರ್ಕಾರ, ಭದ್ರತಾ ಏಜೆನ್ಸಿಗಳು ಮತ್ತು ಎಲ್ಲಾ ಪ್ರಮುಖ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಈ ಬಾರಿಯ ಟೂರ್ನಿಯ ಉಳಿದಿರುವ ಪಂದ್ಯಗಳನ್ನು ಪುನರ್ ಆರಂಭಿಸಲು ನಿರ್ಧರಿಸಲಾಗಿದೆ.

ಒಟ್ಟು 6 ಕ್ರೀಡಾಂಗಣಗಳಲ್ಲಿ ಒಟ್ಟು 17 ಪಂದ್ಯಗಳು ನಡೆಯಲಿದ್ದು, ಮೇ 17 ರಂದು ಬೆಂಗಳೂರಿನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಿನ ಪಂದ್ಯದೊಂದಿಗೆ ಬಾಕಿ ಉಳಿದಿರುವ ಪಂದ್ಯಗಳು ಪುನರಾರಂಭವಾಗಲಿದೆ. ಜೂ.3 ರಂದು ಫೈನಲ್ ಪಂದ್ಯ ನಡೆಯಲಿದೆ. ಪ್ಲೇ ಆಫ್ ಮತ್ತು ಫೈನಲ್ ಪಂದ್ಯಗಳು ನಡೆಯುವ ದಿನಾಂಕ ಪ್ರಕಟವಾಗಿದೆಯೇ ಹೊರತು ಸ್ಥಳ ನಿಗದಿಯಾಗಿಲ್ಲ. ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವೆ ರದ್ದುಗೊಳಿಸಲಾಗಿದ್ದ ಪಂದ್ಯ ಮೇ 24 ರಂದು ಜೈಪುರದಲ್ಲಿ ನಡೆಯಲಿದೆ.

ಮೊದಲ ಕ್ವಾಲಿಫೈಯರ್ ಪಂದ್ಯ ಮೇ 29 ರಂದು ನಡೆಯುತ್ತದೆ. ಎಲಿಮಿನೇಟರ್ ಪಂದ್ಯ ಮರುದಿನ (ಮೇ 30) ನಡೆಯಲಿದೆ. ಮೊದಲ ಕ್ವಾಲಿಫೈಯರ್‌ನಲ್ಲಿ ಸೋತ ತಂಡ ಮತ್ತು ಎಲಿಮಿನೇಟರ್‌ನಲ್ಲಿ ಗೆದ್ದ ತಂಡ ಜೂ.1ರಂದು ಎರಡನೇ ಕ್ವಾಲಿಫೈಯರ್‌ನಲ್ಲಿ ಸೆಣಸಲಿವೆ. 2025ರ ಫೈನಲ್ ಪಂದ್ಯ ವಾರಾಂತ್ಯಕ್ಕೆ ಬದಲಾಗಿ ವಾರದ ಮಧ್ಯದಲ್ಲಿ (ಮಂಗಳವಾರ) ನಡೆಯಲಿದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದ್ದಾರೆ.

ಉಳಿದ ಪಂದ್ಯಗಳ ವೇಳಾಪಟ್ಟಿ

ಮೇ 17	ಬೆಂಗಳೂರು/ ಕೋಲ್ಕತ್ತಾ	ಸಂಜೆ 7.30	ಬೆಂಗಳೂರು
ಮೇ 18	ರಾಜಸ್ಥಾನ/ ಪಂಜಾಬ್	ಮ. 3.30	ಜೈಪುರ
ಮೇ 18	ಡೆಲ್ಲಿ/ ಗುಜರಾತ್	ಸಂಜೆ 7.30	ದೆಹಲಿ
ಮೇ 19	ಲಕ್ನೋ/ ಹೈದರಾಬಾದ್	ಸಂಜೆ 7.30	ಲಕ್ನೋ
ಮೇ 20	ಚೆನ್ನೈ/ ರಾಜಸ್ಥಾನ್	ಸಂಜೆ 7.30	ದೆಹಲಿ
ಮೇ 21	ಮುಂಬೈ/ ಡೆಲ್ಲಿ	ಸಂಜೆ 7.30	ಮುಂಬೈ
ಮೇ 22	ಗುಜರಾತ್/ ಲಕ್ನೋ	ಸಂಜೆ 7.30	ಅಹಮದಾಬಾದ್
ಮೇ 23	ಬೆಂಗಳೂರು/ಹೈದರಾಬಾದ್	ಸಂಜೆ 7.30	ಹೈದರಾಬಾದ್
ಮೇ 24	ಪಂಜಾಬ್/ ಡೆಲ್ಲಿ	ಸಂಜೆ 7.30	ಜೈಪುರ
ಮೇ 25	ಗುಜರಾತ್/ಚೆನ್ನೈ	ಮ. 3.30	ಅಹಮದಾಬಾದ್
ಮೇ 25	ಹೈದರಾಬಾದ್/ಕೋಲ್ಕತ್ತಾ	ಸಂಜೆ 7.30	ಡೆಲ್ಲಿ
ಮೇ 26	ಪಂಜಾಬ್/ ಮುಂಬೈ	ಸಂಜೆ 7.30	ಜೈಪುರ
ಮೇ 27	ಲಕ್ನೋ/ ಬೆಂಗಳೂರು	ಸಂಜೆ 7.30	ಲಕ್ನೋ
ಮೇ 29	ಮೊದಲ ಕ್ವಾಲಿಫೈಯರ್	ಸಂಜೆ 7.30	
ಮೇ 30	ಎಲಿಮನೇಟರ್	ಸಂಜೆ 7.30	
ಜೂ.1	ಎರಡನೇ ಕ್ವಾಲಿಫೈಯರ್	ಸಂಜೆ 7.30	
ಜೂ.3	ಫೈನಲ್	ಸಂಜೆ 7.30	



ಮೈಸೂರು ಮಿತ್ರ ಮಂಗಳವಾರ 13 ಮೇ 2025

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಜೆಡಿಎಸ್ ತಯಾರಿ

ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ

ಮಂಡ್ಯ, ಮೇ 12– ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಮಾರ್ಗದರ್ಶನದಲ್ಲಿ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನಾಯಕತ್ವದಲ್ಲಿ ಪಕ್ಷ ಸಂಘಟನೆ ಮತ್ತು ಸ್ಥಳೀಯ ಚುನಾವಣೆಗಳ ತಯಾರಿಗಾಗಿ ಚರ್ಚಿಸಲಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರು ಆರೋಗ್ಯವಾಗಿದ್ದು, ಯಾರೂ ಆತಂಕ ಪಡುವುದು ಬೇಡ. ಮೇ 14ರಂದು ನಡೆಯುವ ಕ್ಯಾಬಿನೆಟ್ ಸಭೆಯಲ್ಲಿ ಭಾಗಿಯಾಗುತ್ತಾರೆ ಎಂದು ಸ್ಪಷ್ಟಪಡಿಸಿದರು.

ಚನ್ನಪಟ್ಟಣದಲ್ಲಿ ಕುಮಾರಸ್ವಾಮಿ ಸೈಟ್ ಕೊಡುವುದಾಗಿ ಜನರಿಂದ 5 ಸಾವಿರ ಕಟ್ಟಿಸಿ ಕೊಂಡಿದ್ದಾರೆ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದ ಉಪಮುಖ್ಯಮಂತ್ರಿಗಳು ನಮ್ಮ ಬಗ್ಗೆ ದೂರುವ ಕೆಲಸ ಮಾಡಿದ್ದಾರೆ. ರಾಮನಗರ ಜಿಲ್ಲೆಯ ಅಭಿವೃದ್ಧಿಗೆ ದೇವೇಗೌಡರು ಹಾಗೂ ಕುಮಾರಸ್ವಾಮಿ ಶ್ರಮಿಸಿರುವುದನ್ನು ಅಲ್ಲಿನ ಜನರು ಗಮನಿಸಿದ್ದಾರೆ. ರಾಜಕೀಯವಾಗಿ ಮಾತನಾಡಲಿ. ಐದು ಸಾವಿರ ಯಾವಾಗ ಕಟ್ಟಿಸಿಕೊಂಡಿದ್ರು? ಇದರ ಬಗ್ಗೆ ಗೊತ್ತಿಲ್ಲ ಎಂದರು.

ಮಕ್ಕಳ ಭವಿಷ್ಯ ರೂಪಿಸಲು ಬೇಸಿಗೆ ಶಿಬಿರ: ಇದಕ್ಕೂ ಮುನ್ನ ಮಂಡ್ಯದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದ ಬಳಿ ಏರ್ಪಡಿಸಿದ್ದ ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡ ನಿಖಿಲ್ ಕುಮಾರಸ್ವಾಮಿ ಮೊದಲ ದಿನದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಬೇಸಿಗೆ ಶಿಬಿರ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಿಖಿಲ್ ಕುಮಾರಸ್ವಾಮಿ.

ನಂತರ ಮಾತನಾಡಿದ ಅವರು, ಮಕ್ಕಳು ಬೇಸಿಗೆ ರಜಾ ದಿನಗಳನ್ನು ವ್ಯರ್ಥ ಮಾಡದೆ, ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಬೇಸಿಗೆ ಶಿಬಿರ ಆಯೋಜನೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಮಕ್ಕಳು ಬೇಸಿಗೆ ಶಿಬಿರವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಇದೇ ವೇಳೆ ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಭಾರತೀಯ ವೀರಯೋಧರಿಗೆ ನಮನ ಸಲ್ಲಿಸಲಾಯಿತು. ತಾಯ್ನಾಡಿನ ನೆಲದ ರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದ ವೀರಯೋಧರ ಶೌರ್ಯ, ತ್ಯಾಗ ಹಾಗೂ ಬಲಿದಾನ ಸದಾ ಸ್ಮರಣೀಯ ಎಂದರು.

ನಂತರ 10ನೇ ತರಗತಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು. ಈ ವೇಳೆ ಮಾಜಿ ಸಚಿವ ಸಿ.ಎಸ್ ಪುಟ್ಟರಾಜು, ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್ ರಾಮಚಂದ್ರು, ಜಿಲ್ಲಾಧ್ಯಕ್ಷ ಡಿ.ರಮೇಶ್ ಉಪಸ್ಥಿತರಿದ್ದರು.

ಬುದ್ಧನ ಮಾರ್ಗದಲ್ಲಿ ಸಾಗಿದರೆ ಸುಖ, ಶಾಂತಿ, ನೆಮ್ಮದಿ

ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ

ಮಂಡ್ಯ, ಮೇ 12– ವಿದೇಶಿಗರು ಭಾರತೀಯರನ್ನು ಬುದ್ಧ ಜನಿಸಿದ ನಾಡಿನಿಂದ ಬಂದವರು ಎಂದು ಗುರುತಿಸುತ್ತಾರೆ. ಬುದ್ಧ ಎಂಬುದರ ನಿಜವಾದ ಅರ್ಥ ಅಂತರಂಗದ ಅರಿವು ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ ತಿಳಿಸಿದರು.

ಸೋಮವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಯೋಜಿಸಿದ್ದ 2569ನೇ ಭಗವಾನ್ ಬುದ್ಧ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಸಕಲ ಸಂಪತ್ತು ರಾಜ ವೈಭೋಗವನ್ನು ಜ್ಞಾನ, ನೆಮ್ಮದಿ, ಶಾಂತಿಗಾಗಿ ತೊರೆದವರು ಭಗವಾನ್ ಬುದ್ಧ ಎಂದರು.

ಗೌತಮ ಬುದ್ಧರ ಮಾರ್ಗದಲ್ಲಿ ಸಾಗಿದರೆ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ ಕಾಣ ಬಹುದು, ಬುದ್ಧ ಅವರು ಅತ್ಯಂತ ಸರಳವಾಗಿ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ನೈತಿಕ ಮೌಲ್ಯಗಳ ಕುರಿತು ತಿಳಿಸಿದ್ದಾರೆ. ಶಾಂತಿ ಮತ್ತು ನೆಮ್ಮದಿಯ ಮುಂದೆ ಯಾವುದು ದೊಡ್ಡದಲ್ಲ ಎಂದು ಅವರ ಪಂಚಶೀಲ ತತ್ವಗಳು ಹೇಳುತ್ತವೆ ಎಂದರು.



ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಭಗವಾನ್ ಬುದ್ಧ ಜಯಂತಿ ನಡೆಯಿತು.

ಕೊಳ್ಳೇಗಾಲದ ಚನ್ನಲಿಂಗನಹಳ್ಳಿಯ ಜೇತವನ ಬುದ್ಧವಿಹಾರದ ಭಂತೆ ಮನೋರಖ್ಖಿತ ಬಿಕ್ಕು ಮಾತನಾಡಿ, ಪಾಶ್ಚಿಮಾತ್ಯ ದೇಶಗಳಲ್ಲಿ ಜನರು ಬದ್ಧನ ತತ್ವ, ಸಂದೇಶ ಮತ್ತು ಅವರ ವಿಚಾರಗಳ ಪ್ರಭಾವಕ್ಕೊಳಗಾಗಿ ಬದ್ಧ ಪಥವನ್ನು ಅನುಸರಿಸುತ್ತಿದ್ದಾರೆ. ಪ್ರಪಂಚದಲ್ಲಿ 300ಕ್ಕೂ ಹೆಚ್ಚು ಧರ್ಮಗಳಿವೆ. ಧರ್ಮವು ಮನುಷ್ಯ ಮತ್ತು ದೇವರ ನಡುವಿನ ಸಂಬಂಧದ ಕುರಿತು ಹೇಳುತ್ತದೆ. ಆದರೆ ದಮ್ಮ ಮನುಷ್ಯ ಮತ್ತು ಅವನ ಮನಸ್ಸಿನ ನಡುವಿನ ಸಂಬಂಧ ತಿಳಿಸುತ್ತದೆ ಬುದ್ಧಿಸಂ ಧರ್ಮವಲ್ಲ ಎಂದರು.

ಮೈಸೂರು ವಿವಿ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಅಧ್ಯಾಪಕಿ ಡಾ.ಕಲಾವತಿ ಮಾತನಾಡಿ, ಬುದ್ಧನನ್ನು ಕೇವಲ ಸಮುದಾಯಗಳಿಗೆ ಸೀಮಿತ ಮಾಡಬೇಡಿ. ಬುದ್ಧನ ಪ್ರವಚನ ಕೇಳಲು ಬಡವರಿಂದ ಶ್ರೀಮಂತರವರೆಗೂ ಜನ ಸೇರುತ್ತಿದ್ದರು. ಅವರ ಧಮ್ಮಕ್ಕೆ ಅಷ್ಟು ಶಕ್ತಿ ಇತ್ತು, ಸಹಾಯ ಕರುಣೆ ಪ್ರೀತಿ ದಯೆ, ಸಹನೆ ಮಾನವೀಯ ಮೌಲ್ಯಗಳನ್ನು ಗೌತಮ ಬುದ್ಧ ಹೊಂದಿದ್ದರು ಎಂದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಸೀಲ್ದಾರ್ ಶಿವಕುಮಾರ್ ಬಿರಾದರ್, ಬೌದ್ಧ ಮಹಾಸಭೆಯ ರಾಜ್ಯ ಉಪಾಧ್ಯಕ್ಷ ಶಿವರಾಜ್, ಜಿಲ್ಲಾಧ್ಯಕ್ಷ ಪ್ರೊ.ಎಂ. ವೆಂಕಟೇಶ್, ದಲಿತಪರ ಸಂಘಟನೆ ಮುಖಂಡ ವೆಂಕಟಗಿರಿಯ್ಯ, ಮಾಜಿ ನಗರಸಭೆಯ ಅಧ್ಯಕ್ಷೆ ವಿಜಯಲಕ್ಷ್ಮೀ ಹಾಗೂ ಮುಖಂಡರಾದ ಕುಮಾರಿ, ಅಮ್ಜದ್ ಪಾಷಾ ಸೇರಿದಂತೆ ಇನ್ನಿತರರಿದ್ದರು.

ನೂತನ ನಿರ್ದೇಶಕರಿಗೆ ಮಾಜಿ ಸಚಿವ ಸಿಎಸ್‌ಪಿ ಅಭಿನಂದನೆ



ನೂತನ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಾಂಡವಪುರ, ಮೇ 12– ತಾಲೂಕಿನ ಕ್ಯಾತನಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ಜೆಡಿಎಸ್–ಬಿಜೆಪಿ ಬೆಂಬಲಿತ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಕ್ಯಾತನಹಳ್ಳಿ ಪಿಎಸಿಎಸ್ ಜೆಡಿಎಸ್–ಬಿಜೆಪಿ ಬೆಂಬಲಿತ ನೂತನ ನಿರ್ದೇಶಕರಾದ ಅಭಿಷೇಕ್ (ಗವೀಗೌಡರ ಮನು) ಹಾಗೂ ರೈಲ್ವೇ ಶಿವಣ್ಣನವರ ಯಶ್ವಂತ್ ಅವರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ತಾಲೂಕಿನ ಕ್ಯಾತನಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಅಭಿಷೇಕ್ ಹಾಗೂ ಯಶ್ವಂತ್ ಅವರನ್ನು ಮತದಾರರು ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ನಿರ್ದೇಶಕರು ಜೊತೆಗೂಡಿ ಸಹಕಾರ ಸಂಘದ ಅಭಿವೃದ್ಧಿಗೆ ಕೆಲಸ ಮಾಡಬೇಕು. ಸಹಕಾರ ಸಂಘಗಳು ರೈತರ ಬೆನ್ನೆಲುಬಾಗಿದೆ. ಸಹಕಾರ ಸಂಘದ ಮೂಲಕ ರೈತರಿಗೆ ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು ಎಂದರು.

ಈ ವೇಳೆ ಜೆಡಿಎಸ್ ರಾಜ್ಯ ರೈತ ವಿಭಾಗದ ಮಾಜಿ ಉಪಾಧ್ಯಕ್ಷ ಗವೀಗೌಡ, ಪ್ರವೀಣ್, ಚೇತನ್, ಎಪಿಎಂಸಿ ಮಾಜಿ ಅಧ್ಯಕ್ಷ ಸುರೇಂದ್ರ, ರೇವಣ್ಣ, ರಾಜೇಶ್, ಮಿಥುನ್, ವಾಸು, ತಿಮ್ಮಪ್ಪ, ಸುಬ್ಬಣ್ಣ, ಅರುಣ, ವಿಜಿ, ಡಾಲು ಸೇರಿದಂತೆ ಹಲವರಿದ್ದರು.

ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಿ

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್

ಪಾಂಡವಪುರ, ಮೇ 12– ಹೈನುಗಾರಿಕೆಯಲ್ಲಿ ರೈತ ಮಹಿಳೆಯ ಪಾತ್ರ ಅಪಾರವಾಗಿದೆ. ಒಕ್ಕೂಟಕ್ಕೆ ಗುಣಮಟ್ಟದ ಹಾಲು ಪೂರೈಕೆ ಮಾಡುತ್ತಿರುವುದರಿಂದಲೇ ನಮ್ಮ ಹಾಲು ದೆಹಲಿ ಮಾರುಕಟ್ಟೆಯಲ್ಲೂ ಮಾರಾಟವಾಗುತ್ತಿದೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ತಾಲೂಕಿನ ದೊಡ್ಡಬ್ಯಾಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಹಮ್ಮಿ ಕೊಂಡಿದ್ದ ಅಭಿನಂದನೆ ಹಾಗೂ ಕಾಲುಬಾಯಿ ಜ್ವರ ಲಸಿಕೆ ಹಾಕುವ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಹೈನುಗಾರಿಕೆ ರೈತರನ್ನು ಆರ್ಥಿಕವಾಗಿ ಅಭಿವೃದ್ಧಿ ಪಡಿಸುತ್ತದೆ. ನಗರದಲ್ಲಿ ಉದ್ಯೋಗದಲ್ಲಿದ್ದ ಸಾಕಷ್ಟು ಯುವಕರು ಉದ್ಯೋಗ ಬಿಟ್ಟು ಸ್ವಗ್ರಾಮಕ್ಕೆ ಆಗಮಿಸಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಪ್ರತಿಯೊಬ್ಬ ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದರು.

ರಾಸುಗಳಿಗೆ ವಿಮೆ ಮಾಡಿಸುವ ವಿಚಾರದಲ್ಲಿ ರೈತರು ನಿರ್ಲಕ್ಷ್ಯ ಮಾಡಬಾರದು. ಬಹಳಷ್ಟು ರೈತರು ಸಾಲಸೋಲ ಮಾಡಿ ಹಸುಗಳನ್ನು ಸಾಕಾಣೆ ಮಾಡುತ್ತಾರೆ. ಒಂದು ವೇಳೆ ರಾಸುಗಳು ಅಕಾಲಿಕ ಮರಣಕ್ಕೆ ತುತ್ತಾದರೆ ರೈತನ ಬದುಕು ಬೀದಿಗೆ ಬರುತ್ತದೆ. ಹಾಗಾಗಿ ಒಕ್ಕೂಟದಿಂದ ಮಾಡಿಸುವ ರಾಸುಗಳ ವಿಮೆಯನ್ನು ಕಡ್ಡಾಯವಾಗಿ ಮಾಡಿಸಬೇಕು. ಜೊತೆಗೆ ಗುಂಪು ವಿಮೆಯನ್ನು ಮಾಡಿಸುವ ಮೂಲಕ ಒಕ್ಕೂಟದ ಸೌಲಭ್ಯ ಬಳಕೆ ಮಾಡಿಕೊಳ್ಳಬೇಕು ಎಂದರು.



ದೊಡ್ಡಬ್ಯಾಡರಹಳ್ಳಿ ಡೇರಿಯಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್ ಮಾತನಾಡಿದರು.

ಈ ವೇಳೆ ಗ್ರಾಮಸ್ಥರು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಅಭಿನಂದಿಸಿದರು. ಬಳಿಕ ರಾಸುಗಳಿಗೆ ಕಾಲು ಬಾಯಿ ಜ್ವರ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು. ಮಾರ್ಗ ವಿಸ್ತರಣಾಧಿಕಾರಿ ಎನ್.ಎನ್.ಜಗದೀಶ್, ಮಾರುಕಟ್ಟೆ ಪರಿವೀಕ್ಷಕ ರಾಜು, ಡೇರಿ ಅಧ್ಯಕ್ಷ ಡಿ.ಎಸ್. ಚಂದ್ರಶೇಖರ್, ಉಪಾಧ್ಯಕ್ಷೆ ಸಣ್ಣಮ್ಮ ನಿರ್ದೇಶಕರಾದ ಬೊಮ್ಮೇರ್ಗೌಡ, ಎನ್.ನಿಂಗರಾಜು, ಬಿ.ಎಂ.ಲಿಂಗರಾಜು, ಡಿ.ಎನ್.ಉಮೇಶ್, ನಿಂಗಣ್ಣ, ಬ್ರಹ್ಮೇಶ್, ಪುಟ್ಟಸ್ವಾಮಿಶೆಟ್ಟಿ, ರತ್ನಮ್ಮ, ಪವಿತ್ರ, ನಾಮಿನಿ ನಿರ್ದೇಶಕಿ ಸವಿತ, ಕಾರ್ಯದರ್ಶಿ ಸಿ.ನಾಗೇಂದ್ರ, ಮುಖಂಡರಾದ ಪೊಲೀಸ್ ಪಟೇಲ್ ನಿಂಗೇಗೌಡ, ಯ.ಅಣ್ಣೇಗೌಡ, ನಿಂಗೇಗೌಡ, ಪಟೇಲ್ ಆನಂದ್, ಗ್ರಾಪಂ ಮಾಜಿ ಅಧ್ಯಕ್ಷರಾದ ಡಿ.ಎನ್.ರವಿ, ಶಂಕರ್, ಡಿ.ಟಿ.ಧರ್ಮ, ಪ್ರಸನ್ನ, ಪಶುವೈದ್ಯ ಕೊಂಡಯ್ಯ ಸೇರಿದಂತೆ ಹಲವರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಇಬ್ಬರು ಸಾವು

ನಾಗಮಂಗಲ, ಮೇ 12– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಸಾವನ್ನಪ್ಪಿರುವ ಘಟನೆ ಶ್ರೀರಂಗಪಟ್ಟಣ–ಜೇವರ್ಗಿ ರಾಜ್ಯ ಹೆದ್ದಾರಿಯ ಅಂಚೆಭೂವನಹಳ್ಳಿ ಗ್ರಾಮದ ಬಳಿ ಭಾನುವಾರ ಸಂಜೆ ನಡೆದಿದೆ.

ತುಮಕೂರು ಜಿಲ್ಲೆ ಗುಬ್ಬಿ ತಾಲೂಕು ಸಿ.ಎಸ್.ಪುರ ಗ್ರಾಮದ ನಿವಾಸಿ ಕುಮಾರ್ (45), ರಾಮಣ್ಣ(50) ಸಾವನ್ನಪ್ಪಿದವರು. ಇವರು ತಾಲೂಕಿನ ಮುಳುಕಟ್ಟೆ ಗ್ರಾಮದ ಆದಿದೇವತೆ ಪರ ಕಾರ್ಯಕ್ರಮಕ್ಕೆ ಅಡುಗೆ ಮಾಡಲು ಬಂದಿದ್ದರು ಎನ್ನಲಾಗಿದೆ. ಕೆಲಸ ಮುಗಿಸಿಕೊಂಡು ಸಂಜೆ ತಮ್ಮ ಬೈಕ್‌ನಲ್ಲಿ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಅಂಚೆಭೂವನಹಳ್ಳಿ ಗ್ರಾಮದ ಬಳಿ ಕಾರು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ರಾಮಣ್ಣ ಸ್ಥಳದಲ್ಲೇ ಸಾವನ್ನಪ್ಪಿದರೆ, ಕುಮಾರ್ ಚಿಕಿತ್ಸೆಗಾಗಿ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಘಟನೆಗೆ ಕಾರಿನ ಅತಿ ವೇಗ ಹಾಗೂ ಅಜಾಗರೂಕತೆ ಕಾರಣ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಳ್ಳೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಲಕ್ಷ್ಮಮ್ಮ ನಿಧನ



ಕಿಕ್ಕೇರಿ, ಮೇ 12– ಪಟ್ಟಣದ ಹೊಸಬೀದಿ ನಿವಾಸಿ ಲೇ.ಆರ್.ನಂಜಪ್ಪಶೆಟ್ಟಿ ಅವರ ಪತ್ನಿ ಲಕ್ಷ್ಮಮ್ಮ(87) ಸೋಮವಾರ ಮೃತರಾದರು. ಮೃತರು ಐವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಿತು.

ಮಂಜೇಗೌಡ



ಕಿಕ್ಕೇರಿ, ಮೇ 12– ಇಲ್ಲಿನ ಸೊಳ್ಳೇಪುರ ಗ್ರಾಮದ ನಿವಾಸಿ ಎಸ್.ಕೆ. ಮಂಜೇಗೌಡ(67) ಸೋಮವಾರ ಮೃತರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 10.30ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಉಗ್ರವಾದ ನಿಲ್ಲಿಸಲೇಬೇಕು

ಸಿಂಧೂರ ಅಳಿಸಿದವರಿಗೆ ಅರಿವಾಗಿದೆ: ನಮ್ಮ ದೇಶದ ಸೈನಿಕರು, ವಿಜ್ಞಾನಿಗಳು ಹಾಗೂ ಸಶಸ್ತ್ರ ಬಲಕ್ಕೆ ಸೆಲ್ಯೂಟ್ ಮಾಡುತ್ತೇನೆ. ಪಹಲ್ಗಾಮ್‌ನಲ್ಲಿ ಏ.22ರಂದು ಧರ್ಮ ಕೇಳಿ ಅಮಾಯಕರನ್ನು ಅವರ ಕುಟುಂಬದವರ ಮುಂದೆಯೇ ಭೀಕರವಾಗಿ ಹತ್ಯೆ ಮಾಡಿದರು. ಅದು ಉಗ್ರವಾದದ ಅತ್ಯಂತ ಕ್ರೂರ ಮುಖವಾಗಿತ್ತು. ನಮ್ಮ ಸಹೋದರಿಯರ ಸಿಂಧೂರ ಅಳಿಸಿದ ಉಗ್ರರಿಗೆ ಈಗ ಅದರ ಪರಿಣಾಮ ಅರಿವಾಗಿದೆ. ಭಾರತ ಇಂತಹದೊಂದು ಕಠಿಣ ನಿರ್ಧಾರ ಮಾಡುತ್ತದೆ ಎಂದು ಅವರು ಕನಸಿನಲ್ಲೂ ಊಹಿಸಿರಲಿಲ್ಲ. 'ಆಪರೇಷನ್ ಸಿಂಧೂರ' ಕೇವಲ ಹೆಸರಲ್ಲ, ಇದು ಭಾರತೀಯತೆಯ ಪ್ರತೀಕ ಎನ್ನುವುದು ಅರ್ಥವಾಗಿದೆ ಎಂದು ನರೇಂದ್ರ ಮೋದಿ ಹೇಳಿದರು.

ಸಂಕಲ್ಪ ಸಾಕಾರವಾಗಿದೆ: ಜಾಗತಿಕ ಉಗ್ರವಾದದ ವಿಶ್ವವಿದ್ಯಾಲಯಗಳಾಗಿದ್ದ ಉಗ್ರರ ನೆಲೆಗಳನ್ನು ಭಾರತ ಧ್ವಂಸಗೊಳಿಸಿದೆ. ಬಹಾವಲ್ಪುರ, ಮುರಿಡ್ಕೆ ರೀತಿಯ ಎಲ್ಲಾ ಉಗ್ರ ನೆಲೆಗಳ ಭಾರತ ಒಂದೇ ಏಟಿಗೆ ನಿರ್ನಾಮ ಮಾಡಿದೆ. ಭಾರತೀಯ ಸೇನೆಯ ದಾಳಿಯಲ್ಲಿ 100ಕ್ಕೂ ಹೆಚ್ಚು ಉಗ್ರರು ಹತರಾಗಿದ್ದಾರೆ. ಆರಾಮವಾಗಿ ಓಡಾಡಿಕೊಂಡಿದ್ದ ದಾಳಿಯ ಮಾಸ್ಟರ್‌ಮೈಂಡ್‌ಗಳ ಹುಡುಕಿ ಹುಡುಕಿ ಹೊಡೆದಿದ್ದೇವೆ. ಡ್ರೋನ್‌ಗಳ ಮೂಲಕ ಉಗ್ರರ ನೆಲೆ, ವಾಯುನೆಲೆಗಳನ್ನು ಧ್ವಂಸಗೊಳಿಸಲಾಗಿದೆ ಎಂದು ತಿಳಿಸಿದರು.

ಪಾಕ್ ಹೃದಯಕ್ಕೇ ದಾಳಿ: ಉಗ್ರರ ನೆಲೆಗಳ ಮೇಲೆ ಭಾರತ ದಾಳಿ ನಡೆಸಿದ್ದರಿಂದ ಪಾಕಿಸ್ತಾನ ಭಯದಲ್ಲೇ ದುಸ್ಸಾಹಸಕ್ಕೆ ಮುಂದಾಯಿತು. ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಬೆಂಬಲ ನೀಡದೆ ಭಾರತದ ಮೇಲೆಯೇ ದಾಳಿ ನಡೆಸಿತು. ಹತಾಶೆಯಿಂದ ಗಡಿಭಾಗದ ಶಾಲೆ–ಕಾಲೇಜು, ಗುರುದ್ವಾರ, ಮಂದಿರಗಳನ್ನು ಗುರಿ ಮಾಡಿತ್ತು ಆದರೆ ಪಾಕಿಸ್ತಾನದ ಡ್ರೋನ್‌ಗಳು, ಕ್ಷಿಪಣಿಗಳು ಹೇಗೆ ತರಗೆಲೆಗಳಂತೆ ಉದುರಿ ಹೋದವು ಎಂದು ಇಡೀ ಜಗತ್ತೇ ನೋಡಿದೆ. ಭಾರತೀಯ ಸೈನ್ಯದ ಪರಾಕ್ರಮ ಅರಿವಾಗಿದೆ. ಪಾಕಿಸ್ತಾನ ಗಡಿಯಲ್ಲಷ್ಟೇ ದಾಳಿ ನಡೆಸಿದೆ. ಆದರೆ ಭಾರತದ ಕ್ಷಿಪಣಿ ಹಾಗೂ ಡ್ರೋನ್‌ಗಳು ಪಾಕಿಸ್ತಾನದ ಉಗ್ರರ ನೆಲೆಗಳು, ಕಟ್ಟಡಗಳನ್ನು ನೆಲಸಮಗೊಳಿಸುವುದರ ಜೊತೆಗೆ ಆ ದೇಶದ ಹೃದಯಕ್ಕೇ ದಾಳಿ ಮಾಡಿವೆ. ಗಡಿಯಲ್ಲಿ ಯುದ್ಧಕ್ಕೆ ಸಿದ್ಧವಾಗಿದ್ದ ಪಾಕಿಸ್ತಾನದ ತಲೆಯ ಮೇಲೆಯೇ ಹೊಡೆದಿವೆ. ಪಾಕಿಸ್ತಾನ ನಮ್ಮನ್ನು ಕಾಪಾಡಿ ಎಂದು ಜಗತ್ತಿನ ಮುಂದೆ ಕಣ್ಣೀರಿಟ್ಟು ಅಂಗಲಾಚಿದೆ ಎಂದರು.

ಆಪರೇಷನ್ ಮುಗಿದಿಲ್ಲ: ಸರ್ಜಿಕಲ್ ಸ್ಟ್ರೈಕ್ ಮತ್ತು ಏರ್ ಸ್ಟ್ರೈಕ್ ಬಳಿಕ 'ಆಪರೇಷನ್ ಸಿಂಧೂರ' ಆರಂಭವಾಗಿದೆ. ಇದಿನ್ನೂ ಮುಗಿದಿಲ್ಲ, ಸದ್ಯಕ್ಕೆ ನಿಲ್ಲಿಸಿದ್ದೇವೆ ಅಷ್ಟೇ. ಭಾರತದ ದೃಷ್ಟಿಯಲ್ಲಿ ಉಗ್ರರು ಹಾಗೂ ಉಗ್ರವಾದದ ಪೋಷಕರ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಉಗ್ರರನ್ನು ಸಮಾಧಿ ಮಾಡಲು ಸೇನೆಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಭಯೋತ್ಪಾದಕರ ಧೂಳೀಪಟ ಮಾಡಲು ಸಶಸ್ತ್ರ ಪಡೆಗಳು ಸಜ್ಜಾಗಿವೆ. ಮೇಕ್ ಇನ್ ಇಂಡಿಯಾ ಶಸ್ತ್ರಾಸ್ತ್ರಗಳ ಸಾಮರ್ಥ್ಯವೂ ಸಾಬೀತಾಗಿದೆ. ಪ್ರತಿಯೊಬ್ಬ ಭಾರತೀಯರೂ ಹೋರಾಟಕ್ಕೆ ಸಿದ್ಧರಿದ್ದಾರೆ. ದೇಶ ಒಗ್ಗಟ್ಟಾಗಿದ್ದರೆ ಎಂತಹ ದೊಡ್ಡ ನಿರ್ಧಾರಗಳೂ ಸಾಧ್ಯ ಎಂದರು.

ಟೆಸ್ಟ್ ಕ್ರಿಕೆಟ್‌ಗೆ ಕೊಹ್ಲಿ ವಿದಾಯ

36 ವರ್ಷದ ವಿರಾಟ್ ಕೊಹ್ಲಿ ಈವರೆಗೂ 123 ಪಂದ್ಯಗಳನ್ನಾಡಿದ್ದು, 210 ಇನ್ನಿಂಗ್ಸ್‌ಗಳಲ್ಲಿ 46.9 ಸರಾಸರಿಯಲ್ಲಿ 9230 ರನ್ ಗಳಿಸಿದ್ದಾರೆ. ಅಂತೆಯೇ ಅಜೇಯ 254 ರನ್ ಅವರ ವೈಯುಕ್ತಿಕ ಗರಿಷ್ಠ ಸ್ಕೋರ್ ಆಗಿದ್ದು, ಅಂತೆಯೇ 30 ಶತಕ ಮತ್ತು 31 ಅರ್ಧಶತಕಗಳನ್ನು ಗಳಿಸಿದ್ದಾರೆ. 'ವಿರಾಟ್ ಕೊಹ್ಲಿ ಭಾರತದ ಟೆಸ್ಟ್ ಶ್ರೇಷ್ಠ ಆಟಗಾರರಲ್ಲಿ ಒಬ್ಬರು. ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಸಾಟಿಯಿಲ್ಲದ ಪರಂಪರೆಯನ್ನು ಅವರು ಬಿಟ್ಟು ಹೋಗಿದ್ದಾರೆ' ಎಂದು ಐಸಿಸಿ ಹೇಳಿದೆ. ಐಪಿಎಲ್‌ನಲ್ಲಿ ಕೊಹ್ಲಿ ಪ್ರತಿನಿಧಿಸುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು, ತಮ್ಮ ಸ್ಟಾರ್ ಆಟಗಾರ ಮತ್ತು ಮಾಜಿ ನಾಯಕನನ್ನು ಟೆಸ್ಟ್ ರಂಗದಿಂದ ಮಿಸ್ ಮಾಡಿಕೊಳ್ಳುವುದಾಗಿ ಹೇಳಿದೆ. 'ಅವರ ವಾಕಿಂಗ್ ಶೈಲಿ, ಅಮೋಘ ಹೊಡೆತಗಳು, ಅವರ ಎಕ್ಸ್‌ಪ್ರೆಶನ್, ಅವರ ಸೆಲೆಬ್ರೇಶನ್ ಎಲ್ಲವನ್ನೂ ನಾವು ಮಿಸ್ ಮಾಡಿಕೊಳ್ಳುತ್ತೇವೆ' ಎಂದು ಆರ್‌ಸಿಬಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ರಹಸ್ಯ ಕೆದಕುತ್ತಿರುವ ಇಡಿ!

ಕಾರಣ ಕೊಡಿ ಎಂದು ಇಡಿ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಹೆಬ್ಬಾಳು ಗ್ರಾಮದ ಸರ್ವೆ ನಂ.88/2ರ 2 ಎಕರೆ ಭೂಮಿಗೆ ಪರಿಹಾರ ನೀಡಿದ ಬಗ್ಗೆ, ನೋಟಿಫಿಕೇಷನ್ ಮಾಡಿದ್ದರೆ ಅದರ ಪ್ರತಿ, ಅದರ ಮಾಲೀಕರು ಯಾರು? ಹಂಚಿಕೆ ಕಡತವನ್ನು ಸಲ್ಲಿಸುವಂತೆಯೂ ಜಾರಿ ನಿರ್ದೇಶನಾಲಯವು ಮುಡಾ ಆಯುಕ್ತರಿಗೆ ಸೂಚನೆ ನೀಡಿದೆ. ದಟ್ಟಗಳ್ಳಿ ಸರ್ವೆ ನಂಬರ್ 168, 169, 176 ಮತ್ತು 183/1ರ ಭೂಮಿಗೆ ಪರಿಹಾರವಾಗಿ 28 ನಿವೇಶನಗಳನ್ನು ಹಂಚಿಕೆ ಮಾಡುವ ಮೊದಲು ನಗರ ಯೋಜನಾ ಶಾಖೆ, ಇಂಜಿನಿಯರಿಂಗ್ ಶಾಖೆಗಳಿಂದ ವರದಿ, ಅಭಿಪ್ರಾಯ ಪಡೆಯಲಾಗಿತ್ತೇ? ಪಡೆದಿದ್ದರೆ ಅದರ ಪ್ರತಿಯನ್ನೂ ಸಲ್ಲಿಸುವಂತೆ ಇಡಿ ಅಧಿಕಾರಿಗಳು ಸೂಚಿಸಿದ್ದಾರೆ.

ಆರ್ಥಿಕ ಸಮಾನತೆಯಡಿ ಅಭಿವೃದ್ಧಿಗೆ ಗ್ಯಾರಂಟಿ ಜಾರಿ

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಇಂದು ಗೌತಮ ಬುದ್ಧ ಅವರ ಜನ್ಮ ದಿನ. ಸರ್ಕಾರದಿಂದ ಬುದ್ಧ ಜಯಂತಿ ಆಚರಿಸುತ್ತಿದ್ದೇವೆ. ಬುದ್ಧ ಸುಮಾರು 2500 ವರ್ಷಗಳ ಹಿಂದೆ ಭಾರತದಲ್ಲಿ ಜನಿಸಿ ಜೀವಿಸಿದ್ದರು. ಬುದ್ಧ ಅವರು ಆಸೆಯೇ ದುಃಖಕ್ಕೆ ಕಾರಣ ಎಂದು ತಿಳಿಸಿದ್ದರು ಎಂದರು.

ನಾವು ಇಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತೋತ್ಸವ ಆಚರಿಸುತ್ತಿದ್ದೇವೆ. ಬಸವಣ್ಣ ಅವರು ದಯೆಯೇ ಧರ್ಮದ ಮೂಲವಯ್ಯ ಎಂದು ತಿಳಿಸಿದ್ದಾರೆ. ದೇಶದಲ್ಲಿ ಹಲವು ಜಾತಿ ಧರ್ಮಗಳ ಜನರು ವಾಸಿಸುತ್ತಿದ್ದೇವೆ. ನಾವು ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣಬೇಕು. ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ಮಾನವತಾವಾದಿಗಳು ಎಂದು ಕರೆಯುತ್ತೇವೆ. ಮನುಷ್ಯ ಮನುಷ್ಯನನ್ನು ಪ್ರೀತಿಸಬೇಕು ಎಂದರು.

ಎಲ್ಲದಕ್ಕೂ ಶಿಕ್ಷಣ ಮುಖ್ಯ: ಪ.ಜಾತಿ ಒಳಮೀಸಲಾತಿ ಜಾರಿಗೆ ನ್ಯಾ.ನಾಗಮೋಹನ್ ದಾಸ್ ಅವರ ಏಕಸದಸ್ಯ ಆಯೋಗ ರಚಿಸಿ ಸಮೀಕ್ಷೆ ಮಾಡಿಸಲಾಗುತ್ತಿದೆ. ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಜನರು ಅಭಿವೃದ್ಧಿ ಹೊಂದಲು ಆರ್ಥಿಕವಾಗಿ ಸಬಲರಾಗಲು ಶಿಕ್ಷಣ ಅತೀ ಮುಖ್ಯ. ನಾವೆಲ್ಲರೂ ಮನುಷ್ಯರಾಗಿ ಬದುಕಬೇಕು. ಆಗ ನಾವು ಬುದ್ಧ, ಬಸವ, ಅಂಬೇಡ್ಕರ್ ಗಾಂಧಿ ಅವರಿಗೆ ಗೌರವ ನೀಡಿದಂತಾಗುತ್ತದೆ ಎಂದರು.

ಜಾತಿಗಣತಿ ಆರಂಭವಾಗಿದ್ದು, ದಾಖಲೆಗಳನ್ನು ನೀಡುವ ವೇಳೆ ಸರಿಯಾದ ಮಾಹಿತಿ ನೀಡಬೇಕು. ಆಯಾ ಜಾತಿ ಮುಖಂಡರು ದಾರಿ ತಪ್ಪಿಸುವ ಕೆಲಸ ಮಾಡಬೇಡಿ ಎಂದು ಹೇಳಿದರು.

ಒಗ್ಗಟ್ಟಾಗಿದ್ದೇವೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಭಾರತ ವೈವಿಧ್ಯಮಯವಾದ ದೇಶ. ಬಹುತ್ವದಿಂದ ಕೂಡಿರುವ ದೇಶದಲ್ಲಿ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ದೇಶಕ್ಕೆ ಅಪಾಯ ಬಂದರೆ ನಾವೆಲ್ಲರೂ ಒಟ್ಟಾಗಿ ನಿಲ್ಲುತ್ತೇವೆ. ಡಾ.ಅಂಬೇಡ್ಕರ್ ಅವರು ದೇಶಕ್ಕೆ ಶ್ರೇಷ್ಠವಾದ ಸಂವಿಧಾನ ನೀಡಿದ್ದಾರೆ. ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದ್ದಾರೆ. ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಂವಿಧಾನದ ಪೂರ್ವ ಪೀಠಿಕೆ ಓದಿಸಿ ಅರ್ಥೈಸಲಾಗುತ್ತಿದೆ. ಬೀದರ್‌ನಿಂದ ಚಾಮರಾಜನಗರವರೆಗೆ ಮನವ ಸರಪಳಿ ನಿರ್ಮಿಸಿ ಸಂವಿಧಾನ ರಕ್ಷಣೆಯ ಶಪಥ ಮಾಡಿದ್ದೇವೆ ಎಂದು ತಿಳಿಸಿದರು.

ಅಭಿವೃದ್ಧಿಗೆ ಬೆಂಬಲಿಸಿ: ಸಚಿವ ಕೆ.ವೆಂಕಟೇಶ್ ಮಾತನಾಡಿ, ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಿ ಈ ಭಾಗದ ಜಿಲ್ಲೆಗಳ ಅಭಿವದ್ಧಿಗೆ 3400 ಕೋಟಿ ನೀಡಲಾಗಿದೆ. ಶಾಸಕ ಅನಿಲ್ ಅವರು ತಾಲೂಕಿನಲ್ಲಿ ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇದೇ ರೀತಿ ಅಭಿವೃದ್ಧಿ ಮಾಡಲು ಮುಂದೆಯೂ ತಮ್ಮ ಅವಕಾಶ ಅತಿ ಮುಖ್ಯ. ಗ್ಯಾರಂಟಿ ಯೋಜನೆಗಳು ಜನರ ಜೀವನ ಮಟ್ಟವನ್ನು ಸುಧಾರಿಸಿವೆ ಎಂದರು.

ನಾವು ಎಲ್ಲಾ ಹಕ್ಕುಗಳನ್ನು ಪಡೆಯಬೇಕು: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಅಂಬೇಡ್ಕರ್ ತೋರಿಸಿರುವ ಹಾದಿಯಲ್ಲಿ ನಾವು ನಡೆಯಬೇಕು. ನಾವು ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಬೆಳೆಯ ಬೇಕು. ನಾವು ಹಿಂದೆ ಕಳೆದುಕೊಂಡ ಎಲ್ಲಾ ಹಕ್ಕುಗಳನ್ನು ನಾವು ಪಡೆಯಲು ಶಿಕ್ಷಣ ಪಡೆಯಬೇಕು. ಹಾಂಡ್ ಪೋಸ್ಟ್ ನಿಂದ ಬಾವಲಿ ವರೆಗೆ ರಸ್ತೆ ಅಗಲೀಕರಣಕ್ಕೆ ಕಳೆದ ಬಾರಿ ಅನುದಾನ ನೀಡಲಾಗಿತ್ತು. ಆದರೆ ತಾಂತ್ರಿಕ ಕಾರಣಗಳಿಂದ ರಸ್ತೆ ಆಗಿಲ್ಲ. ಈ ಬಾರಿ ಆಗುತ್ತದೆ. ತಾಲೂಕಿನ ಎಲ್ಲಾ ರಸ್ತೆಗಳ ಅಭಿವೃದ್ಧಿ ಮಾಡಲಾಗುವುದು ಎಂದರು.

ತಂದೆಯಂತೆ ಅಭಿವೃದ್ಧಿಗೆ ಶ್ರಮಿಸಿದ್ದೇನೆ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಅನಿಲ್ ಮಾತನಾಡಿ, 140 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಮಾಜಿ ಸಂಸದ ಧ್ರುವನಾರಾಯಣ್ ಅವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ನನ್ನ ತಂದೆ ಚಿಕ್ಕಮಾದು ಅವರು ಶಾಸಕರಾಗಿದ್ದ ವೇಳೆ 1900 ಕೋಟಿ ಅನುದಾನ ತಂದು ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ತಂದೆಯಂತೆ ನಾನು ಸಹ ಕಳೆದ 7 ವರ್ಷಗಳಿಂದ ಸಾವಿರಾರು ಕೋಟಿ ರೂ.ಗಳ ಹಣವನ್ನು ತಂದು ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದರು.

ಅನುದಾನಕ್ಕೆ ಮನವಿ: ನಮ್ಮ ತಾಲೂಕಿಗೆ ಅತೀ ಹೆಚ್ಚು ಅನುದಾನ ನೀಡಿದ್ದು ಸಿದ್ದರಾಮಯ್ಯನವರು. ನಮ್ಮ ತಾಲೂಕಿಗೆ ಡಬಲ್ ರಸ್ತೆಗೆ ಮನವಿ ಮಾಡಲಾಗಿದೆ. ಇದಕ್ಕೆ 300 ಕೋಟಿ ಅನುದಾನ ನೀಡಿದ್ದಾರೆ. ನಮ್ಮ ತಾಲೂಕಿಗೆ ಹೆಚ್ಚು ಗಾರ್ಮೆಂಟ್ಸ್‌ಗಳು ಹಾಗೂ ಕಾರ್ಖಾನೆಗಳು ಬೇಕು. ಇದರಿಂದ ಇಲ್ಲಿನ ಜನರಿಗೆ ಉದ್ಯೋಗಗಳು ದೊರೆಯುತ್ತವೆ. ನಮ್ಮ ತಾಲೂಕಿನಲ್ಲಿ ಹೆಚ್ಚು ಎಸ್‌ಟಿ, ಎಸ್‌ಸಿ ಜನಸಂಖ್ಯೆ ಇದ್ದು, ಇಲ್ಲಿಗೆ ಎಸ್‌ಸಿಪಿ ಹಾಗೂ ಟಿಎಸ್‌ಪಿ ಅನುದಾನ ನೀಡಬೇಕು. ತಾಲೂಕಿಗೆ 5 ಎಕರೆ ಜಾಗ ನೀಡಿ ಅಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಿ ಕೊಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂಭಾಗದಲ್ಲಿ 720 ಕೆಜಿ ತೂಕದ ಪಂಚ ಲೋಹದ ಅಂಬೇಡ್ಕರ್ ಪುತ್ಥಳಿಯನ್ನು ಲೋಕಾರ್ಪಣೆ ಮಾಡಿದರು.

ಅರಣ್ಯ ವಸತಿ ವಿಹಾರ ಧಾಮಗಳ ನಿಗಮ ಸಿಎಸ್‌ಆರ್ ನಿಧಿಯಿಂದ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಂಬುಲೆನ್ಸ್, ಉದ್ದೂರಿನಲ್ಲಿರುವ ಶ್ರೀವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗೆ ಶಾಲಾ ವಾಹನ, ಸರಗೂರು ಪಟ್ಟಣ ಪಂಚಾಯಿತಿಗೆ ಶವ ಸಾಗಿಸುವ ವಾಹನವನ್ನು ಮುಖ್ಯಮಂತ್ರಿಗಳು ವಿತರಿಸಿದರು.

ವಿವಿಧ ಗ್ರಾಮಗಳಿಂದ ತಂದಿದ್ದ ಅಂಬೇಡ್ಕರ್ ಮತ್ತು ಬುದ್ದ ಸ್ತಬ್ಧ ಚಿತ್ರಗಳು ಜನರ ಗಮನ ಸೆಳೆದವು. ಈ ವೇಳೆ ಸಂಸದ ಸುನೀಲ್ ಬೋಸ್, ಶಾಸಕರಾದ ಡಿ.ರವಿಶಂಕರ್, ಗಣೇಶ್‌ಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಡಿ.ತಿಮ್ಮಯ್ಯ, ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿಜಯಕುಮಾರ್, ಪುರಸಭೆ ಅಧ್ಯಕ್ಷೆ ಶಿವಮ್ಮ, ಆದಿಕರ್ನಾಟಕ ಮಹಾಸಭಾಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ಮೈಮುಲ್ ನಿರ್ದೇಶಕ ಈರೇಗೌಡ, ಕುರುಬ ಸಮಾಜ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಕೆ.ಎಸ್.ಮಾಲೆಗೌಡ, ಪ್ರಧಾನ ಕಾರ್ಯದರ್ಶಿ ಚಿಕ್ಕಣ್ಣ, ಉಪಾಧ್ಯಕ್ಷ ವಿರೇಗೌಡ, ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಡಿಸಿ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್ ಸೇರಿದಂತೆ ಇತರರಿದ್ದರು.

ಸಂಪೂರ್ಣ ಯಶಸ್ಸು ಭಾರತೀಯ ಸೈನಿಕರಿಗೆ ಸಲ್ಲಬೇಕು

ಮಾತನಾಡುವುದು ಸೂಕ್ತವಲ್ಲ ಎಂದರು. ಕೆಪಿಸಿಸಿ ಟ್ವೀಟ್ ಬಗೆಯಾಗಲಿ ಅಥವಾ ಯುದ್ಧ ಸಂಬಂಧಿತ ಇತರೆ ವಿಚಾರದ ಬಗ್ಗೆಯಾಗಲಿ ನಾನು ಯಾವುದೇ ಪ್ರತಿಕ್ರಿಯೆ ನೀಡವುದಿಲ್ಲ. ಕದನ ವಿರಾಮ ಘೋಷಣೆ ವಿಚಾರಕ್ಕೆ ಮಾತ್ರ ನನ್ನ ಮಾತು ಸೀಮಿತ ಎಂದು ಸ್ಪಷ್ಟಪಡಿಸಿದರು. ಸಂಪುಟ ಪುನಾರಚನೆ ಯಾವಾಗ ಮಾಡುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಸಂಪುಟ ಪುನಾರಚನೆ ನೀವು ಮಾಡುತ್ತೀರಾ, ನಾನೇ ಮಾಡಬೇಕು ತಾನೆ. ಯಾವಾಗ ಮಾಡುತ್ತೇನೆ ಎಂದು ನಿಮಗೆ ಹೇಳಿಯೇ ಮಾಡುತ್ತೇನೆ ಎಂದರು.

ಸರ್ಕಾರದ 2 ವರ್ಷದ ಸಂಭ್ರಮಾಚರಣೆ ಮಾಡಲು ನಿರ್ಧಾರ ಮಾಡಲಾಗಿದೆ. ಆದರೆ ಯುದ್ಧ ಆರಂಭವಾದ ಕಾರಣ ಮಾಡಲು ಸಾಧ್ಯವಾಗಲಿಲ್ಲ. ಮುಂದೆ ಈ ಕಾರ್ಯಕ್ರಮ ಮಾಡುತ್ತೇವೆ. ನುಡಿದಂತೆ ನಡೆದ ಸರ್ಕಾರ ಎಂಬುದನ್ನು ಜನರಿಗೆ ಮನವರಿಕೆ ಮಾಡಲು ಈ ಕಾರ್ಯಕ್ರಮ ಆಯೋಜಿಸುತ್ತೇವೆ ಎಂದರು.

ಪಹಲ್ಗಾಮ್ ದಾಳಿ ಉಗ್ರರು ಏನಾದ್ರು?: ಕೇಂದ್ರ ಸರ್ಕಾರಕ್ಕೆ ಕಾಂಗ್ರೆಸ್ ಪ್ರಶ್ನೆ

ನವದೆಹಲಿ: ಪಹಲ್ಗಾಮ್ ಭಯೋತ್ಪಾದಕರ ದಾಳಿ ನಡೆಸಿದ ಅಪರಾಧಿಗಳನ್ನು ಬಂಧಿಸಲಾಗಿದೆಯೇ ಅಥವಾ ಹತ್ಯೆ ಮಾಡಲಾಗಿದೆಯೇ? ಹಾಗಾದರೆ, 'ಆಪರೇಷನ್ ಸಿಂಧೂರ' ಯಶಸ್ವಿಯಾಗಿದೆ ಎಂದು ಬಿಜೆಪಿ ಹೇಗೆ ಪರಿಗಣಿಸುತ್ತಿದೆ. ಉಗ್ರರ ದಾಳಿಯಿಂದ 26 ಮಂದಿ ಸಾವಿಗೆ ಕಾರಣವಾದ ಭದ್ರತಾ ವೈಫಲ್ಯಕ್ಕೆ ಯಾರು ಹೊಣೆ ಎಂದು ಸರ್ಕಾರ ಉತ್ತರಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ನವದೆಹಲಿಯ ಪಕ್ಷದ ಕೇಂದ್ರ ಕಚೇರಿಯಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಭೂಪೇಶ್ ಬಘೇಲ್, ಉಭಯ ದೇಶಗಳ ನಡುವಿನ ಕದನ ವಿರಾಮವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದರು. ಇದು ಸರ್ಕಾರದ ರಾಜತಾಂತ್ರಿಕ, ದೇಶದ ನಾಯಕತ್ವದ ವೈಫಲ್ಯವಾಗಿದೆ. ಈ ವಿಚಾರದಲ್ಲಿ ಮೂರನೇ ವ್ಯಕ್ತಿಗೆ ಮಧ್ಯಸ್ಥಿಕೆ ಮಾಡಲು ಅವಕಾಶ ನೀಡುವಂತೆ ದೇಶದ ವಿದೇಶಾಂಗ ನೀತಿಯಲ್ಲಿ ಬದಲಾವಣೆ ಮಾಡಲಾಗಿದೆಯೇ ಎಂದು ಪ್ರಶ್ನಿಸಿದ್ದಾರೆ.

ಏ.22ರಂದು ಸಂಭವಿಸಿದ ಪಹಲ್ಗಾಮ್ ದಾಳಿಯನ್ನು ಬಿಜೆಪಿಯು ಸಾಮಾಜಿಕ ಜಾಲತಾಣದಲ್ಲಿ ರಾಜಕೀಯಕರಣಗೊಳಿಸಿದ್ದು, ಜನರ ಭಾವನೆಗಳೊಂದಿಗೆ ಸರ್ಕಾರ ಆಟವಾಡುತ್ತಿದೆ. ಈಗಿನ ಕಾರ್ಯಾಚರಣೆಯನ್ನು ಪರಿಗಣಿಸಿ, ಪಾಕಿಸ್ತಾನ ಆಕ್ರಮಿತ ಕಾಶ್ಮೀರವನ್ನು ಭಾರತವು ವಶಕ್ಕೆ ಪಡೆಯುವ ಉತ್ತಮ ಅವಕಾಶವಿದೆ ಎಂದು ಪರಿಗಣಿಸಿದ್ದು, ಅದು ಈಡೇರಿಲ್ಲ ಎಂದು ಹೇಳಿದ್ದಾರೆ.

ಭಯೋತ್ಪಾದಕ ದಾಳಿ ಹಾಗೂ ಆಪರೇಷನ್ ಸಿಂಧೂರಕ್ಕೆ ಸಂಬಂಧಿಸಿದಂತೆ, ತಕ್ಷಣವೇ ವಿಶೇಷ ಅಧಿವೇಶನ ಕರೆಯಬೇಕು. ಪ್ರಧಾನಿ ಮೋದಿ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆ ನಡೆಸಬೇಕು ಎಂದು ಬಘೇಲ್ ಒತ್ತಾಯಿಸಿದರು. ಪ್ರಧಾನಿ ಮೋದಿ ಅವರು ಸರ್ವಪಕ್ಷ ಸಭೆಗೆ ಹಾಜರಾಗದಿದ್ದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.


ಇಲ್ಲ, ಇಲ್ಲ ನಾವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ತುಂಬಿದ ವಿಮಾನ ಕಳುಹಿಸಿಲ್ಲ

ಚೀನಾದ ತೊದಲು ನುಡಿ

ಬೀಜಿಂಗ್: ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮದ ನಂತರ, ಚೀನಾದಿಂದ ದೊಡ್ಡ ಪ್ರತಿಕ್ರಿಯೆ ಕಂಡು ಬಂದಿದೆ. ಚೀನಾದ ಅತಿದೊಡ್ಡ ಮಿಲಿಟರಿ ಸರಕು ವಿಮಾನವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಿದೆ ಎಂಬ ವರದಿಗಳನ್ನು ಚೀನಾ ಸೇನೆ ನಿರಾಕರಿಸಿದೆ. ಇಂತಹ ವದಂತಿಗಳನ್ನು, ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಚೀನಾ ಸೇನೆ ಎಚ್ಚರಿಸಿದೆ. ಪೀಪಲ್ಸ್ ಲಿಬರೇಶನ್ ಆರ್ಮಿ ಏರ್ ಫೋರ್ಸ್ ತನ್ನ ಕ್ಸಿಯಾನ್ ವೈ–20 ಮಿಲಿಟರಿ ಸಾರಿಗೆ ವಿಮಾನವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಿದೆ ಎಂಬುದನ್ನು ನಿರಾಕರಿಸಿದೆ. ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಪೂರೈಕೆ ಕುರಿತು ಅಂತರ್ಜಾಲದಲ್ಲಿ ಸಾಕಷ್ಟು ಮಾಹಿತಿಗಳು ಹರಿದಾಡಿದ ಬೆನ್ನಲ್ಲೇ ಅಂತಹ ವರದಿಗಳು ಸುಳ್ಳು ಎಂದು ವಾಯುಪಡೆ ಹೇಳಿಕೆ ನೀಡಿದೆ ಎಂದು ಚೀನಾ ರಕ್ಷಣಾ ಸಚಿವಾಲಯ ತಿಳಿಸಿದೆ.

ಭಾರತ–ಪಾಕ್ ಮಧ್ಯಸ್ಥಿಕೆಗೆ ಟ್ರಂಪ್ ಹೆಡ್‌ಮಾಸ್ತ್ರಾ; ನಾವೇನು ಸ್ಕೂಲ್ ಮಕ್ಕಳಾ!?

ಚಿತ್ರದುರ್ಗ: ಪಾಕ್ ಮತ್ತು ಭಾರತದ ನಡುವಿನ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಲು ಅಮೆರಿಕ ಅಧ್ಯಕ್ಷ ಟ್ರಂಪ್ ಏನು ಹೆಡ್‌ಮಾಸ್ತ್ರಾ, ನಾವೇನು ಸ್ಕೂಲ್ ಮಕ್ಕಳಾ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಸಮಾಧಾನ ಹೊರಹಾಕಿದ್ದಾರೆ.



ಚಿತ್ರದುರ್ಗದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಾಕ್ ಹಾಗೂ ಭಾರತ ನಡುವಿನ ಕದನ ವಿರಾಮವನ್ನು ನಾವು ಸ್ವಾಗತಿಸುತ್ತೇವೆ. ಆದರೆ ಸಾರ್ವಜನಿಕ ವಲಯದಲ್ಲೊಂದು ಪ್ರಶ್ನೆ ತಲೆಯೆತ್ತಿದ್ದು, ಮೊದಲು ನಾವು ಎಲ್ಲಾ ವಿಷಯವನ್ನು ಅವಲೋಕಿಸಿದ ಬಳಿಕ ಸಂಘರ್ಷ ಮಾಡಬೇಕಿತ್ತು. ಆದರೆ ಸಂಘರ್ಷ ಆರಂಭವಾದ ಮೇಲೆ ಅವರಿಗೆ ಪಾಠ ಕಲಿಸಬೇಕಾದ್ದು ನಮ್ಮ ಗುರಿಯಾಗಬೇಕಿತ್ತು. ದಿಢೀರ್ ಅಂತ ಅಮೆರಿಕ ಹೇಳಿದಾಕ್ಷಣ ಕದನ ವಿರಾಮ ಘೋಷಣೆ ಕಂಡಾಗ, ಪಾಕ್‌ಗೆ ನಾವು ನಿಜವಾಗಿಯೂ ಪಾಠ ಕಲಿಸಿದ್ದೀವಾ ಎಂಬ ಪ್ರಶ್ನೆ ನನಗೆ ಮೂಡುತ್ತಿದೆ ಎಂದರು. ಈ ಕದನ ವಿರಾಮದ ಬಳಿಕ ಭಾರತಕ್ಕೆ ನಾವು ಪಾಠ ಕಲಿಸಿದ್ದೇವೆ ಎಂದು ಅವರು ಹೇಳಿಕೊಳ್ಳುತ್ತಾರೆ. ಆದರೆ ಪಾಕ್‌ಗೆ ಪಾಠ ಕಲಿಸಿದ್ದೀವಿ ಎಂದು ನಾವು ಹೇಳಿಕೊಳ್ಳುತ್ತಿದ್ದೇವೆ. ಒಮ್ಮೆ ಸಂಘರ್ಷ ಆರಂಭವಾದ ಮೇಲೆ ನಮ್ಮ ಆಂತರಿಕ ವಿಚಾರದಲ್ಲಿ ಪಾಕಿಸ್ತಾನ ಮತ್ತೊಮ್ಮೆ ಬೆರಳು ತೋರಿಸುವ ದುಸ್ಸಾಹಸಕ್ಕೆ ಕೈ ಹಾಕದಂತೆ ಪಾಠ ಕಲಿಸಬೇಕಿತ್ತು ಎಂದು ಹೇಳಿದರು.

ಮೈಸೂರಲ್ಲಿ ಭಗವಾನ್ ಬುದ್ಧನ ಜಯಂತಿ ಅರ್ಥಪೂರ್ಣ ಆಚರಣೆ

ಬದುಕಿಗೆ ದಾರಿದೀಪವಾದ ಬುದ್ಧನ ತತ್ವಾದರ್ಶ; ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಅಭಿಮತ





ಕಲಾಮಂದಿರದಲ್ಲಿ ನಡೆದ 2569ನೇ ಬುದ್ಧ ಜಯಂತಿ ಕಾರ್ಯಕ್ರಮವನ್ನು ವಿಶ್ವ ಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣ ಸಿರಿ ಭಂತೇಜಿ ಉದ್ಘಾಟಿಸಿದರು (ಬಲಚಿತ್ರ). ಇದಕ್ಕೂ ಮುನ್ನ ಮೈಸೂರಿನ ಪುರಭವನದಿಂದ ಭಗವಾನ್ ಬುದ್ಧನ ಮೆರವಣಿಗೆ ನಡೆಯಿತು.

ಮೈಸೂರು, ಮೇ 12(ಬಿಎಲ್‌ಯು)– ಬದುಕಿಗೆ ದಾರಿದೀಪವಾಗಿರುವ ಭಗವಾನ್ ಗೌತಮ ಬುದ್ಧನ ತತ್ವಾದರ್ಶವನ್ನು ಎಲ್ಲರೂ ಪಾಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಕರೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ನಡೆದ 2569 ನೇ ಬುದ್ಧ ಪೂರ್ಣಿಮೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 70 ತಲೆಮಾರು ಕಳೆದರೂ ಭಗವಾನ್ ಬುದ್ಧನ ತತ್ವಾದರ್ಶ ಜಗತ್ತಿನಲ್ಲಿ ಆಚರಣೆಯಲ್ಲಿದೆ ಎಂದರು.

ಭಗವಾನ್ ಬುದ್ಧನ ತತ್ವಾದರ್ಶ ಎಂದೆಂದಿಗೂ ಪ್ರಸ್ತುತವಾಗಿರುವ ಹಿನ್ನೆಲೆಯಲ್ಲಿ ಸಾವಿರಾರು ವರ್ಷವಾದರೂ ಅವು ಜನಮಾನಸದಲ್ಲಿ ಉಳಿದಿರುತ್ತದೆ ಎಂದು ಡಾ.ಶಿವರಾಜ್ ಹೇಳಿದರು.

ಇದೇ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ವೈಭೋಗದ ಜೀವನ ತ್ಯಾಗ ಮಾಡಿದ ಭಗವಾನ್ ಬುದ್ಧ ವಿಶ್ವಕ್ಕೆ ಜ್ಞಾನದ ಬೆಳಕು ನೀಡಿದರು. ಇಂತಹ ಮಹಾನ್ ವ್ಯಕ್ತಿ ನಮಗೆ ಇಂದಿಗೂ ಸಹ ಆದರ್ಶರಾಗಿದ್ದಾರೆ ಎಂದರು.

ಕಠಿಣವಾದ ದೀರ್ಘ ಕಾಲದ 26 ವರ್ಷ ತಪಸ್ಸು ಮಾಡಿದ ಬುದ್ಧನಿಗೆ ಬೋಧಿ ವೃಕ್ಷದ ಕೆಳಗೆ ಜ್ಞಾನೋದಯವಾಗಿ ಇಡೀ ಜಗತ್ತಿಗೆ ಬೌದ್ಧ ಧರ್ಮವನ್ನು ಬೋಧಿಸಿದರು. ಈ ಮೂಲಕ ಆಸೆಯೇ ದುಃಖಕ್ಕೆ ಮೂಲ ಅಂಶವನ್ನು ತಿಳಿಸಿ ನೆಮ್ಮದಿ ಬದುಕು ಹೇಗಿರಬೇಕೆಂಬ ಸತ್ಯವನ್ನು ತಿಳಿಸಿದರು ಎಂದು ಶ್ರೀವತ್ಸ ಹೇಳಿದರು.

ನಂತರ ಮಾತನಾಡಿದ ಡಾ.ರಹಮತ್ ತರೀಕೆರೆ ಅವರು, ಭಾರತ ಮತ್ತು ಪಾಕಿಸ್ತಾನದ ನಡುವಿನ ಯುದ್ಧ ಆರಂಭವಾಗಿ ಈಗ ಕದನ ವಿರಾಮ ಘೋಷಣೆಯಾಗಿರುವ ಸಂದರ್ಭದಲ್ಲಿ ಭಗವಾನ್ ಬುದ್ಧ ಜಯಂತಿ ಬಂದಿದೆ. ಸಿದ್ಧಾರ್ಥ ಗೌತಮ ಬುದ್ಧನಾಗಲು ಯುದ್ಧ ಕಾರಣವಾಗಿದೆ. ಬುದ್ಧ ಹಾಗೂ ಅಶೋಕ ಯುದ್ಧ ವಿರೋಧಿಯಾಗಿ ವಿಶಿಷ್ಟ ವ್ಯಕ್ತಿತ್ವದೊಂದಿಗೆ ಜಗತ್ತಿಗೆ ಪರಿಚಿತರಾದರು. ಒಂದು ವೇಳೆ ಯುದ್ಧದ ಪರಿಸ್ಥಿತಿಯನ್ನು ಅವರು ತಿಳಿಯದಿದ್ದರೆ ಇಂದು ಬುದ್ಧ ಹಾಗೂ ಅಶೋಕ ಜಗತ್ತಿನ ಅರಿವಿಗೆ ಬರುತ್ತಿರಲಿಲ್ಲ ಎಂದು ಹೇಳಿದರು.

ಸಾವು, ಮುಪ್ಪು ಮತ್ತು ರೋಗ ಭಗವಾನ್ ಬುದ್ಧನ ಮನಸ್ಸಿನಲ್ಲಿ ಗಾಢವಾದ ಪರಿಣಾಮ ಬೀರಿತು. ಇಂತಹ ಬೆಳವಣಿಗೆಗಳು ಗೌತಮ ಬುದ್ಧನಿಗೆ ಜ್ಞಾನೋದಯವಾಗಲು ಮೂಲ ಅಂಶಗಳಾದವು ಎಂದರು.

ಭಗವಾನ್ ಬುದ್ಧ ಜಯಂತಿ ದಲಿತ ಸಮುದಾಯದ ಹಬ್ಬವಾಗದೆ ಎಲ್ಲಾ ಸಮುದಾಯದ ಹಬ್ಬವಾಗಬೇಕು. ಈ ಮೂಲಕ ಬುದ್ಧನ ಸಂದೇಶ ಪಾಲನೆಯಾಗಿ ಜಾತಿ ಮುಕ್ತ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ ಎಂದು ಲೇಖಕ, ಚಿಂತಕ ಡಾ.ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ವಿಶ್ವ ಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣ ಸಿರಿ ಭಂತೇಜಿ ಅವರು ಮಾತನಾಡಿ, ಭಗವಾನ್ ಬುದ್ಧ ಜನಿಸುವ ತನಕ ಈ ಭೂಮಿಯಲ್ಲಿ ಅಜ್ಞಾನವಿತ್ತು. ಬುದ್ಧ ಜನಿಸಿದ ನಂತರ, ಬುದ್ಧ ತಪಸ್ಸನಾಚರಿಸಿ, ಜ್ಞಾನೋದಯವಾದ ಮೇಲೆ ಅಜ್ಞಾನ ದೂರ ಮಾಡಿ ಜಗತ್ತಿಗೆ ಜ್ಞಾನದ ಬೆಳಕು ತೋರಿಸಿದನು ಎಂದರು.

ವಿಶ್ವದಲ್ಲಿ ಪರಿಪೂರ್ಣ ಜ್ಞಾನೋದಯ ಕಂಡಂತಹ ಏಕೈಕ ಮಹಾನ್ ವ್ಯಕ್ತಿಯೆಂದರೆ ಅದು ಗೌತಮ ಬುದ್ಧ ಮಾತ್ರ. ಬುದ್ಧನ ಬಿಟ್ಟು ಯಾವುದೇ ದೇವ ದೂತನಲ್ಲ, ದೇವರ ಮಗನಲ್ಲ, ದೇವರ ಸ್ವರೂಪನಲ್ಲ, ಮಾನವರು ಅಲ್ಲ ಎಂದು ಡಾ.ಕಲ್ಯಾಣ ಸಿರಿ ಭಂತೇಜಿ ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮಕ್ಕೂ ಮೊದಲು ಭಗವಾನ್ ಬುದ್ಧನ ಪ್ರತಿಮೆಯ ವರ್ಣರಂಜಿತ ಮೆರವಣಿಗೆ ಮೈಸೂರಿನ ಪುರಭವನದಿಂದ ಆರಂಭವಾಗಿ ನಗರದ ಪ್ರಮುಖ ರಸ್ತೆಗಳ ಮೂಲಕ ಹಾದು ಕಾರ್ಯಕ್ರಮ ನಡೆಯುತ್ತಿದ್ದ ಕಲಾಮಂದಿರ ತಲುಪಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪಾಕಿಸ್ತಾನಕ್ಕೆ ಭಾರತದ ಸೇನೆ ತಕ್ಕಪಾಠ ಕಲಿಸಿದೆ

● ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ● ದೇಶದ ಎಲ್ಲರೂ ಇಂತಹ ವೇಳೆ ಪ್ರಧಾನಿ ಮೋದಿ ಬೆಂಬಲಿಸಬೇಕು

ಬೆಂಗಳೂರು, ಮೇ 12(ಕೆಎಂಶಿ) –



ರಾಷ್ಟ್ರೀಯ ಭದ್ರತೆ ಮತ್ತು ದೇಶ ರಕ್ಷಣೆ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ದೃಢ ಹೆಜ್ಜೆಗಳನ್ನು ಇಟ್ಟಿದ್ದು, ಭಾರತದ ಮೇಲೆ ದಾಳಿ ನಡೆಸಿದ ಪಾಕ್‌ಗೆ ನಮ್ಮ ಸೇನಾಪಡೆ ತಕ್ಕ ಪಾಠ ಕಲಿಸಿವೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನದ ಭಯೋತ್ಪಾದಕರು ಪ್ರವಾಸಿಗರ ಮೇಲೆ ಎಸಗಿದ ಪೈಶಾಚಿಕ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನಾಪಡೆಗಳು ಆ ದೇಶದ ಭಯೋತ್ಪಾದಕ ಶಿಬಿರಗಳನ್ನು ನಾಶ ಮಾಡುವ ಮೂಲಕ ಪ್ರಬಲ ತಿರುಗೇಟು ನೀಡಿವೆ ಎಂದರು.

ನಮ್ಮ ಹೆಮ್ಮೆಯ ಸೇನಾಪಡೆಗಳ ಶಕ್ತಿಯ ಮುಂದೆ ಪಾಕಿಸ್ತಾನ ಮಂಡಿಯೂರಿದೆ, ಭಾರತದ ಮೇಲುಗೈ ಸಾಧಿಸಿದೆ, ಪಾಕಿಸ್ತಾನಕ್ಕೆ ನಡುಕ ಉಂಟಾಗಿದೆ. ಉಗ್ರರ ಚಟುವಟಿಕೆಗಳಿಗೆ ಇತಿಶ್ರೀ ಹಾಡಲು ಪಾಕಿಸ್ತಾನದಲ್ಲಿನ ಅವರ ಶಿಬಿರಗಳ ಮೇಲೆ ನಮ್ಮ ಸೈನಿಕರು ದಾಳಿ ಮಾಡಿದರು.

ಅಮೆರಿಕದ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಎಂಬುದು ಸರಿಯಲ್ಲ. ಜಾಗತಿಕ ಮಟ್ಟದಲ್ಲಿ ಮುಖ ಉಳಿಸಿಕೊಳ್ಳಲು ಪಾಕಿಸ್ತಾನ ಪ್ರಯತ್ನಿಸುತ್ತಿದೆ. ಕಾಶ್ಮೀರ ವಿಷಯದಲ್ಲಿ ಮೂರನೇ ರಾಷ್ಟ್ರದ ಮಧ್ಯಸ್ಥಿಕೆಗೆ ಭಾರತ ಒಪ್ಪಿಲ್ಲ, ಅವಕಾಶವನ್ನೂ ಕೊಟ್ಟಿಲ್ಲ. ಪ್ರಧಾನಮಂತ್ರಿ ಇದೇ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ರಾಷ್ಟ್ರದ ಹಿತಾಸಕ್ತಿ ವಿಷಯದಲ್ಲಿ ಅವರು ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ.

ಉಗ್ರರ ಪೋಷಕ ಪಾಕಿಸ್ತಾನವನ್ನು ಮಟ್ಟ ಹಾಕುವ ದೃಷ್ಟಿಯಿಂದ ಪೂರ್ಣ ಪ್ರಮಾಣದ ಯುದ್ಧ ಆಗಲೇಬೇಕಿತ್ತು ಎಂಬ ನಿಲುವು ಒಂದು ಕಡೆ ಇದ್ದರೆ, ಮತ್ತೊಂದು ಕಡೆ ರಷ್ಯಾ, ಉಕ್ರೇನ್ ಯುದ್ಧದಿಂದ ಇಂದು ಯಾವ ಸ್ಥಿತಿ ಉಂಟಾಗಿದೆ ಎನ್ನುವ ವಾದವೂ ಇದೆ.

ಈ ದೃಷ್ಟಿಯಿಂದ ಕೇಂದ್ರ ಸರ್ಕಾರ ಆಲೋಚನೆ ಮಾಡುತ್ತಿದೆ, ಈಗಲಾದರೂ ಪಾಕಿಸ್ತಾನ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಸಂಪೂರ್ಣ ನಾಶವಾಗಲಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ನಿರ್ಧಾರಗಳನ್ನು ಎಲ್ಲರೂ ಬೆಂಬಲಿಸಬೇಕು. ಪಹಲ್ಗಾಮ್ ದಾಳಿಗೆ ಯಾವ ರೀತಿ ಪ್ರತ್ಯುತ್ತರ ನೀಡಲಾಯಿತು ಎಂಬುದನ್ನು ಇಡೀ ದೇಶ ನೋಡಿದೆ.

ದೇಶದ ಪ್ರತಿಷ್ಠೆಗೆ ಧಕ್ಕೆ ಬಾರದಂತೆ ಪ್ರಧಾನಮಂತ್ರಿ ಹಾಗೂ ಸೇನಾಪಡೆಗಳು ಕೈಗೊಂಡ ನಿರ್ಧಾರಗಳನ್ನೂ ನೋಡಿದ್ದೇವೆ, ಉಗ್ರರಿಗೆ ಶಿಕ್ಷೆ ಕೊಡಬೇಕು, ನಮ್ಮ ಸೈನಿಕರು ದೇಶಕ್ಕೆ ಗೌರವ ತರುವ ಕೆಲಸ ಮಾಡಿದ್ದಾರೆ, ಕೇವಲ ಎರಡೇ ದಿನದಲ್ಲಿ ಪಾಕಿಸ್ತಾನ ಶರಣಾಗುವಂತೆ ಸೇನಾ ಪಡೆಗಳು ಪರಾಕ್ರಮ ಮೆರೆದಿವೆ ಎಂದು ಕುಮಾರಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.

ಚಟುವಟಿಕೆ ಆರಂಭಿಸಿದ ಕುಮಾರಸ್ವಾಮಿ

ಬೆಂಗಳೂರು,ಮೇ 12(ಕೆಎಂಶಿ)–ವೈದ್ಯರ ಸಲಹೆ ಮೇರೆಗೆ ವಿಶ್ರಾಂತಿಯಲ್ಲಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿನಿಂದ ಮತ್ತೆ ಕರ್ತವ್ಯಕ್ಕೆ ಮರಳಿದ್ದಾರೆ. ದೆಹಲಿಯ ಹವಾಮಾನದಿಂದ ಕುಮಾರಸ್ವಾಮಿ ಅವರ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಿತ್ತು, ಕಳೆದ ಎರಡು ತಿಂಗಳಿಂದ ಸಚಿವರು ಕಾರ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ದೆಹಲಿಗೆ ತೆರಳಿದ ಕುಮಾರಸ್ವಾಮಿ ಅವರು, ತಮ್ಮ ನೂತನ ಅಧಿಕೃತ ನಿವಾಸದಲ್ಲಿ ಪೂಜೆ ಸಲ್ಲಿಸಲಿದ್ದಾರೆ.

ಜೆಎಸ್‌ಎಸ್ ಪ್ರಥಮ ಪಿಯು, ಪದವಿ ತರಗತಿಗಳಿಗೆ ಭಾರತೀಯ ಸಂಸ್ಕೃತಿ ಪಠ್ಯ

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ, ಸಾಹಿತ್ಯಕ, ಕ್ರೀಡಾ ವೇದಿಕೆಗಳ ಸಮಾರೋಪ



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸೋಮವಾರ ನಡೆದ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭ ನಡೆಯಿತು.

ಮೈಸೂರು, ಮೇ 12–ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸಬೇಕು ಎಂಬ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಆಶಯದಂತೆ ಜೆಎಸ್‌ಎಸ್ ಮಹಾವಿದ್ಯಾಪೀಠ ಅಧೀನದ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಭಾರತೀಯ ಸಂಸ್ಕೃತಿ ಪಠ್ಯ ಅಳವಡಿಸಲಾಗಿದೆ ಎಂದು ಸಂಸ್ಥೆಯ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಹೇಳಿದರು.

ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸೋಮವಾರ ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅವರು ಮಾತನಾಡಿ, ಪ್ರಸ್ತುತ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಹೀಗಾಗಿ ನಮ್ಮ ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು ಎಂಬ ಉದ್ದೇಶದಿಂದ ಈ ಪಠ್ಯ ಅಳವಡಿಸಲಾಗಿದೆ ಎಂದರು.

ಭಾರತೀಯ ಸಂಸ್ಕೃತಿ ಹಾಗೂ ಆಹಾರ ಪದ್ಧತಿ ಅತ್ಯಂತ ಶ್ರೀಮಂತವಾದುದು. ನಮ್ಮ ಸಂಸ್ಕೃತಿ, ನಮ್ಮ ಪರಂಪರೆ ಗೊತ್ತಿಲ್ಲದವನು ಇತಿಹಾಸ ಸೃಷ್ಟಿಸಲಾರ. ಆದ್ದರಿಂದಲೇ ಈ ಪಠ್ಯವನ್ನು ಅಳವಡಿಸಲಾಗಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸಮಾರೋಪ ಭಾಷಣ ಮಾಡಿ, ವಿದ್ಯೆಯ ಜೊತೆಗೆ ಕೌಶಲ್ಯ ಕೂಡ ಮುಖ್ಯ. ಇವೆರಡೂ ಇದ್ದಲ್ಲಿ ಉದ್ಯೋಗ ಸುಲಭವಾಗಿ ಸಿಗುತ್ತದೆ ಎಂದು ಹೇಳಿದರು.

ಯಾವುದೇ ವ್ಯಕ್ತಿಯ ವಿಕಸನಕ್ಕೆ ಪಠ್ಯದ ಜೊತೆಗೆ ಕಲೆ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ, ಎನ್‌ಎಸ್‌ಎಸ್, ಎನ್‌ಸಿಸಿ– ಹೀಗೆ ಎಲ್ಲಾ ರೀತಿಯ ಚಟುವಟಿಕೆಗಳು ಕೂಡ ಮುಖ್ಯ ಎಂದು ಅವರು ಹೇಳಿದರು.

ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಯುವ ಉದ್ಯಮಿ ಪಲಾಶ್ ಬಿದ್ದಪ್ಪ ಮಾತನಾಡಿ, ವಿದ್ಯೆ ಎಂದರೇ ಪುಸ್ತಕದ ವಿಷಯಗಳು ಸಾಕಾಗುವುದಿಲ್ಲ. ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳು ಕೂಡ ಮುಖ್ಯವಾಗುತ್ತವೆ. ಶಿಸ್ತು ಕೂಡ ಇರಬೇಕಾಗುತ್ತದೆ. ಸಾಧಿಸಲು ಹೊರಟಾಗ ಹಲವಾರು ಅಡ್ಡಿ ಆತಂಕಗಳು ಎದುರಾಗುತ್ತವೆ. ಅದನ್ನೆಲ್ಲಾ ಎದುರಿಸಿಯೇ ಮುಂದೆ ಸಾಗಬೇಕು ಎಂದರು.

ಸಾಂಸ್ಕೃತಿಕ, ಸಾಹಿತ್ಯಕ ಸಂಚಾಲಕಿ ಡಿ.ಎಂ.ಉಮಾದೇವಿ, ಕ್ರೀಡಾ ಸಂಚಾಲಕ ಶಿವಕುಮರಸ್ವಾಮಿ ಇದ್ದರು. ವೈಷ್ಣವಿ ಎಸ್.ಕೊಣ್ಣೂರು ಮತ್ತು ತಂಡದವು ಪ್ರಾರ್ಥಿಸಿದರು. ವಿ.ವಿದ್ಯಾ ಸ್ವಾಗತಿಸಿದರು. ಎನ್.ಸುಶ್ಮಿತಾ ವಂದಿಸಿದರು. ಕೆ.ಎನ್. ವಿಜಯಲಕ್ಷ್ಮಿ ನಿರೂಪಿಸಿದರು. ಸಾಂಸ್ಕೃತಿಕ, ಸಾಹಿತ್ಯಕ ವರದಿಯನ್ನು ಎಸ್. ಗೌತಮಿ, ಕ್ರೀಡಾ ವರದಿಯನ್ನು ಎಂ.ಪಿ. ರಕ್ಷಿತಾ ಓದಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 12–ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪತ್ರಕರ್ತರ ಮಕ್ಕಳನ್ನು ಪುರಸ್ಕರಿಸಲು ಅರ್ಜಿ ಆಹ್ವಾನಿಸಿದೆ. ಸಂಘದ ಸದಸ್ಯರ ಮಕ್ಕಳು ಅರ್ಜಿ ಹಾಕಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸುವ ಸದಸ್ಯರು ತಮ್ಮ ಆಧಾರ್ ಕಾರ್ಡ್ ಮತ್ತು ಸಂಘದ ಐಡಿ ಕಾರ್ಡ್ ಹಾಗೂ ತಮ್ಮ ಮಕ್ಕಳ ಆಧಾರ್ ಕಾರ್ಡ್, ಅಂಕಪಟ್ಟಿ, ಎರಡು ಭಾವಚಿತ್ರದೊಂದಿಗೆ ಕೈ ಬರಹದ ಅರ್ಜಿ ಸಹಿತ ಸಂಘದ ಕಚೇರಿಗೆ 25.5.2025 ರೊಳಗೆ ಸಲ್ಲಿಸಬೇಕು. ಮಾಹಿತಿಗೆ ಸಂಘದ ಅಧ್ಯಕ್ಷ ಕೆ.ದೀಪಕ್ (ಮೊ. 9741511340), ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ (ಮೊ. 9845653548) ಸಂಪರ್ಕಿಸಿ.

ನಾಳೆ ನೇರ ಫೋನ್–ಇನ್ ಕಾರ್ಯಕ್ರಮ

ಮೈಸೂರು: ಎಸ್‌ಎಸ್‌ಎಲ್‌ಸಿ ನಂತರ ವಿದ್ಯಾರ್ಥಿಗಳು ತೆಗೆದುಕೊಳ್ಳಬಹುದಾದ ಕೋರ್ಸ್‌ಗಳು, ಅವಕಾಶಗಳ ಕುರಿತು ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಮೇ 14ರಂದು ಬೆಳಗ್ಗೆ 11:30ರಿಂದ 12:30ರವರೆಗೆ ಜೆಎಸ್‌ಎಸ್ ರೇಡಿಯೋ 91.2 ಎಫ್.ಎಂ. ಸಮುದಾಯ ಬಾನುಲಿ ಕೇಂದ್ರವು ಆಯೋಜಿಸಲಾಗಿದೆ. ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ಪ್ರಾಂಶುಪಾಲ ಡಾ.ಭಕ್ತವತ್ಸಲ ಭಾಗವಹಿಸಲಿದ್ದಾರೆ. ಮಾಹಿತಿಗಾಗಿ ವಿದ್ಯಾರ್ಥಿಗಳು, ಪೋಷಕರು ದೂ.ಸಂಖ್ಯೆ: 8296725912, 0821–2546563 ಸಂಪರ್ಕಿಸಿ.

ಶ್ರೀಯುತ ಎಸ್. ನಂಜಪ್ಪನವರಿಂದ ಸ್ಥಾಪಿತವಾದ ನವನಗರ ಅರ್ಬನ್ ಬ್ಯಾಂಕ್ ಕೆ.ಆರ್.ನಗರ ತಾಲೂಕು ಜನತೆಗೆ ಸಂಜೀವಿನಿ

● ಒಕ್ಕಲಿಗರ ಸಂಘದ ನಿರ್ದೇಶಕ ಮಂಜುಗೌಡರ ಶ್ಲಾಘನೆ ● ನಂಜಪ್ಪನವರ ಪುತ್ಥಳಿಗೆ ಗೌರವ ಸಲ್ಲಿಕೆ



ಕೆ.ಆರ್.ನಗರ ಪಟ್ಟಣದ ನವ ನಗರ ಅರ್ಬನ್ ಬ್ಯಾಂಕ್‌ನ ಕೇಂದ್ರ ಕಚೇರಿಯಲ್ಲಿರುವ ಎಸ್.ನಂಜಪ್ಪನವರ ಪುತ್ಥಳಿಗೆ ಒಕ್ಕಲಿಗರ ಸಂಘದ ನಿರ್ದೇಶಕ ಮಂಜುಗೌಡರು ಮಾಲಾರ್ಪಣೆ ಮಾಡಿದರು.

ಕೆ.ಆರ್.ನಗರ: ಮಾಜಿ ಸಚಿವ ದಿವಂಗತ ಎಸ್.ನಂಜಪ್ಪನವರು ನವ ನಗರ ಅರ್ಬನ್ ಬ್ಯಾಂಕ್ ಆರಂಭಿಸಿದ್ದರಿಂದ ಈ ಭಾಗದ ಜನತೆಗೆ ಇದು ಸಂಜೀವಿನಿಯಾಗಿದ್ದು, ತಾಲೂಕು ಜನತೆ ಸಾಲ ಸೌಲಭ್ಯ ಪಡೆದು ಆರ್ಥಿಕವಾಗಿ ಸಬಲರಾಗುವಂತೆ ಒಕ್ಕಲಿಗರ ಸಂಘದ ನಿರ್ದೇಶಕ ಮಂಜುಗೌಡ ತಿಳಿಸಿದರು.

ಪಟ್ಟಣದ ನವ ನಗರ ಅರ್ಬನ್ ಬ್ಯಾಂಕ್‌ನ ಕೇಂದ್ರ ಕಚೇರಿಯಲ್ಲಿರುವ ಎಸ್.ನಂಜಪ್ಪನವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಮಾತನಾಡಿದ ಅವರು ಬ್ಯಾಂಕ್ ಆರಂಭದಿಂದ ಖಾಸಗಿ ಹಣಕಾಸು ಸಂಸ್ಥೆ ಮತ್ತು ಲೇವಾದೇವಿದಾರರಿಂದ ವೇತನದಾರರು, ಬಡ ಮತ್ತು ಸಣ್ಣ ವ್ಯಾಪಾರಸ್ಥರಿಗೆ ಕಿರುಕುಳ ತಪ್ಪಿದ್ದಂತಾಗಿದೆ ಎಂದರು.

6 ಲಕ್ಷ ಷೇರು ಬಂಡವಾಳದೊಂದಿಗೆ 1998ರಲ್ಲಿ ಆರಂಭಗೊಂಡ ಈ ಬ್ಯಾಂಕ್ ಇಂದು 750 ಕೋಟಿಗೂ ಹೆಚ್ಚು ವಹಿವಾಟು ನಡೆಸುವ ಮೂಲಕ ಬೃಹದಾಕಾರವಾಗಿ ಬೆಳೆದಿದೆ. ಶ್ರೀಯುತ ಎಸ್.ನಂಜಪ್ಪನವರು ಕಾಲವಾದ ನಂತರ ಅವರ ಪುತ್ರ ಕೆ.ಎನ್.ಬಸಂತ್ ಅವರು ಕಳೆದ ಹತ್ತು ವರ್ಷಗಳಿಂದ ಬ್ಯಾಂಕ್‌ನ ಅಧ್ಯಕ್ಷರಾಗಿ ಗ್ರಾಹಕರ ವಿಶ್ವಾಸ ಗಳಿಸಿ, ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೇವಲ 5 ಮಂದಿ ಸಿಬ್ಬಂದಿಯೊಂದಿಗೆ ಪ್ರಾರಂಭವಾದ ಬ್ಯಾಂಕ್, ಈಗ ಹಲವು ಶಾಖೆಗಳನ್ನು ಹೊಂದಿದ್ದು, 41 ಸಿಬ್ಬಂದಿ, 20 ಮಂದಿ ಪಿಗ್ಮಿ ಸಂಗ್ರಹಕಾರರು ಹಾಗೂ 10 ಮಂದಿ ಉಪ ಸಿಬ್ಬಂದಿ, ಜತೆಗೆ ಪ್ರತ್ಯಕ್ಷ–ಪರೋಕ್ಷವಾಗಿ ನೂರಾರು ಮಂದಿ ಜೀವನ ಕಂಡುಕೊಂಡಿದ್ದಾರೆ. 4 ಎಟಿಎಂಗಳನ್ನು ಹೊಂದಿರುವ ಬ್ಯಾಂಕ್ 325 ಕೋಟಿ ಸಾಲ ವಿತರಿಸಿದ್ದು 433 ಕೋಟಿ ಠೇವಣಿ ಹೊಂದಿದೆ ಒಟ್ಟು 758 ಕೋಟಿ ವ್ಯವಹಾರ ನಡೆಸುತ್ತಿರುವ ಬ್ಯಾಂಕ್‌ನ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು. ಈ ವೇಳೆ ಮಂಜುಗೌಡ ಅವರನ್ನು ಬ್ಯಾಂಕ್ ವತಿಯಿಂದ ಅಭಿನಂದಿಸಲಾಯಿತು. ತಂಬಾಕು ಮಂಡಳಿಯ ನಿವೃತ್ತ ಅಧಿಕಾರಿ ಎನ್.ದಿನೇಶ್, ಜೆಡಿಎಸ್ ವಕ್ತಾರ ಕೆಎಲ್.ರಮೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ಎಂ.ಮಲ್ಲಿಕಾರ್ಜುನ್, ಹರಿಚಿದಂಬರ, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಬಾಲಕೃಷ್ಣ, ಪುರಸಭೆ ಮಾಜಿ ಸದಸ್ಯ ಕೆ.ಆರ್.ಗಿರೀಶ್, ಮುಖಂಡರಾದ ಎಸ್.ಪಿ.ತ್ಯಾಗರಾಜು, ಬಿ.ಸಿದ್ದೇಗೌಡ, ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಸಿ.ಸುರೇಸ್, ವ್ಯವಸ್ಥಾಪಕ ಸುಹಾಸ್ ಉಪಸ್ಥಿತರಿದ್ದರು.

ದೇಶ - ವಿದೇಶ

ಸುಂಕ ಕಡಿತಕ್ಕೆ ಚೀನಾ–ಅಮೆರಿಕಾ ಪರಸ್ಪರ ಒಪ್ಪಿಗೆ



ಜಿನೀವಾ: ತೆರಿಗೆ ವಿಚಾರವಾಗಿ ಸಂಘರ್ಷ ನಡೆಸಿದ್ದ ಚೀನಾ ಮತ್ತು ಅಮೆರಿಕ ಕೊನೆಗೂ ಪಟ್ಟು ಸಡಿಲಿಸಿದ್ದು, ಉದ್ವಿಗ್ನತೆ ಶಮನಕ್ಕಾಗಿ ಸುಂಕ ಕಡಿತಕ್ಕೆ ಪರಸ್ಪರ ಒಪ್ಪಿಗೆ ಸೂಚಿಸಿವೆ. ಇತ್ತೀಚಿನ ಅಮೆರಿಕ–ಚೀನಾ ವ್ಯಾಪಾರ ಮಾತುಕತೆಗಳಿಂದ ಹೆಚ್ಚಿನ ವಿವರಗಳು ಹೊರಬರುತ್ತಿದ್ದಂತೆಯೇ ಎರಡೂ ದೇಶಗಳು ಪರಸ್ಪರ ಸರಕುಗಳ ಮೇಲಿನ ಸುಂಕವನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಲು ತಾತ್ವಿಕವಾಗಿ ಒಪ್ಪಿಕೊಂಡಿವೆ ಎಂದು ಜಿನೀವಾದಲ್ಲಿ ಬಿಡುಗಡೆಯಾದ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ವರದಿಗಳ ಪ್ರಕಾರ ಪ್ರಸ್ತಾವಿತ ಒಪ್ಪಂದಡಿ ಅಮೆರಿಕವು ಮೇ 14ರ ವೇಳೆಗೆ ಹೆಚ್ಚಿನ ಚೀನಾದ ಆಮದುಗಳ ಮೇಲಿನ ತನ್ನ ಸುಂಕವನ್ನು ಶೇ.145ರಿಂದ 30ಕ್ಕೆ ಇಳಿಸಲು ಮುಂದಾಗಿದೆ. ಇದರಲ್ಲಿ ಫೆಂಟನಿಲ್‌ಗೆ ಸಂಬಂಧಿಸಿದ ಸುಂಕಗಳು ಸೇರಿವೆ. ಪ್ರತಿಯಾಗಿ ಚೀನಾ ಸೋಮವಾರ ನಡೆದ ಬ್ರೀಫಿಂಗ್‌ನಲ್ಲಿ ಹೇಳಿಕೆ ಮತ್ತು ಅಧಿಕಾರಿಗಳ ಪ್ರಕಾರ ಅಮೆರಿಕ ಸರಕುಗಳ ಮೇಲಿನ ತನ್ನ ಶೇ.125 ಸುಂಕವನ್ನು ಶೇ.10ಕ್ಕೆ ಇಳಿಸುವುದಾಗಿ ಹೇಳಿದೆ. ಉಭಯ ದೇಶಗಳ ನಡುವಿನ ಸುಂಕ ಕಡಿತವು ಈಗ ತಾತ್ಕಾಲಿಕವಾಗಿದೆ ಮತ್ತು ಕನಿಷ್ಠ ಮುಂದಿನ 90 ದಿನಗಳವರೆಗೆ ತಕ್ಷಣವೇ ಜಾರಿಯಲ್ಲಿರುತ್ತದೆ.

ಟ್ರೇಲರ್ ಟ್ರಕ್–ಲಾರಿ ಡಿಕ್ಕಿ, 13 ಮಂದಿ ದುರ್ಮರಣ

ರಾಯ್ಪುರ: ಛತ್ತೀಸ್‌ಗಢದ ರಾಯಪುರದಲ್ಲಿ ಟ್ರೇಲರ್ ಟ್ರಕ್ ಹಾಗೂ ಲಾರಿ ನಡುವೆ ಡಿಕ್ಕಿ ಸಂಭವಿಸಿ 13 ಮಂದಿ ಸಾವನ್ನಪ್ಪಿರುವ ಘಟನೆ ನಡೆದಿದೆ. ರಾಯ್ಪುರ



ಜಿಲ್ಲೆಯ ರಾಯ್ಪುರ–ಬಲೋದಬಜಾರ್ ರಸ್ತೆಯ ಸರಗಾಂವ್ ಬಳಿ ಅಪಘಾತ ಸಂಭವಿಸಿದ್ದು, ದುರ್ಘಟನೆಯಲ್ಲಿ ನಾಲ್ಕು ಮಕ್ಕಳು ಮತ್ತು ಒಂಬತ್ತು ಮಹಿಳೆಯರು ಸಾವನ್ನಪ್ಪಿದ್ದಾರೆ. ಚಟೌಡ್ ಗ್ರಾಮದ ಕುಟುಂಬವೊಂದು ಕುಟುಂಬದ ಸಮಾರಂಭದಲ್ಲಿ ಭಾಗವಹಿಸಲು ಬನ್ಸಾರಿ ಗ್ರಾಮಕ್ಕೆ ತೆರಳಿತ್ತು. ಕಾರ್ಯಕ್ರಮ ಮುಗಿಸಿ ವಾಪಸ್ ತಡರಾತ್ರಿ ಟ್ರಕ್‌ನಲ್ಲಿ ಹಿಂತಿರುಗುವಾಗ ಖರೋರಾ ಪೊಲೀಸ್ ಠಾಣೆ ಪ್ರದೇಶದ ಸರಗಾಂವ್ ಬಳಿ ಟ್ರೇಲರ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ಬಗ್ಗೆ ಮಾಹಿತಿ ಬಂದ ನಂತರ ಪೊಲೀಸ್ ತಂಡವನ್ನು ಸ್ಥಳಕ್ಕೆ ಕಳುಹಿಸಲಾಯಿತು ಮತ್ತು ಗಾಯಾಳುಗಳನ್ನು ರಾಯ್ಪುರದ ಭೀಮರಾವ್ ಅಂಬೇಡ್ಕರ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಜಿಲ್ಲಾಡಳಿತದ ಅಧಿಕಾರಿಗಳು ಸಹ ಸ್ಥಳಕ್ಕೆ ಆಗಮಿಸಿದ್ದಾರೆ ಎಂದು ರಾಯ್ಪುರ ಡಿಸಿ ಗೌರವ್ ಸಿಂಗ್ ಹೇಳಿದರು.

ಬ್ರೇಕಪ್: ಪ್ರಿಯಕರನ ಕೈ ಬೆರಳನ್ನೇ ಕತ್ತರಿಸಿ ಫ್ರಿಜ್‌ನಲ್ಲಿಟ್ಟ ಪ್ರಿಯತಮೆ!

ಜಪಾನ್: ಬ್ರೇಕಪ್ ಆಗಿದ್ದಕ್ಕೆ ಬೇಸರಗೊಂಡ ಯುವತಿ ಪ್ರಿಯಕರನ ಕೈಬೆರಳನ್ನೇ ಕತ್ತರಿಸಿ ಫ್ರಿಜ್‌ನೊಳಗಿಟ್ಟ ಘಟನೆ ಜಪಾನ್‌ನಲ್ಲಿ ನಡೆದಿದೆ. ಆರೋಪಿ ಯುವತಿ ಪ್ರಿಯಕರನನ್ನು ತುಂಬಾ ಪ್ರೀತಿಸುತ್ತಿದ್ದಳು. ತಾನು ಉಂಗುರು ಹಾಕಬೇಕಿದ್ದ ಬೆರಳಿಗೆ ಮತ್ಯಾರೋ ಹಾಕಬಹುದು ಎನ್ನುವ ಕೋಪದಲ್ಲಿ ಆಕೆಯ ಉಂಗುರದ ಬೆರಳನ್ನೇ ಕತ್ತರಿಸಿ ಫ್ರಿಜ್‌ನಲ್ಲಿಟ್ಟಿದ್ದಾಳೆ. ಜಪಾನ್‌ನ ಹೊನ್ಶು ದ್ವೀಪದ ಕನ್ಸೈ ಪ್ರದೇಶದ ಒಸಾಕಾದಲ್ಲಿ ಈ ಆಘಾತಕಾರಿ ಘಟನೆ ನಡೆದಿದ್ದು, 21 ವರ್ಷದ ವ್ಯಕ್ತಿ ಸ್ವತಃ ಪೊಲೀಸರಿಗೆ ಕರೆ ಮಾಡಿ ತನಗೆ ಸಂಭವಿಸಿದ ಈ ಭಯಾನಕ ಘಟನೆಯ ಬಗ್ಗೆ ತಿಳಿಸಿದ್ದಾನೆ. ಆತನ ಹೆಸರನ್ನು ಬಹಿರಂಗಪಡಿಸಲಾಗಿಲ್ಲ. 2023ರಲ್ಲಿ ಆತ 19 ವರ್ಷದವನಾಗಿದ್ದಾಗ ಅವನು ಸ್ಯಾಟೊಳ ಕೆಲವು ಚಿತ್ರಗಳನ್ನು ಆನ್‌ಲೈನ್‌ನಲ್ಲಿ ನೋಡಿದ್ದ ಮತ್ತು ಅವಳ ಮುಗ್ಧ ನೋಟದಿಂದ ಆಕರ್ಷಿತನಾಗಿದ್ದ. ಸ್ವಲ್ಪ ಸಮಯದ ನಂತರ ಇಬ್ಬರೂ ಸಂಬಂಧ ಬೆಳೆಸಿಕೊಂಡರು ಮತ್ತು ಆ ವರ್ಷ ಜುಲೈನಿಂದ ಒಟ್ಟಿಗೆ ವಾಸಿಸಲು ಪ್ರಾರಂಭಿಸಿದರು. ಬ್ರೇಕಪ್ ಬಗ್ಗೆ ಮಾತನಾಡುವಾಗ, ಸಾಟೊ ಚಾಕುವಿನಿಂದ ಯುವಕನ ಉಂಗುರದ ಬೆರಳನ್ನು ಕತ್ತರಿಸಿ ಮದ್ಯದಲ್ಲಿ ಹಾಕಿ ಫ್ರಿಡ್ಜ್‌ನಲ್ಲಿ ಇಟ್ಟಿದ್ದಳು. ಆದರೆ, ಆರೋಪಿ ಗೆಳತಿ ಹೇಳುವುದೇನೆಂದರೆ, ಆ ಯುವಕನೇ ಇದನ್ನು ಮಾಡಿದ್ದಾನೆ.

ಹೈದರಾಬಾದ್‌ನಲ್ಲಿ ಪಾಕಿಸ್ತಾನ ವಿರುದ್ಧ ಆಕ್ರೋಶ: ಕರಾಚಿ ಬೇಕರಿ ಧ್ವಂಸ

ಹೈದರಾಬಾದ್: ಭಾರತ ಮತ್ತು ಪಾಕಿಸ್ತಾನ ಗಡಿ




ಯಾಚೆಗಿನ ದಾಳಿಗಳ ನಂತರ ಕದನ ವಿರಾಮ ಒಪ್ಪಂದವನ್ನು ಘೋಷಿಸಿದ ಒಂದು ದಿನದ ನಂತರ ಹೈದರಾಬಾದ್‌ನಲ್ಲಿರುವ ಕರಾಚಿ ಬೇಕರಿಯನ್ನು ಸ್ಥಳೀಯ ಬಿಜೆಪಿ ಬೆಂಬಲಿಗರ ಗುಂಪೊಂದು 'ಭಾರತ್ ಮಾತಾ ಕಿ ಜೈ' ಘೋಷಣೆಗಳನ್ನು ಕೂಗುತ್ತಾ ಧ್ವಂಸಗೊಳಿಸಿದೆ. ಈ ಘಟನೆ ಹೈದರಾಬಾದ್‌ನ ಶಂಷಾಬಾದ್‌ನಲ್ಲಿ ನಡೆದಿದೆ. ಪಾಕಿಸ್ತಾನದ ನಗರದ ಹೆಸರನ್ನೇ ಕರಾಚಿ ಬೇಕರಿ ಎಂದು ಹೆಸರಿಸಲಾಗಿದ್ದರೂ, 1953ರಲ್ಲಿ ವಿಭಜನೆಯ ಸಮಯದಲ್ಲಿ ಭಾರತಕ್ಕೆ ವಲಸೆ ಬಂದ ಖಾಂಚಂದ್ ರಾಮನಾನಿ ಎಂಬ ಸಿಂಧಿ ಹಿಂದೂ ವ್ಯಕ್ತಿ ಕರಾಚಿ ಬೇಕರಿಯನ್ನು ಸ್ಥಾಪಿಸಿದರು.

ಘಟನೆಯ ದೃಶ್ಯಗಳಲ್ಲಿ ಕೇಸರಿ ಸ್ಕಾರ್ಫ್ ಧರಿಸಿ ಭಾರತೀಯ ಧ್ವಜವನ್ನು ಹಿಡಿದಿದ್ದ ಗುಂಪೊಂದು 'ಕರಾಚಿ' ಕೃತಿಯನ್ನು ಪ್ರದರ್ಶಿಸುವ ಸೈನ್ ಬೋರ್ಡ್‌ಗೆ ಕೋಲುಗಳಿಂದ ಹೊಡೆದಿದೆ. ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಬಾಲರಾಜು ದಾಳಿಕೋರರು ಬಿಜೆಪಿಯೊಂದಿಗೆ ಸಂಬಂಧ ಹೊಂದಿದ್ದಾರೆ ಎಂದು ಹೇಳಿದರು.

ಟಿಬೆಟ್‌ನಲ್ಲಿ ಭೂಕಂಪ: ಭಯಭೀತರಾಗಿ ಮನೆಗಳಿಂದ ಹೊರಗೆ ಓಡಿದ ಜನರು

ಟಿಬೆಟ್: ಚೀನಾ ಆಕ್ರಮಿತ ಟಿಬೆಟ್‌ನಲ್ಲಿ ಸೋಮವಾರ ಬೆಳಗಿನ ಜಾವ 2.41ಕ್ಕೆ ಭಾರಿ ಭೂಕಂಪನ ಸಂಭವಿಸಿದೆ.



ರಿಕ್ಟರ್ ಮಾಪಕದಲ್ಲಿ ಭೂಕಂಪದ ತೀವ್ರತೆ 5.7ರಷ್ಟು ದಾಖಲಾಗಿದೆ. ಭೂಮಿ ನಡುಗುತ್ತಿದ್ದಂತೆ, ಭಯಭೀತರಾದ ಜನರು ಮನೆಗಳಿಂದ ಹೊರಗಡೆ ಓಡಿ ಬಂದಿದ್ದಾರೆ.

ವರದಿಗಳ ಪ್ರಕಾರ ಭೂಕಂಪವು ನೆಲದಿಂದ ಕೇವಲ 9 ಕಿ.ಮೀ. ಆಳದಲ್ಲಿ ಉಂಟಾಗಿದೆ. ಇದರಿಂದಾಗಿ ಪ್ರಬಲ ಕಂಪನಗಳು ಸಂಭವಿಸಿದ ಅನುಭವವಾಗಿದೆ. ಆದರೆ ಈ ಭೂಕಂಪದಿಂದ ಯಾವುದೇ ದೊಡ್ಡ ಹಾನಿಯಾದ ಬಗ್ಗೆ ಇಲ್ಲಿಯವರೆಗೆ ಯಾವುದೇ ವರದಿಗಳು ಆಗಿಲ್ಲ. ಟಿಬೆಟ್‌ನಲ್ಲಿ ಆಗಾಗ್ಗೆ ಭೂಕಂಪನಗಳು ಸಂಭವಿಸುತ್ತಲೇ ಇರುತ್ತವೆ. ಅಲ್ಲದೆ, ಇತ್ತೀಚೆಗೆ ಕಳೆದ ಶುಕ್ರವಾರ ಚಿಲಿ ಮತ್ತು ಅರ್ಜೆಂಟೀನಾದಲ್ಲಿ 7.4ರ ತೀವ್ರತೆಯ ಭೂಕಂಪ ಸಂಭವಿಸಿತ್ತು. ಭೂಕಂಪದಿಂದಾಗಿ ಯಾವುದೇ ಜೀವ ಅಥವಾ ಆಸ್ತಿಪಾಸ್ತಿ ನಷ್ಟವಾಗಿರಲಿಲ್ಲ.

ಮೈಸೂರು ಮಿತ್ರ ಮಂಗಳವಾರ 13 ಮೇ 2025

ಕೊಡವರಿಗಾಗಿ ಪ್ರತ್ಯೇಕ ಕೋಡ್‌ಗೆ ಆಗ್ರಹಿಸಿ ಸಿಎನ್‌ಸಿ ಮಾನವ ಸರಪಳಿ



ಪ್ರತ್ಯೇಕ ಕೋಡ್‌ಗೆ ಆಗ್ರಹಿಸಿ ಕಕ್ಕಬೆಯಲ್ಲಿ ಸಿಎನ್‌ಸಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿತು

ಮಡಿಕೇರಿ, ಮೇ 12– ರಾಷ್ಟ್ರೀಯ ಜನಗಣತಿಯ ಸಂದರ್ಭ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕು. ಸಂಸತ್ ಹಾಗೂ ವಿಧಾನಸಭೆಯಲ್ಲಿ ಕೊಡವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಪಾಡಿನಾಡ್‌ನ ಕಕ್ಕಬೆಯಲ್ಲಿ ಮಾನವ ಸರಪಳಿ ನಿರ್ಮಿಸಿ ಜನಜಾಗೃತಿ ಮೂಡಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಕಕ್ಕಬೆ ಜಂಕ್ಷನ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ಮಾತನಾಡಿ, ರಾಷ್ಟ್ರೀಯ ಜನಗಣತಿಯಲ್ಲಿ ಕೊಡವರಿಗೆ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಲು ಕೇಂದ್ರ ಗೃಹ ಮಂತ್ರಾಲಯ ರಿಜಿಸ್ಟ್ರಾರ್ ಜನರಲ್ ಮತ್ತು ಭಾರತದ ಜನಗಣತಿ ಆಯೋಗವನ್ನು ಒತ್ತಾಯಿಸುವುದಾಗಿ ತಿಳಿಸಿ ಹೊರಗಿನ ಆಡಳಿತಗಾರರು ವಶಪಡಿಸಿ ಕೊಂಡ, ಬಂಡವಾಳಶಾಹಿಗಳಿಗೆ ಅಡಮಾನವಿಟ್ಟ, ಭೋಗ್ಯಕ್ಕೆ ನೀಡಿದ ಮತ್ತು ಮಾರಾಟ ಮಾಡಿದ ಕೊಡವರ ಪೂರ್ವಾರ್ಜಿತ ಅನುವಂಶಿಕ ಭೂ ಹಕ್ಕುಗಳನ್ನು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಬಾಚಮಂಡ ರಾಜ ಪೂವಣ್ಣ, ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ನಾಣಯ್ಯ, ಕಲಿ ಯಂಡ ಪ್ರಕಾಶ್, ಪಾಂಡಂಡ ನರೇಶ್, ಅಪ್ಪಾರಂಡ ಶ್ರೀನಿವಾಸ್, ಬೊಳಿ ಯಾಡಿರ ಸಂತು, ಕಲ್ಯಾಟಂಡ ರಘು, ಬಾಚಮಂಡ ಲವ, ಅಪ್ಪಾರಂಡ ವಿಜು, ಕಂಬೆಯಂಡ ಅನು ಸುಬ್ಬಯ್ಯ ಮತ್ತಿತರರು ಪಾಲ್ಗೊಂಡು ಸೂರ್ಯ ಮತ್ತು ಚಂದ್ರ, ಗುರು–ಕಾರೋಣ, ಶ್ರೀ ಇಗ್ಗುತ್ತಪ್ಪ, ಜೀವನದಿ ಕಾವೇರಿ, ಭೂಮಿ ತಾಯಿ, ಪ್ರಕೃತಿ ದೇವಿ, ಪರ್ವತ ದೇವಿ ಮತ್ತು ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ ಸಿಎನ್‌ಸಿ ಪರ ಬೆಂಬಲ ಸೂಚಿಸಿದರು.

ರಜೆ ಮೇಲೆ ಊರಿಗೆ ಬಂದಿದ್ದ ಸೈನಿಕ ಅಪಘಾತದಲ್ಲಿ ಸಾವು

ಗೋಣಿಕೊಪ್ಪ: ರಜೆಯಲ್ಲಿ ಊರಿಗೆ ಬಂದಿದ್ದ ಸೈನಿಕ ವಾಹನ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಮಾಯಮುಡಿಯ ಕಮಟೆಯಲ್ಲಿ ನಡೆದಿದೆ. ಪೊನ್ನಂಪೇಟೆ ತಾಲೂಕಿನ ಬಿಳೂರು ಗ್ರಾಮದ ಬಿದ್ದಮಾಡ ಬಿಪಿನ್ ಭೀಮಯ್ಯ(35) ದುರಂತದಲ್ಲಿ ಸಾವಿಗೀಡಾದವರು.

ಶ್ರೀನಗರದಲ್ಲಿ ಸೇನೆ ಜೆಸಿಒ ಅಧಿಕಾರಿಯಾಗಿರುವ ಇವರು, 48 ದಿನಗಳ ಹಿಂದೆ ರಜೆಯಲ್ಲಿ ಆಗಮಿಸಿದ್ದು, ಜೂ.7ಕ್ಕೆ ಕರ್ತವ್ಯಕ್ಕೆ ಹಿಂದಿರುಗಬೇಕಿತ್ತು.

ಘಟನೆ ವಿವರ: ಗೋಣಿಕೊಪ್ಪದಲ್ಲಿ ಮದುವೆಯಲ್ಲಿ ಪಾಲ್ಗೊಂಡು ಸಂಜೆ 5.15 ಗಂಟೆ ಹೊತ್ತಿನಲ್ಲಿ ಕಾರಿ (ಕೆ.ಎ.53, ಎಂಬಿ–7192)ನಲ್ಲಿ ನಾಲ್ವರೊಂದಿಗೆ ಮನೆಗೆ ತೆರಳುತ್ತಿದ್ದಾಗ ಮಾಯಮುಡಿ ಗ್ರಾಮದ ಕಮಟೆ ಎಂಬಲ್ಲಿ ಕಾರು ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಮುಂದೆ ಕುಳಿತಿದ್ದ ಭೀಮಯ್ಯರ ತಲೆ ಕಾರಿನ ಗಾಜಿಗೆ ಬಡಿದ ಪರಿಣಾಮ ತೀವ್ರರಕ್ತಸ್ರಾವಕ್ಕೊಳಗಾಗಿ ಕಾರಿನಲ್ಲಿ ಸಿಲುಕಿಕೊಂಡಿದ್ದರು.

ಪೊಲೀಸರು ಸ್ಥಳೀಯರ ಸಹಕಾರದಲ್ಲಿ ಕಾರಿನಿಂದ ಹೊರ ತೆಗೆದು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸೇರಿಸಿದರಾದರೂ ಆಸ್ಪತ್ರೆಯಲ್ಲಿ ಕೊನೆ ಉಸಿರೆಳೆದರು. ಕಾರಿನಲ್ಲಿದ್ದ ಉಳಿದ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕಾರಿನ ಚಾಲಕ ಜಬೀರ್ ವಿರುದ್ಧ ಗೋಣಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿರಾಜಪೇಟೆ ತಾಲೂಕು ಪಂಚಾಯಿತಿ ಸಾಮಾನ್ಯ ಸಭೆ

ಮಡಿಕೇರಿ, ಮೇ 12–ವಿರಾಜಪೇಟೆ ತಾಲೂಕು ಪಂಚಾಯಿತಿಯ ಸಾಮಾನ್ಯ ಸಭೆ ಸಾಮರ್ಥ್ಯ ಸೌಧದಲ್ಲಿ ತಾಲೂಕು ಆಡಳಿತಾಧಿಕಾರಿ ಹಾಗೂ ಜಿಪಂ ಉಪ ಕಾರ್ಯದರ್ಶಿ ಅಬ್ದುಲ್ ನಬೀ ನೇತೃತ್ವದಲ್ಲಿ ಜರುಗಿತು.

ಮುಂದಿನ ದಿನಗಳಲ್ಲಿ ಮಳೆಗಾಲ ಪ್ರಾರಂಭವಾಗುತ್ತಿದ್ದು, ಮುಂಜಾಗ್ರತೆಯಾಗಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸಿದ್ದರಾಗಿ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಜಲಜೀವನ್ ಮಿಷನ್ ಬ್ಯಾಚ್ 1, ಬ್ಯಾಚ್ 2 ಹಾಗೂ ಬ್ಯಾಚ್ 3 ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಸಣ್ಣ ಅಥವಾ ಅತೀ ಸಣ್ಣ ರೈತರಿಗೆ ಉಪ ಕಸುಬಾಗಿ ಹಸು ಸಾಕಾಣಿಕೆಗೆ ಹೆಚ್ಚು ಒತ್ತು ನೀಡಲು ಮಾಹಿತಿ ನೀಡಿ ಹಾಲು ಉತ್ಪಾದನೆಯನ್ನು ಹೆಚ್ಚು ಮಾಡಲು ಕ್ರಮವಹಿಸಿ ಹಾಗೂ ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಹಾಲು ಶೇಖರಣಾ ಘಟಕ ಸ್ಥಾಪನೆ ಮಾಡಲು ಚಿಂತನೆ ನಡೆಸಿ ಎಂದು ಉಪ ಕಾರ್ಯದರ್ಶಿ ಅಬ್ದುಲ್ ನಬೀ ಸಲಹೆ ನೀಡಿದರು.



ವಿರಾಜಪೇಟೆ ತಾಲೂಕು ಪಂಚಾಯಿತಿ ಸಾಮಾನ್ಯ ಸಭೆ ಸೋಮವಾರ ನಡೆಯಿತು.

ಅಕ್ಷರ ದಾಸೋಹದಿಂದ ಪ್ರಧಾನಮಂತ್ರಿ ಪೋಷಣ್ ಅಭಿಯಾನದಡಿ ಆಹಾರ ನೀಡಲಾಗುತ್ತಿದ್ದು, ಎಲ್ಲಾ ಆಹಾರ ಧಾನ್ಯಗಳ ಗುಣಮಟ್ಟ ಪರೀಕ್ಷಿಸಿ ಉತ್ತಮ ಗುಣಮಟ್ಟದ ಆಹಾರವನ್ನು ಮಕ್ಕಳಿಗೆ ನೀಡಲಾಗುತ್ತಿದೆ ಎಂದು ಸಹಾಯಕ ನಿರ್ದೇಶಕ ರಾಜೇಶ್ ಸಭೆಗೆ ಮಾಹಿತಿ ನೀಡಿದರು. ಶಿಕ್ಷಣ ಇಲಾಖೆ, ಕೃಷಿ, ಸಹಕಾರ, ಕಂದಾಯ, ಮೀನುಗಾರಿಕೆ, ಅಬಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ವಸತಿ ಇಲಾಖೆ ಅಧಿಕಾರಿಗಳು ಇಲಾಖಾವಾರು ಸಭೆಗೆ ಮಾಹಿತಿ ನೀಡಿದರು. ತಾಪಂ ಇಓ ಕೆ.ಸಿ.ಅಪ್ಪಣ್ಣ ಮಾತನಾಡಿ, ಇಲಾಖೆಗಳಲ್ಲಿರುವ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಸರಿಯಾದ ಸಮಯಕ್ಕೆ ತಲುಪಿಸುವಂತೆ ಕಾರ್ಯನಿರ್ವಹಿಸಿ ಎಂದು ವಿವಿಧ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ವಿವಿಧ ಇಲಾಖೆಗಳ ತಾಪಂ ಸಿಬ್ಬಂದಿವರ್ಗ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ದೋಣಿ ಮಗುಚಿ ಇಬ್ಬರು ಯುವಕರು ನೀರು ಪಾಲು



ದೋಣಿಕಡವು ಗ್ರಾಮದಲ್ಲಿ ಕಾವೇರಿ ನದಿಯಲ್ಲಿ ಶೋಧನೆಯಲ್ಲಿ ತೊಡಗಿರುವುದು.

ಮಡಿಕೇರಿ,ಮೇ 12– ಕಾವೇರಿ ನದಿಯಲ್ಲಿ ಸ್ನಾನಕ್ಕೆ ತೆರಳಿದ ಇಬ್ಬರು ಯುವಕರು ನದಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಎಮ್ಮೆಮಾಡು ಕೂರುಳಿ ಬಳಿಯ ಕಡಿಯತ್ತೂರು ಗ್ರಾಮದ ದೋಣಿಕಡವು ಎಂಬಲ್ಲಿ ನಡೆದಿದೆ.

ಚೇರಂಬಾಣೆ ಬಳಿಯ ಪಾಕ ಮುಕ್ಕಾಟಿ ವಿಠಲ ಪುತ್ರ ಅಯ್ಯಪ್ಪ(18) ಹಾಗೂ ಐವತ್ತೋಕ್ಲು ಗ್ರಾಮದ ಚಾರಂಡ ಕಾಲೋನಿ ನಿವಾಸಿ ಪುಟ್ಟ ಪುತ್ರ ಗಿರೀಶ್(16) ಮೃತ ದುರ್ದೈವಿಗಳಾಗಿದ್ದಾರೆ.

ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಕೂರುಳಿ ಗ್ರಾಮದಿಂದ ಕಡಿಯತ್ತೂರು–ಚೇರಂಬಾಣೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಕಾವೇರಿ ನದಿಯಲ್ಲಿ ಸ್ನಾನಕ್ಕೆ ತೆರಳಿದ್ದರು. ಯುವಕರು ಕೂರುಳಿ ಕಡೆಯಿಂದ ಕಡಿಯತ್ತೂರು ಗ್ರಾಮದ ಜನರಿಗೆ ನದಿ ದಾಟಲು ಸ್ಥಳದಲ್ಲಿ ನಿಯೋಜಿಸಿದ್ದ ದೋಣಿಯಲ್ಲಿ ಯುವಕರು ಸಾಗುವಾಗ ದೋಣಿ ಮಗುಚಿ ದುರ್ಘಟನೆ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಸ್ಥಳಕ್ಕೆ ನಾಪೋಕ್ಲು ಪೊಲೀಸರು, ಅಗ್ನಿಶಾಮಕ ಹಾಗೂ ಗೃಹ ರಕ್ಷಕ ದಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ನೀರಿನಿಂದ ಗಿರೀಶ್ ಎಂಬ ಯುವಕನ ಮೃತ ದೇಹ ಹೊರ ತೆಗೆದಿದ್ದಾರೆ. ಮತ್ತೋರ್ವ ಯುವಕ ಅಯ್ಯಪ್ಪ ಎಂಬಾತನ ಮೃತ ದೇಹಕ್ಕಾಗಿ ಶೋಧ ಕಾರ್ಯ ಮುಂದುವರೆದಿದೆ.

ಆವಂದೂರು ಶ್ರೀ ಗೋಪಾಲಕೃಷ್ಣ ದೇವಸ್ಥಾನ ಶಿಲಾನ್ಯಾಸ

ನಾಪೋಕ್ಲು, ಮೇ 12– ಇಲ್ಲಿಗೆ ಸಮೀಪದ ಅವಂದೂರು ಗ್ರಾಮದ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಗರ್ಭಗುಡಿ ಮತ್ತು ತೀರ್ಥ ಮಂಟಪದ ಶಿಲಾನ್ಯಾಸ ಕಾರ್ಯಕ್ರಮ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತು.

ಏಳುನೂರು ವರ್ಷ ಪುರಾತನ ಇತಿಹಾಸವಿರುವ ಗ್ರಾಮದ ಧಾರ್ಮಿಕ ಸಾನಿಧ್ಯ ಗೋಪಾಲಕೃಷ್ಣ ದೇವಸ್ಥಾನ. ಶ್ರೀ ಕೃಷ್ಣ ಪರಮಾತ್ಮ ಅವಂದೂರು ಗ್ರಾಮದ ಗ್ರಾಮ ದೇವರು. ಈ ದೇವಾಲಯವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪೂರ್ವಭಾವಿ ಕೆಲಸ ಕಾರ್ಯಗಳು ಧಾರ್ಮಿಕ ವಿಧಿ ವಿಧಾನದಂತೆ ಶ್ರದ್ಧಾ ಭಕ್ತಿಯಿಂದ ನಡೆಯುತ್ತಿದೆ.



ಅವಂದೂರಿನ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಗರ್ಭಗುಡಿ ಮತ್ತು ತೀರ್ಥ ಮಂಟಪದ ಶಿಲಾನ್ಯಾಸ ಕಾರ್ಯಕ್ರಮ ಸಂಪನ್ನಗೊಂಡಿತು.

ಕಾಸರಗೋಡಿನ ಪ್ರಸಿದ್ಧ ಶ್ರೀ ನೀಲೇಶ್ವರ ಪದ್ಮನಾಭ ತಂತ್ರಿಯವರ ಮಾರ್ಗದರ್ಶನದೊಂದಿಗೆ ಮುರಾರಿ ಮತ್ತು ಸ್ಕಂದ ತಂತ್ರಿಗಳು ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಗರ್ಭಗುಡಿ ಮತ್ತು ತೀರ್ಥ ಮಂಟಪದ ಶಿಲಾನ್ಯಾಸ ಕಾರ್ಯಕ್ರಮದ ವಿಶೇಷ ಪೂಜೆ, ವಿಧಿ–ವಿಧಾನಗಳನ್ನು ನೆರವೇರಿಸಿದರು.

ಸಿಂಧೂರ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆ ಸರ್ವ ರೀತಿಯಲ್ಲೂ ಯಶಸ್ಸು ಕಾಣಲಿ. ನಮ್ಮ ಹೆಮ್ಮೆಯ ಸೈನಿಕರು ಯಾವುದೇ ಹಾನಿಯಿಲ್ಲದೆ ಸುರಕ್ಷಿತವಾಗಿ ಕಾರ್ಯಾಚರಿಸಲು ಶ್ರೀ ಗೋಪಾಲಕೃಷ್ಣ ಸ್ವಾಮಿ ಶಕ್ತಿ ನೀಡಲಿ ಎಂದು ಪೂಜೆ ಸಲ್ಲಿಸಿದರು.

ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಪ್ರಧಾನ ಅರ್ಚಕ ದಿನೇಶ್ ಭಟ್, ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಕಡ್ಯದ ಸೋಮಣ್ಣ, ಉಪಾಧ್ಯಕ್ಷ ಚೊಕ್ಕಾಡಿ ಅಪ್ಪಯ್ಯ, ಕಾರ್ಯದರ್ಶಿ ಪಟ್ಟಡ ಸುಗುಣ ಕುಮಾರ್, ಖಜಾಂಚಿ ಬೆಳ್ಯನ ಚಂದ್ರಪ್ರಕಾಶ್, ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು, ದೇವಸ್ಥಾನ ಜೀರ್ಣೋದ್ಧಾರದ ಮೂಲ ಸಮಿತಿ, ಗ್ರಾಮದ ತಕ್ಕ ಮುಖ್ಯಸ್ಥರು, ಭಕ್ತಾದಿಗಳು ಉಪಸ್ಥಿತರಿದ್ದರು.

ಆಲೂರು, ಸಿದ್ದಾಪುರ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಆಲೂರು–ಸಿದ್ದಾಪುರ ವ್ಯಾಪ್ತಿಯ ಕೂಡುರಸ್ತೆ, ಮಾಲಂಬಿ, ಹೊಸಗುತ್ತಿ, ಕಣಿವೆ, ಬಸವನಹಳ್ಳಿ, ಸಂತೆ ಬಸವನ ಹಳ್ಳಿ, ಸೀಗೆಮರೂರು, ಬಡುವನಹಳ್ಳಿ, ಕೈಸರಳ್ಳಿ, ಹೊನ್ನೆಕೊಪ್ಪಲು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಪ್ರಕಟಣೆ ತಿಳಿಸಿದೆ.

ಕಾರು, ಬೈಕ್ ಡಿಕ್ಕಿ: ಸವಾರ ಸಾವು

ವಿರಾಜಪೇಟೆ: ತಾಲೂಕಿನ ಅಮ್ಮತ್ತಿ ಬಳಿ ಕಾರು ಮತ್ತು ಬೈಕ್ ಮುಖಾಮುಖಿ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿದ್ದು ಹಿಂಬದಿ ಕುಳಿತಿದ್ದ ವ್ಯಕ್ತಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಡೆದಿದೆ.



ಬೈಕ್ ಸವಾರ ಡಾಲ್ಡನ್ ಅಸುನೀಗಿದ್ದು, ಹಿಂಬದಿ ಸವಾರ ಜೇಖರ್ ವಿಲ್ಲಿಗೆ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಸಿದ್ದಾಪುರ ರಸ್ತೆಯಲ್ಲಿರುವ ಆನಂದಪುರದಿಂದ ರಾತ್ರಿ 8 ಗಂಟೆಯ ವೇಳೆ ಅಮ್ಮತ್ತಿ ಅಂಗಡಿಗೆ ಬಂದು ಸಾಮಗ್ರಿಗಳನ್ನು ಪಡೆದು ವಾಪಸ್ ಮನೆಗೆ ತೆರಳುವಾಗ ಗುಡ್ಡೆಹೊಸೂರಿನಿಂದ ಬಂದ ಮೂವರಿದ್ದ ಕಾರು ರಸ್ತೆ ತಿರುವಿನಲ್ಲಿ ಬೈಕಿಗೆ ಡಿಕ್ಕಿ ಹೊಡೆದಿದೆ. ಕಾರು ಗುದ್ದಿದ ರಭಸಕ್ಕೆ ಬೈಕ್‌ನಲ್ಲಿದ್ದವರಿಬ್ಬರು ಕೆಳಗೆ ಉರುಳಿದ್ದಾರೆ ನಂತರ ಕಾರು ವಿದ್ಯುತ್ ಕಂಬಕ್ಕೆ ತಗುಲಿ ಮಗುಚಿಕೊಂಡಿದೆ. ನಂತರ ಅದೇ ರಸ್ತೆಯಲ್ಲಿ ಹೋಗುತ್ತಿದ್ದವರೊಬ್ಬರು ಬೈಕ್ ಸವಾರ ಆನಂದಪುರದ ನಿವಾಸಿ ಡಾಲ್ಡನ್(55)ನನ್ನು ಆಸ್ಪತ್ರೆಗೆ ಕೊಂಡೊಯ್ದರಾದರೂ ಮಾರ್ಗಮಧ್ಯೆ ಮೃತಪಟ್ಟಿರುವುದಾಗಿ ಗೊತ್ತಾಗಿದೆ.

ತೀವ್ರವಾಗಿ ಗಾಯಗೊಂಡ ಹಿಂಬದಿ ಸವಾರ ಜೇಖರ್ ವಿಲ್ಲಿಗೆ ವಿರಾಜಪೇಟೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಹೇಳಲಾಗಿದೆ. ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಮೃತನ ಶವ ಪರಿಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಮೇ 15, ಚಾಮರಾಜನಗರದಲ್ಲಿ ಮಾಕ್ ಡ್ರಿಲ್



ಮಾಕ್ ಡ್ರಿಲ್ ಆಯೋಜನೆ ಕುರಿತ ಪೂರ್ವಭಾವಿ ಸಭೆಯನ್ನು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ನಡೆಸಿದರು

ಚಾಮರಾಜನಗರ, ಮೇ 12 – ತುರ್ತು ಸಂದರ್ಭದಲ್ಲಿ ನಾಗರಿಕರನ್ನು ಹಾಗೂ ಪ್ರಮುಖ ಸ್ಥಳಗಳನ್ನು ರಕ್ಷಣೆ ಮಾಡುವ ಆಪರೇಷನ್ ಅಭ್ಯಾಸ್ ಅಣಕು ಪ್ರದರ್ಶನವನ್ನು (ಮಾಕ್ ಡ್ರಿಲ್) ಪಟ್ಟಣದ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಮೇ 15ರ ಸಂಜೆ 4 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಾಗರಿಕರ ರಕ್ಷಣಾ ಕಾರ್ಯ ಚಟುವಟಿಕೆಗಳ ಕುರಿತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವ ಸಂಬಂಧ ಮಾಕ್ ಡ್ರಿಲ್ ಆಯೋಜನೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ನಗರದ ಚಾಮರಾಜೇಶ್ವರ ದೇವಾಲಯದಲ್ಲಿ ಅಣಕು ಕಾರ್ಯಚರಣೆ (ಮಾಕ್ ಡ್ರಿಲ್) ಪ್ರದರ್ಶನ ಕೈಗೊಂಡು ಜಾಗೃತಿ ಮೂಡಿಸಲಾಗುತ್ತದೆ. ಈ ಅಣಕು ಕಾರ್ಯಚರಣೆಗೆ ಪೊಲೀಸ್ ಇಲಾಖೆ, ಅಗ್ನಿಶಾಮಕ ದಳ, ಹೋಂ ಗಾರ್ಡ್, ವೈದ್ಯಕೀಯ ತಂಡ, ಸಾರಿಗೆ ತಂಡ, ಕಂಟ್ರೋಲ್ ರೂಂ, ಇನ್ನಿತರ ತಂಡಗಳನ್ನು ರಚಿಸಲಾಗಿದ್ದು ಸಂಬಂಧಪಟ್ಟ ಅಧಿಕಾರಿಗಳು ಕಾರ್ಯ ನಿರ್ವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಅಣಕು ಕಾರ್ಯಾಚರಣೆಗೆ ಪೂರಕವಾಗಿರುವ ಎಲ್ಲ ಸಿದ್ದತೆಗಳನ್ನು ಅಧಿಕಾರಿಗಳು ಸಮರ್ಪಕವಾಗಿ ಕೈಗೊಳ್ಳಬೇಕು. ಅಗತ್ಯವಿರುವ ವಾಹನಗಳು, ಸಲಕರಣೆಗಳು, ಕಂಟ್ರೋಲ್ ರೂಂ, ಸಿಬ್ಬಂದಿ ನಿಯೋಜನೆ, ಆಂಬುಲೆನ್ಸ್‌ಗಳ ಕಾರ್ಯಾಚರಣೆ ಸೇರಿದಂತೆ ಎಲ್ಲವನ್ನು ಪರಿಪೂರ್ಣವಾಗಿ ಸಿದ್ದ ಮಾಡಿಕೊಂಡಿರಬೇಕು. ಜನರ ರಕ್ಷಣೆಗೆ ಕೈಗೊಳ್ಳಲಾಗುವ ಸುರಕ್ಷತಾ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಕ್ ಡ್ರಿಲ್ ಮುಖಾಂತರ ತಿಳಿವಳಿಕೆ ನೀಡಬೇಕಿದೆ. ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಅವರು ಮಾತನಾಡಿ, ಅಣಕು ಕಾರ್ಯಚರಣೆ ಬಗ್ಗೆ ಮಾಹಿತಿ ನೀಡಿ ಜನರನ್ನು ಜಾಗೃತಗೊಳಿಸಬೇಕು. ಅವಘಡದ ಸಂದರ್ಭದಲ್ಲಿ ಹೇಗೆ ಕಾರ್ಯಚರಣೆ ಮಾಡಲಾಗುತ್ತದೆ. ಈ ಸಮಯದಲ್ಲಿ ಸಾರ್ವಜನಿಕರ ಪಾತ್ರ, ವಿವಿಧ ಇಲಾಖೆಗಳು ನಿರ್ವಹಿಸಬೇಕಿರುವ ಕರ್ತವ್ಯಗಳ ಬಗ್ಗೆ ಮನವರಿಕೆ ಮಾಡಿ ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ಮಾಡಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಕುಮಾರ್, ಉಪ ವಿಭಾಗಾಧಿಕಾರಿ ಬಿ.ಆರ್.ಮಹೇಶ್, ತಹಶೀಲ್ದಾರರಾದ ಗಿರಿಜಾ, ರಮೇಶ್ ಬಾಬು, ಬಸವರಾಜು, ಗುರುಪ್ರಸಾದ್, ಜಿಲ್ಲ ಅಗ್ನಿಶಾಮಕ ಅಧಿಕಾರಿ ಕೆ.ಪಿ. ಗುರುರಾಜ್, ಜಿಲ್ಲಾ ಗೃಹರಕ್ಷಕದಳ ಸಮಾದೇಷ್ಟರಾದ ಎಸ್.ಜಿ. ಮಹಾಲಿಂಗಸ್ವಾಮಿ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ವಿಜೃಂಭಣೆಯ ಪಾರ್ವತಿ ಬೆಟ್ಟದ ಬ್ರಹ್ಮ ರಥೋತ್ಸವ



ಗುಂಡ್ಲುಪೇಟೆ ತಾಲೂಕಿನ ಸ್ಕಂದಗಿರಿ ಪಾರ್ವತಾಂಭೆ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಗುಂಡ್ಲುಪೇಟೆ, ಮೇ 12– ತಾಲೂಕಿನ ಪಾರ್ವತಿ ಬೆಟ್ಟದಲ್ಲಿ ಪಾರ್ವತಾಂಭೆ ಸಮೇತ ಶ್ರೀ ಸೋಮೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ಸೋಮವಾರ ಸಹಸ್ರಾರು ಭಕ್ತರ ದಿವ್ಯ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ವೈಶಾಖ ಶುದ್ಧ ಪೂರ್ಣಿಮೆಯ ದಿನ ಪಾರ್ವತಾಂಬೆ ಸಮೇತ ಶ್ರೀ ಸೋಮೇಶ್ವರ ಸ್ವಾಮಿಯ ರಥೋತ್ಸವ ನಡೆಯುತ್ತಾ ಬಂದಿದ್ದು, ರಥೋತ್ಸವದ ಹಿನ್ನೆಲೆಯಲ್ಲಿ ದೇವಾಲಯವನ್ನು ತಳಿರು ತೋರಣ ಹಾಗೂ ವಿದ್ಯುತ್‌ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆ ವಿಶೇಷ ಪೂಜೆಯ ನಂತರ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಮೂಲಕ ತಂದು ರಥಕ್ಕೆ ಕೂರಿಸಲಾಯಿತು. ಮಧ್ಯಾಹ್ನ 12 ಗಂಟೆಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮತ್ತು ತಹಸೀಲ್ದಾರ್ ಟಿ.ರಮೇಶ್ ಬಾಬು ರಥಕ್ಕೆ ಪೂಜೆ ಸಲ್ಲಿಸಿದ ನಂತರ ಭಕ್ತರು ರಥವನ್ನು ಎಳೆಯಲಾರಂಭಿಸಿದರು. ಬೆಟ್ಟದ ತಪ್ಪಲಿನಲ್ಲಿ ಒಂದು ಸುತ್ತು ಹಾಕಿದ ರಥವನ್ನು ಸ್ವಸ್ಥಾನಕ್ಕೆ ಸೇರಿಸಿದ ನಂತರ ಭಕ್ತರಿಗೆ ಅನ್ನಸಂತರ್ಪಣೆ ಹಾಗೂ ಪ್ರಸಾದ ವಿನಿಯೋಗ ಮಾಡಲಾಯಿತು.

ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸುವ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಆಯೋಜಿಸಿದ್ದರು. ಕ್ಷೇತ್ರದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ರಥೋತ್ಸವ ಸಂದರ್ಭದಲ್ಲಿ ಹಾಜರಿದ್ದರು.

ಕಾವೇರಿ ನದಿ ತೀರದಲ್ಲಿ ಹಸುಗೂಸಿನ ಶವ ಪತ್ತೆ

ಕೊಳ್ಳೇಗಾಲ, ಮೇ 12– ಕಾವೇರಿ ನದಿ ತೀರದಲ್ಲಿ ಅಪರಿಚಿತ ಹೆಣ್ಣು ಹಸುಗೂಸಿನ ಶವವೊಂದು ತೇಲಿ ಬಂದಿರುವ ಘಟನೆ ಜರುಗಿದೆ.

ತಾಲೂಕಿನ ಹರಳೆ ಗ್ರಾಮದ ಸಮೀಪ ಹರಿಯುತ್ತಿರುವ ಕಾವೇರಿ ನದಿಯಲ್ಲಿ ಸುಮಾರು 20 ರಿಂದ 30 ದಿನದೊಳಗಿನ ಹೆಣ್ಣು ಶಿಶುವಿನ ಶವ ಪತ್ತೆಯಾಗಿದೆ. ವಿಷಯ ತಿಳಿದ ಗ್ರಾಮಾಂತರ ಠಾಣೆಯ ಎಸ್‌ಐ ಸುಪ್ರೀತ್ ಹಾಗೂ ಕ್ರೈಂಎಸ್‌ಐ ಚೆಲುವರಾಜು ಹಾಗೂ ಸಿಬ್ಬಂದಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಿಡಿಪಿಒ ಕಚೇರಿ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿ ಶಿಶುವಿನ ಪತ್ತೆಗಾಗಿ ಚಾ.ನಗರ ಆಸ್ಪತ್ರೆಯ ಕೋಲ್ಡ್ ಸ್ಟೋರೇಜ್ ನಲ್ಲಿರಿಸಿದ್ದಾರೆ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ಸಿಡಿಪಿಒ ಕಚೇರಿಯ ಮೇಲ್ವಿಚಾರಕಿ ಪ್ರೇಮಲತಾ ಅವರು ಮಗು ನದಿಯಲ್ಲಿ ತೇಲಿ ಬಂದ ವಿಚಾರ ತಿಳಿದು ಪೊಲೀಸರಿಗೆ ಮಾಹಿತಿ ನೀಡಿದ್ದೇನೆ. ಹುಟ್ಟಿದ ಮಗುವನ್ನು 2 ದಿನಗಳ ಬಳಿಕ ನದಿಯಲ್ಲಿ ಬಿಟ್ಟು ಸಾಕ್ಷಿ ನಾಶಪಡಿಸಲು ಮಗುವಿನ ಸಂಬಂಧಿಗಳು ಈಕೃತ್ಯ ಎಸಗಿರಬಹುದು ಎಂದು ಶಂಕಿಸಿ ಪೊಲೀಸರಿಗೆ ದೂರು ನೀಡಿದ್ದಾರೆ.

ಬುದ್ಧರ ಆದರ್ಶ, ಚಿಂತನೆಗಳು ವಿಶ್ವ ಶಾಂತಿಗೆ ಪ್ರೇರಕ : ಶಾಸಕ ಎಆರ್‌ಕೆ



ಬುದ್ಧ ಪ್ರತಿಮೆ ಮೆರವಣಿಗೆಯು ಚಾಮರಾಜನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿತು.

ಚಾಮರಾಜನಗರ: ಭಗವಾನ್ ಬುದ್ಧರು ಪ್ರಸ್ತುತಪಡಿಸಿದ ಸಮಾನತೆ, ಸಹೋದರತೆ, ಭ್ರಾತೃತ್ವದಂತಹ ಮೌಲ್ಯಯುತ ಆದರ್ಶ ಚಿಂತನೆಗಳು ವಿಶ್ವಶಾಂತಿಗೆ ಪ್ರೇರಕವಾಗಿವೆ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದ್ದಾರೆ

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 2569ನೇ ಬುದ್ಧ ಪೂರ್ಣಿಮೆ ಅಂಗವಾಗಿ ಆಯೋಜಿಸಲಾಗಿದ್ದ ಬುದ್ಧ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿಗೆ ಶಾಂತಿಮಂತ್ರ ಬೋಧಿಸಿದ ಬುದ್ಧ ಜಯಂತಿಯನ್ನು ಇದೇ ಮೊದಲ ಬಾರಿಗೆ ಆಚರಿಸುವ ಮೂಲಕ ಸರ್ಕಾರ ಉತ್ತಮ ನಿರ್ಧಾರ ಕೈಗೊಂಡಿದೆ ಎಂದರು.

ಜಿಲ್ಲಾ ಎಸ್‌ಪಿ ಡಾ. ಬಿ.ಟಿ.ಕವಿತಾ ಮಾತನಾಡಿ, ಬುದ್ಧನ ಎಲ್ಲಾ ಚಿಂತನೆಗಳು ಮಾನವ ಜೀವನವನ್ನು ಉತ್ಕೃಷ್ಟತೆಯಡೆಗೆ ಕೊಂಡೊಯ್ಯಲಿವೆ ಬುದ್ಧರು ಯಾವುದೇ ಬಲವಂತದ ಆಚರಣೆಗೆ ಆದ್ಯತೆ ನೀಡದೆ ಸಹಜ ಜೀವನಕ್ಕೆ ಒತ್ತು ನೀಡಿದರು ಎಂದರು.

ಮುಖ್ಯಭಾಷಣ ಮಾಡಿದ ಸಾಹಿತಿ ಡಾ. ಬಿ.ಆರ್.ಕೃಷ್ಣಕುಮಾರ್, ವ್ಯಕ್ತಿಯು ತನ್ನ ಸಮಸ್ಯೆಗಳನ್ನು ತಾನೇ ಅರ್ಥೈಸಿಕೊಂಡು ಪರಿಹಾರ ಕಂಡುಕೊಳ್ಳಬೇಕು. ತಳಸಮುದಾಯಗಳನ್ನು ತಮ್ಮೆಡೆಗೆ ಸೆಳೆದು ಜೀವನ ಉನ್ನತೀಯಡೆಗೆ ಕೊಂಡೊಯ್ದ ಬುದ್ಧ ಪರಂಪರೆ ಇಂದಿಗೂ ಪ್ರಸ್ತುತವಾಗಿದೆ ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಮಾತನಾಡಿದರು. ಟಿ.ನರಸೀಪುರದ ಲುಂಬಿಣಿ ಬೌದ್ಧವಿಹಾರದ ಭಂತೆ ಸವಣಪಾಲ ಬಂತೇಜೀ, ಕಿರಿಯ ಬಂತೇಜೀ ಆಶೀರ್ವಚನ ನೀಡಿದರು. ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭಾ ಸದಸ್ಯ ಮಹೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಂಜುಂಡಯ್ಯ, ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾಧ್ಯಕ್ಷ ಬಸವರಾಜು, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಆರಂಭದಲ್ಲಿ ಜನಪದ ಗಾಯಕರಾದ ಸಿ.ಎಂ. ನರಸಿಂಹಮೂರ್ತಿ ಮತ್ತು ತಂಡ ನಡೆಸಿಕೊಟ್ಟ ಬುದ್ಧ ಗೀತಗಾಯನ ಕಾರ್ಯಕ್ರಮ ಗಮನ ಸೆಳೆಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಸಾರಾನಾಥ ಬೌದ್ಧವಿಹಾರದಿಂದ ಆರಂಭವಾದ ಭಗವಾನ್ ಬುದ್ಧ ಪ್ರತಿಮೆ ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಜಿಲ್ಲಾಡಳಿತ ಭವನ ತಲುಪಿತು.

ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ನಿಸರ್ಗ ಸ್ವತಂತ್ರ ಪ.ಪೂ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಕೊಳ್ಳೇಗಾಲ: ನಿಸರ್ಗ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಹತ್ತು ವಿದ್ಯಾರ್ಥಿಗಳು ಜೆಇಇ ಮೇನ್ಸ್ ಪರೀಕ್ಷೆಯಿಂದ ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಪಡೆದು ಉತ್ತಮ ಸಾಧನೆಗೈದಿದ್ದಾರೆ. ವಿದ್ಯಾರ್ಥಿಗಳಾದ ಜೀವನ್.ಎಸ್, ಭಾಸ್ಕರ್.ಆರ್, ಜಯಲಕ್ಷ್ಮಿ .ಪಿ, ಜೆ.ಆರ್.ಕೀರ್ತನ, ಜೆ.ಆರ್.ಕಿರಣ, ದಿನುಮೌರ್ಯ ವೈ.ಬಿ., ಅಜಯ್ ವಿ., ಹಂಸ ಪ್ರತಿಭಾ, ಚಂದನ ಎಂ., ಚಂದನ್ ಬಿ.ಎಸ್, ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದ್ದಾರೆ.

ಇವರನ್ನು ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಎಸ್ ದತ್ತೇಶ್‌ಕುಮಾರ್, ಅಧ್ಯಕ್ಷ ಎಸ್.ನಾಗರಾಜು, ವಿಶೇಷಾಧಿಕಾರಿ ಡಾ.ಆರ್ ನಾಗಭೂಷಣ್, ಪ್ರಾಂಶುಪಾಲ ಡಿ.ಕೃಷ್ಣೇಗೌಡ ಹಾಗೂ ಬೋಧಕ, ಬೋಧಕೇತರ ವೃಂದದವರು ಅಭಿನಂದಿಸಿದ್ದಾರೆ.

ವಿಜೃಂಭಣೆಯ ಮದ್ದೇವಲ ಮಹರ್ಷಿ ಜಯಂತಿ

ಕೊಳ್ಳೇಗಾಲ:ಶ್ರೀ ಮದ್ದೇವಲ ಮಹರ್ಷಿ ಜಯಂತೋತ್ಸವ ಅಂಗವಾಗಿ ಸೋಮವಾರ ಆಂಧ್ರ ದೇವಾಂಗದ ಕುಲಬಾಂಧವರು ಒಗ್ಗೂಡಿ ಜಯಂತಿ ಆಚರಿಸಿದರು.

ಸಮಾಜದ ಎಲ್ಲಾ ಬಂಧುಗಳು ತಮ್ಮ ಅಂಗಡಿ, ಮುಗ್ಗಟ್ಟುಗಳ ವ್ಯವಹಾರವನ್ನು ಬಂದ್ ಮಾಡಿ ಸಡಗರ, ಸಂಭ್ರಮದಿಂದ ಪಾಲ್ಗೊಂಡರು. ಪಟ್ಟಣದ ದೇವಲ ಮಹರ್ಷಿ ವೃತ್ತದಲ್ಲಿ ಶ್ರೀ ಮದ್ದೇವಲ ಮಹರ್ಷಿ ಭಾವ ಚಿತ್ರವನ್ನಿಟ್ಟು ಪೂಜೆ ಸಲ್ಲಿಸಿ, ಬಳಿಕ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು.

ದೇವಾಂಗಪೇಟೆ ಬಡಾವಣೆಯ ಚೌಡೇಶ್ವರಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ಸಲ್ಲಿಸಿದ ಬಳಿಕ ಚೌಡೇಶ್ವರಿ ಕಲ್ಯಾಣ ಮಂಟಪ ಹಾಗೂ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಪ್ರತಿ ವರುಷದಂತೆ ನಡೆಸಲಾಯಿತು.

ಈ ಸಂದರ್ಭದಲ್ಲಿ ದೇವಾಂಗಪೇಟೆಯ ಶೆಟ್ಟಿಗರಾದ ಲಕ್ಷ್ಮಣ್, ಪಿ.ಎನ್ ಶಿವಕುಮಾರ್, ನಿರಂಜನ್ ರವಿ, ಚೌಡೇಶ್ವರಿ ಕಲ್ಯಾಣ ಮಂಟಪ ಸಮಿತಿ ಅಧ್ಯಕ್ಷ ಚಿಂತು ಪರಮೇಶ್, ಉಪಾಧ್ಯಕ್ಷ ಕೆ.ಎನ್.ಸುರೇಶ್, ಕಾರ್ಯದರ್ಶಿ ಜೆ.ಶ್ರೀನಿವಾಸ್, ಸಹಕಾರ್ಯದರ್ಶಿ ವಿ.ಸದಾಶಿವ, ರಾಜರಾಜೇಶ್ವರಿ ಕಲ್ಯಾಣ ಮಂಟಪ ಅಧ್ಯಕ್ಷ ಮಂಜುನಾಥ್, ಖಜಾಂಚಿ ನಾಗಾರ್ಜುನ ಇನ್ನಿತರಿದ್ದರು



ಭಕ್ತಾಧಿಗಳಿಗೆ ಮಹರ್ಷಿ ವೃತ್ತದಲ್ಲಿ ಪ್ರಸಾದ ವಿನಿಯೋಗಿಸಲಾಯಿತು.

ಶಾಸಕ ಪುಟ್ಟರಂಗಶೆಟ್ಟಿಗೆ ಪುತ್ರ ವಿಯೋಗ

ಯಳಂದೂರು, ಮೇ 12–ಶಾಸಕ ಸಿ. ಪುಟ್ಟರಂಗಶೆಟ್ಟಿರವರ ಹಿರಿಯ ಪುತ್ರ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಪಿ.ಚಾಮರಾಜು (42) ಸೋಮವಾರ ನಿಧನ ಹೊಂದಿದ್ದಾರೆ.



ಅನಾರೋಗ್ಯದ ನಿಮಿತ್ತ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಮೃತರು ತಾಯಿ, ಸಹೋದರ ಟಿಎಪಿಸಿಎಂಎಸ್ ಉಪಾಧ್ಯಕ್ಷ ಕುಸುಮರಾಜು, ಪತ್ನಿ ಸುಪ್ರಿಯ, ಪುತ್ರ, ಪುತ್ರಿ, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಉಪ್ಪಿನಮೋಳೆಯಲ್ಲಿರುವ ಜಮೀನಿನಲ್ಲಿ ಮಂಗಳವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಪ್ಪಾರ ಸಮಾಜದ ಬಂಗಾರಿ ನಿಧನ

ಯಳಂದೂರು: ತಾಲೂಕಿನ ವೈ.ಕೆ. ಮೋಳೆ ಗ್ರಾಮದ ಉಪ್ಪಾರ ಸಮಾಜದ ಬಂಗಾರಿ(40) ಅನಾರೋಗ್ಯದ ಹಿನ್ನೆಲೆಯಲ್ಲಿ ಮೃತಪಟ್ಟಿದ್ದಾರೆ.



ಮೃತರಿಗೆ ತಂದೆ, ತಾಯಿ, ಪತ್ನಿ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸೋಮವಾರ ನಡೆಯಿತು.

ಕಾಮಿಡಿ ಕಿಲಾಡಿಗಳು ಖ್ಯಾತಿಯ ರಾಕೇಶ್ ಪೂಜಾರಿ ಇನ್ನಿಲ್ಲ



ಬೆಂಗಳೂರು: ಜನಪ್ರಿಯ ಹಾಸ್ಯ ಕಾರ್ಯಕ್ರಮ ಕಾಮಿಡಿ ಕಿಲಾಡಿಗಳು ಮೂಲಕ ಕರ್ನಾಟಕದಾದ್ಯಂತ ಜನರ ಮನಸ್ಸಿನಲ್ಲಿ ಸ್ಥಾನ ಪಡೆದಿದ್ದ ಹಾಸ್ಯ ಕಲಾವಿದ ರಾಕೇಶ್ ಪೂಜಾರಿ ದಿಢೀರ್ ಸಾವಿಗೀಡಾಗಿದ್ದಾರೆ. ರಾಕೇಶ್, ಕಾಮಿಡಿ ಕಿಲಾಡಿಗಳು 3ನೇ ಆವೃತ್ತಿಯ ವಿನ್ನರ್ ಆಗಿದ್ದರು. ಇದೀಗ ಅವರ ಅಕಾಲಿಕ ಮರಣ ಇಡೀ ಮನರಂಜನಾ ಉದ್ಯಮಕ್ಕೆ ದೊಡ್ಡ ಶಾಕ್ ಆಗಿದೆ.

ರಾಕೇಶ್ ಅವರು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮಕ್ಕೆ ಮೆಹಂದಿ ಕಾರ್ಯಕ್ರಮಕ್ಕೆ ತೆರಳಿದ್ದರು. ಈ ವೇಳೆ ಅವರಿಗೆ ಹೃದಯಾಘಾತ ಆಗಿದೆ. ಕೆಲವು ವರದಿಗಳ ಪ್ರಕಾರ ಲೋ ಬಿಪಿಯಿಂದ ಮೃತಪಟ್ಟಿದ್ದಾರೆ. ಮೇ 12ರ ಮುಂಜಾನೆ 2 ಗಂಟೆ ಸುಮಾರಿಗೆ ಈ ಘಟನೆ ಸಂಭವಿಸಿದೆ. ರಾಕೇಶ್ ಅವರ ಅಕಾಲಿಕ ಮರಣಕ್ಕೆ ಅವರ ಆಪ್ತ ಬಳಗ ಶಾಕ್ ಆಗಿದೆ.

ರಾಕೇಶ್ ಅವರು ತಮ್ಮ ನಟನಾ ಪಯಣ ಆರಂಭಿಸಿದ್ದು ಚೈತನ್ಯ ಕಲಾವಿದರು ನಾಟಕ ತಂಡದ ಮೂಲಕ. ರಾಕೇಶ್ ತುಂಬಾ ಪ್ರತಿಭಾವಂತನಾಗಿದ್ದರಿಂದ 2014ರಲ್ಲಿ 'ಕಡ್ಲೆ ಬಜಿಲ್' ತುಳು ರಿಯಾಲಿಟಿ ಶೋನಲ್ಲಿ ಅವಕಾಶ ಸಿಕ್ಕಿತು. ಈ ಶೋ ಮೂಲಕ ಜನರ ಮನಸ್ಸಿನಲ್ಲಿ ಸ್ಥಾನ ಪಡೆದರು. ಇದಾದ ಬಳಿಕ ರಾಕೇಶ್ ಅವರು 2018ರಲ್ಲಿ ಜೀ ಕನ್ನಡ 'ಕಾಮಿಡಿ ಕಿಲಾಡಿಗಳು ಸೀಸನ್ 2' ಶೋಗೆ ಸೆಲೆಕ್ಟ್ ಆದರು. ತಮ್ಮ ಹಾಸ್ಯದ ಮೂಲಕವೇ ಕನ್ನಡಿಗರ ಮನದಲ್ಲಿ ತಮ್ಮದೇ ಆದ ಸ್ಥಾನ ಪಡೆದರು. ಅವರ ಹಾಸ್ಯವು ಕರ್ನಾಟಕದ ಪ್ರತಿ ಮನೆಯನ್ನು ತಲುಪಿತು. ಇದರಿಂದ ಸಿನಿಮಾ ಅವಕಾಶಗಳು ಕೂಡ ಸಿಕ್ಕವು. ಕಾಮಿಡಿ ಕಿಲಾಡಿಗಳು 2ನೇ ಆವೃತ್ತಿಯಲ್ಲಿ ರನ್ನರ್ ಅಪ್ ತಂಡದ ಸದಸ್ಯರಾಗಿದ್ದರು.

ಮೈಸೂರು ಮಾರುಕಟ್ಟೆಗೆ ಲಗ್ಗೆ ಇಟ್ಟ ಹಣ್ಣುಗಳ ರಾಜ ಮಾವು



- ಈ ವರ್ಷ ಫಸಲು ಅಧಿಕ, ಬೆಲೆ ಕಡಿಮೆ; ಮಾರುಕಟ್ಟೆಯಲ್ಲಿ ಖರೀದಿ ಭರಾಟೆ ಜೋರು
- ಮಾವಿನ ಹಣ್ಣಿನಲ್ಲಿ ಪೌಷ್ಟಿಕಾಂಶವಿದೆ; ಸೌಂದರ್ಯವರ್ಧಕ ಗುಣವೂ ಇದೆ
- ಹಸಿದು ಹಲಸು, ಉಂಡು ಮಾವು ತಿನ್ನು; ಮಾವಿನಹಣ್ಣು ಬೆಲೆ ಅಗ್ಗ, ಆದರೆ ರುಚಿಕಟ್ಟು



ಮೈಸೂರು, ಮೇ 12(ಬಿಎಲ್‌ಯು)– ಹಣ್ಣುಗಳ ರಾಜ ಮಾವು ಪ್ರತಿಯೊಬ್ಬರ ಅಚ್ಚುಮೆಚ್ಚಿನ ಫಲ. ವಿಶೇಷ ಸ್ವಾದವುಳ್ಳ ಮಾವಿನ ಹಣ್ಣಿನಲ್ಲಿ ಪೌಷ್ಟಿಕಾಂಶದ ಜೊತೆಗೆ ಸೌಂದರ್ಯವರ್ಧಕ ಗುಣವೂ ಇದೆ. ರಸಪೂರಿ, ನೀಲಂ, ಬಾದಾಮಿ ಸೇರಿದಂತೆ ಹಲವು ರೀತಿಯ ಮಾವಿನಹಣ್ಣು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಈ ಬಾರಿ ಇಳುವರಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸಹಜವಾಗಿ ಬೆಲೆ ಕೂಡ ಕಡಿಮೆ. ಹಾಗಾಗಿ ಮಾವಿನ ಹಣ್ಣು ಖರೀದಿ ಭರಾಟೆ ಮಾರುಕಟ್ಟೆಯಲ್ಲಿ ಜೋರಾಗಿದೆ.

ಬಾಳೆಹಣ್ಣು, ಸೇಬು, ಕಿತ್ತಳೆ ಸೇರಿದಂತೆ ಬಹಳಷ್ಟು ಹಣ್ಣುಗಳು ವರ್ಷ ಪೂರ್ತಿ ದೊರೆಯುತ್ತವೆ. ಆದರೆ ಮಾವಿನ ಹಣ್ಣು ಮಾತ್ರ ವರ್ಷದ ಆರಂಭದ ಆರು ತಿಂಗಳವರೆಗೆ ಮಾತ್ರ ಲಭ್ಯವಿದೆ. ಈ ಸಂದರ್ಭದಲ್ಲಿ ಯಥೇಚ್ಛವಾಗಿ ದೊರೆಯುವ ಮಾವಿನಹಣ್ಣನ್ನು ಜನರು ತಿಂದು ಬಾಯಿ ಚಪ್ಪರಿಸುತ್ತಾರೆ.

'ಹಸಿದು ಹಲಸು, ಉಂಡು ಮಾವು ತಿನ್ನು' ಎಂದು ನಮ್ಮ ಹಿರಿಯರು ಹೇಳುತ್ತಾರೆ. ಸಾವಿರಾರು ರೀತಿಯ ಹಣ್ಣುಗಳಿರಬಹುದು, ಆದರೆ ಹಣ್ಣುಗಳಿಗೆಲ್ಲಾ ರಾಜ ಮಾತ್ರ ಮಾವು. ಮಾವಿನಹಣ್ಣಿನಲ್ಲಿ ವಿಟಮಿನ್ ಎ ಮತ್ತು ಸಿ ಅಂಶ ಹೆಚ್ಚಾಗಿದ್ದು, ಪ್ರತಿಯೊಬ್ಬರ ಅಚ್ಚುಮೆಚ್ಚಿನ ಹಣ್ಣಾಗಿದೆ. ಮಾವಿನ ಹಣ್ಣು ಸೌಂದರ್ಯವರ್ಧಕವೂ ಕೂಡ.

ಟನ್‌ಗಟ್ಟಲೇ ಮಾವಿನ ಹಣ್ಣು ಮೈಸೂರು ಮಾರುಕಟ್ಟೆ ಪ್ರವೇಶಿಸಿದೆ. ಮೈಸೂರಿನ ಮಾರಗೊಂಡನಹಳ್ಳಿ, ಹುಯಿಲಾಳು, ಕಣಿಯನಹುಂಡಿ, ಕೋಲಾರ, ಶ್ರೀನಿವಾಸಪುರ, ಆಂಧ್ರಪ್ರದೇಶದ ಮದನಪಲ್ಲಿ, ತಮಿಳುನಾಡಿನ ಕೃಷ್ಣಗಿರಿ, ಪಳನಿ, ಈರೋಡ್, ಮಹಾರಾಷ್ಟ್ರದ ರತ್ನಗಿರಿ, ದೇವಗಡ, ಸಿಂಧುದುರ್ಗ, ರಾಯಗಢ ಸೇರಿದಂತೆ ಹಲವು ಸ್ಥಳಗಳಿಂದ ಮಾವು ಮಾರುಕಟ್ಟೆಗೆ ಬಂದಿದೆ.

ಆಲ್ಫೋನ್ಸೊ ರಸಪೂರಿ, ಮಲಗೋವಾ, ತೋತಾಪುರಿ, ಸೇಂದೂರ, ಮಲ್ಲಿಕಾ, ಕೇಸರ್, ನೀಲಂ ಸೇರಿದಂತೆ ಹಲವು ತಳಿಗಳ ಮಾವಿನ ಹಣ್ಣುಗಳು ಮಾರುಕಟ್ಟೆಯಲ್ಲಿವೆ.

ಎಲ್ಲಾ ತಳಿಯ ಹಣ್ಣುಗಳನ್ನು ಎಲ್ಲಾ ಕಡೆ ಬೆಳೆಯಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಇಲ್ಲಿ ಬೆಳೆಯುವ ಕೆಲವು ತಳಿಗಳ ಹಣ್ಣುಗಳನ್ನು ಬೇರೆ ಕಡೆಗೆ ಕಳುಹಿಸಿ, ಅಲ್ಲಿ ಬೆಳೆಯುವ ತಳಿಯ ಹಣ್ಣುಗಳನ್ನು ಇಲ್ಲಿಗೆ ತರಿಸಿ ಮಾರಾಟ ಮಾಡಲಾಗುವುದು ಎಂದು ಮೈಸೂರಿನ ಆರ್‌ಎಂಸಿಯ ರೋಷನ್ ಜಮೀರ್ ಆರ್‌ಎಂಎಸ್ ಫ್ರೂಟ್ಸ್‌ನ ಕಿಸರ್ ಅಹಮ್ಮದ್ ತಿಳಿಸಿದರು.

ಈ ಬಾರಿ ಮಾವಿನ ಹಣ್ಣಿನ ಫಸಲು ಹೆಚ್ಚಾಗಿದೆ. ಇದರಿಂದ ಬೆಲೆಯಲ್ಲಿ ಸ್ವಲ್ಪ ಇಳಿಕೆಯಾಗಿದೆ. ಈ ಕಾರಣದಿಂದ ಬೇರೆ ಹಣ್ಣುಗಳನ್ನು ಖರೀದಿ ಮಾಡುವುದಕ್ಕಿಂತ ಜನರು ಮಾವಿನ ಹಣ್ಣುಗಳ ಖರೀದಿ ಮಾಡುವುದು ಹೆಚ್ಚಾಗಿದೆ.

ಹೋಲ್‌ಸೇಲ್ (ಸಗಟು ಮಾರಾಟ)ನಲ್ಲಿ 60 ರಿಂದ 110 ರೂಪಾಯಿಗೆ ವಿವಿಧ ರೀತಿಯ ಮಾವಿನ ಹಣ್ಣು ಮಾರಾಟ ಮಾಡಲಾಗುತ್ತಿದೆ. ಸಗಟು ಮಾರುಕಟ್ಟೆಯಲ್ಲಿ ರಸಪೂರಿ 35 ರಿಂದ 75 ರೂಪಾಯಿ, ಸೆಂದೂರ 15 ರಿಂದ 40 ರೂಪಾಯಿ, ಮಲ್ಲಿಕಾ 30 ರಿಂದ 60 ರೂಪಾಯಿ, ಮಲಗೋವಾ 50 ರಿಂದ 110 ರೂಪಾಯಿ, ಬಗನಪಲ್ಲಿ 15 ರಿಂದ 40 ರೂಪಾಯಿಗೆ ಮಾರಾಟವಾಗುತ್ತಿದೆ ಎಂದು ಕಿಸರ್ ಅಹಮ್ಮದ್ ಮಾಹಿತಿ ನೀಡಿದರು.

ಇದು ಸಗಟು ಮಾರುಕಟ್ಟೆಯ ಬೆಲೆಯಾದರೆ, ನಮ್ಮಿಂದ ಖರೀದಿ ಮಾಡುವ ಚಿಲ್ಲರೆ ಮಾರಾಟಗಾರರು ಮಾರುಕಟ್ಟೆಯಲ್ಲಿ ಮತ್ತು ಗಾಡಿಗಳಲ್ಲಿ 50 ರೂಪಾಯಿಯಿಂದ 150 ರೂಪಾಯಿವರೆಗೆ ವಿವಿಧ ರೀತಿಯ ಮಾವಿನ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಜನವರಿ ತಿಂಗಳಿಂದ ಮಾವಿನ ಹಣ್ಣಿನ ಸೀಜನ್ ಆರಂಭವಾಗಿ ಜುಲೈ ತಿಂಗಳ ಅಂತ್ಯದೊಳಗೆ ಮುಗಿಯುತ್ತದೆ. ಗಾಳಿ ಸಹಿತ ಭಾರಿ ಮಳೆಯಾದರೆ ಮಾವಿನ ಫಸಲು ಹಾಳಾಗುತ್ತದೆ. ಆದರೆ ಈ ವರ್ಷ ಯಾವುದೇ ಹವಾಮಾನ ಪ್ರತಿಕೂಲಕ್ಕೆ ತುತ್ತಾಗದೇ ಇಳುವರಿ ಹೆಚ್ಚಿದೆ.

ಈಗ ಎಥಿಲಿನ್ ಬಳಸಿ ಮಾವು ಮಾಗಿಸುವ ಪ್ರಕ್ರಿಯೆ

ಈ ಮೊದಲು ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾವಿನ ಹಣ್ಣು ಮಾಗಿಸಲಾಗುತ್ತಿತ್ತು. ಇದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕಾರಣ ಇದರ ಬಳಕೆ ನಿಷೇಧಿಸಲಾಗಿದೆ.

ಮಾವಿನ ಹಣ್ಣು ಮಾರಾಟಗಾರರು ಈಗಲೂ ಕ್ಯಾಲ್ಸಿಯಂ ಕಾರ್ಬೈಡ್ ಬಳಸುತ್ತಿದ್ದಾರೆಯೇ ಎಂದು ಮಾವಿನ ಹಣ್ಣು ಮಾರಾಟ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಆದರೆ ಎಲ್ಲೂ ಕಂಡು ಬಂದಿಲ್ಲ. ಈಗ ಮತ್ತೊಮ್ಮೆ ನಮ್ಮ ತಂಡ ಪರಿಶೀಲನಾ ಕಾರ್ಯಾಚರಣೆ ಕೈಗೊಳ್ಳಲಿದೆ.

ಕ್ಯಾಲ್ಸಿಯಂ ಕಾರ್ಬೈಡ್ ಬದಲು ಎಥಿಲಿನ್ ಬಳಸಿ ಮಾವಿನ ಹಣ್ಣು ಮಾಗಿಸಲು ಸರ್ಕಾರವೇ ಅನುಮತಿ ನೀಡಿದೆ.

- ಡಾ.ರವೀಂದ್ರ, ಅಂಕಿತ ಅಧಿಕಾರಿ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ

ಮೈಸೂರು ಜಿಲ್ಲೆಯ 1,500 ಹೆಕ್ಟೇರ್‌ನಲ್ಲಿ ಮಾವು ಬೆಳೆ

ಮೈಸೂರು ಜಿಲ್ಲೆಯಲ್ಲಿ 1,500 ಹೆಕ್ಟೇರ್ ಪ್ರದೇಶದಲ್ಲಿ ಮಾವಿನ ಹಣ್ಣು ಬೆಳೆಯಲಾಗುತ್ತದೆ. ಇಲ್ಲಿ ಬೆಳೆಯುವ ಮಾವಿನ ಹಣ್ಣು ಈ ಜಿಲ್ಲೆಯ ಜನರ ಬೇಡಿಕೆಯನ್ನು ಪೂರೈಸುತ್ತದೆ. ಇದರಿಂದ ಹೊರ ಜಿಲ್ಲೆ ಹಾಗೂ ರಾಜ್ಯಗಳಿಂದ ತರಿಸಿಕೊಳ್ಳುವ ಪ್ರಮೇಯ ಇಲ್ಲ.

ಭಾರಿ ಗಾಳಿ ಸಹಿತ ಮಳೆ ಇಲ್ಲದ ಕಾರಣ ಈ ಬಾರಿ ಮಾವಿನ ಫಸಲು ಹೆಚ್ಚಾಗಿದೆ. ಇನ್ನು ಕೂಡ ಮಾವಿನ ಹಣ್ಣಿನ ಸೀಸನ್ ಇದೆ. ಮೈಸೂರು ಜಿಲ್ಲೆಯಲ್ಲಿ ಹೆಚ್ಚಾಗಿ ಬಾದಾಮಿ, ರಸಪೂರಿ, ಮಲ್ಲಿಕಾ, ಮಲಗೋವಾ, ತೋತಾಪುರಿ, ನೀಲಂ ಸೇರಿದಂತೆ ಹಲವು ತಳಿಯ ಮಾವಿನ ಹಣ್ಣು ಬೆಳೆಯಲಾಗುತ್ತದೆ.

- ಮಂಜುನಾಥ್ ಅಂಗಡಿ, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಮೈಸೂರು.

ಹುಲ್ಲಿನಲ್ಲಿ ಗೂಡೆ ಕಟ್ಟಿ ಹಣ್ಣು ಮಾಡುವ ಕಾಲ ದೂರವಾಯ್ತು!

ಈ ಮೊದಲು ಮರದಿಂದ ಮಾವಿನಕಾಯಿ ಕಿತ್ತು ಹುಲ್ಲಿನಲ್ಲಿ ಗೂಡೆ ಕಟ್ಟಿ ಹಣ್ಣು ಮಾಡಲಾಗುತ್ತಿತ್ತು. ಇಂತಹ ಮಾವಿನ ಹಣ್ಣು ರುಚಿಕರ ಹಾಗೂ ಆರೋಗ್ಯದಾಯಕವೂ ಆಗಿದ್ದವು.

ಆದರೆ ಈಗ ಮಾವಿನಹಣ್ಣನ್ನು ಕೇವಲ ಒಂದೇ ದಿನದಲ್ಲಿ ಮಾಗಿಸಲು ಆರೋಗ್ಯಕ್ಕೆ ಹಾನಿಕಾರಕವಾದ ಅನೇಕ ರೀತಿಯ ರಾಸಾಯನಿಕಗಳನ್ನು ಬಳಸಲಾಗುತ್ತಿದೆ.

ಹುಲ್ಲು ಬಳಸಿ ಮಾವಿನ ಹಣ್ಣು ಮಾಗಿಸುವ ಪ್ರಕ್ರಿಯೆ ಹೆಚ್ಚು ಸಮಯ ತೆಗೆದುಕೊಳ್ಳುವ ಕಾರಣ ಈಗ ರಾಸಾಯನಿಕ ಬಳಸಿ ಮಾವಿನಹಣ್ಣು ಮಾಗಿಸಲಾಗುತ್ತಿದೆ. ಈ ಮೊದಲು ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾವಿನ ಹಣ್ಣು ಮಾಗಿಸಲಾಗುತ್ತಿತ್ತು. ಗಂಟಲು ಕೆರೆತ, ತುರಿಕೆ, ಚರ್ಮದ ಸಮಸ್ಯೆ ಅಲರ್ಜಿ ಸೇರಿದಂತೆ ದೀರ್ಘಕಾಲೀಕವಾದ ಹಲವು ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ.

ಆದರೆ ಇದು ಆರೋಗ್ಯದ ಮೇಲೆ ತೀವ್ರರೀತಿಯ ದುಷ್ಪರಿಣಾಮ ಬೀರುತ್ತಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರ ಇದರ ಬಳಕೆಯನ್ನು ನಿಷೇಧಿಸಿತು. ಆದರೂ ಕೆಲವು ಮಾವಿನ ಹಣ್ಣು ಮಾರಾಟಗಾರರು ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾವಿನ ಹಣ್ಣು ಮಾಗಿಸುತ್ತಿದ್ದಾರೆ ಎಂಬ ದೂರುಗಳು ಅಲ್ಲಲ್ಲಿ ಕೇಳಿಬರುತ್ತಿವೆ.

'ಆಪರೇಷನ್ ಸಿಂಧೂರ' ಯಶಸ್ಸು; ಭಾರತೀಯ ಯೋಧರಿಗೆ ಗೌರವ ಸಲ್ಲಿಕೆ



'ಆಪರೇಷನ್ ಸಿಂಧೂರ' ಯಶಸ್ಸಿಗೆ ಹೋರಾಡಿದ ವೀರಯೋಧರ ಶೌರ್ಯವನ್ನು ಬೆಂಬಲಿಸಿ ವಿಜಯೋತ್ಸವ ಆಚರಿಸಲಾಯಿತು.

ಮೈಸೂರು, ಮೇ 12(ಎಸ್‌ಪಿಎನ್)– ಪಹಲ್ಗಾಮ್ ಹತ್ಯಾಕಾಂಡ ಸಂಬಂಧ 'ಆಪರೇಷನ್ ಸಿಂಧೂರ' ಯಶಸ್ಸಿಗೆ ಕಾರಣಕರ್ತರಾದ ಭಾರತೀಯ ಸೇನೆಯ ವೀರಯೋಧರ ಶೌರ್ಯವನ್ನು ಬೆಂಬಲಿಸಿ ಶ್ರೀರಾಮಕೃಷ್ಣ ಸೇವಾ ಪ್ರತಿಷ್ಠಾನದ ಪದಾಧಿಕಾರಿಗಳು ಸೋಮವಾರ ವಿಜಯೋತ್ಸವ ಆಚರಿಸಿದರು.

ಇದರ ನೇತೃತ್ವವನ್ನು ಮಾಜಿ ಶಾಸಕ ಡಿ.ಮಾದೇಗೌಡ ವಹಿಸಿದ್ದರು. ಭಾರತೀಯ ಸೇನೆ ಪರವಾಗಿ ತಿರಂಗಾ ಪ್ರದರ್ಶಿಸಿ ವಿವಿಧ ಘೋಷಣೆಗಳನ್ನು ಕೂಗಿದರು. ಜೊತೆಗೆ ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ವೀರಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು. ಈ ವೇಳೆ ಡಾ.ಎಸ್.ಪಿ.ಯೋಗಣ್ಣ, ಕಾರ್ಯದರ್ಶಿ ಕೆಂಪಲಿಂಗರಾಜು, ಬಸವಣ್ಣ, ಶ್ರೀ ಶಾರದಾದೇವಿ ಪ್ರತಿಷ್ಠಾನದ ಬಿ.ಎಂ.ರಘು, ರಾಕೇಶ್ ಭಟ್, ವಿಜಯಾ ಮಂಜುನಾಥ್, ತ್ಯಾಗರಾಜ್ ನಾಯಕ್, ಶ್ರೀನಿವಾಸ್ ಪ್ರಸಾದ್, ರಾಘವೇಂದ್ರ ಶಿವಕುಮಾರ್, ನಿವೃತ್ತ ಯೋಧರಾದ ರವಿ ಉತ್ತಪ್ಪ, ಹಿರಿಯಣ್ಣ, ದೇವರಾಜ್, ಲೋಕೇಶ್ ನಾಯಕ್, ಕಾಂತರಾಜ ಅರಸ್, ಮಹೇಶ್, ಚೇತನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ವಲಯ ಕಚೇರಿ 3ರಲ್ಲಿ ಬುದ್ಧ ಜಯಂತಿ ಆಚರಣೆ



ಮೈಸೂರು, ಮೇ 12– ಭಗವಾನ್ ಬುದ್ಧ ಅವರು ವಿಶ್ವಕ್ಕೆ ಶಾಂತಿ, ಅಹಿಂಸೆಯ ಸಂದೇಶ ನೀಡಿದವರು ಹಾಗೂ ಯುದ್ಧಕ್ಕೆ ಅಂತ್ಯ ಹಾಡಿ ಶಾಂತಿ, ಅಲೌಕಿಕ ಬದುಕಿಗೆ ತಮ್ಮನ್ನು ತಾವು ತೊಡಗಿಸಿಕೊಂಡು ಜಗಕ್ಕೆ ವಿಶೇಷ ಸಂದೇಶ ನೀಡಿದರು ಎಂದು ಮೈಸೂರಿನ ಶಾರದದೇವಿನಗರದಲ್ಲಿರುವ ವಲಯ 3ರ ಕಚೇರಿಯಲ್ಲಿ ವಲಯ ಆಯುಕ್ತ ಟಿ.ಎಸ್.ಸತ್ಯಮೂರ್ತಿ ತಿಳಿಸಿದರು.

ಬುದ್ಧ ಜಯಂತಿ ಅಂಗವಾಗಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬುದ್ಧನ ಸಂದೇಶವನ್ನು ಅನುಸರಿಸುವ ಮೂಲಕ ನಾವು ಸಹ ಸಮಾಜಕ್ಕೆ ಶಾಂತಿ ಸಂದೇಶ ನೀಡಬೇಕಿದೆ. ಇದೇ ವೇಳೆ ಬುದ್ಧನ ಪ್ರತಿಮೆಯನ್ನು ವಲಯ ಕಚೇರಿಯಲ್ಲಿ ಸ್ಥಾಪಿಸಿ ಶಾಶ್ವತವಾಗಿ ಅವರ ಚಿಂತನೆಯನ್ನು ಉಳಿಸುವ ಕೆಲಸ ಮಾಡಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಂದಾಯಾಧಿಕಾರಿ ಎಂ.ಬಸವಣ್ಣ, ಸಹಾಯಕ ಕಂದಾಯ ಅಧಿಕಾರಿ ಜಿ.ಬಿ.ಸಂತೋಷ್, ಕಿರಿಯ ಅಭಿಯಂತರರಾದ ತೇಜಸ್ವಿನಿ, ರಜತ್, ಕಂದಾಯ ನಿರೀಕ್ಷಕರಾದ ಮಲ್ಲಿಕಾರ್ಜುನ, ನವೀನ್, ನಾರಾಯಣಸ್ವಾಮಿ, ಆರೋಗ್ಯ ನಿರೀಕ್ಷಕ ರವಿಶಂಕರ್, ವಿಷಯ ನಿರ್ವಾಹಕರಾದ ರಾಣಿ, ಅರ್ಪಿತ, ಕಾಂಗ್ರೆಸ್ ಮುಖಂಡ ಕೆ.ವಿ. ಮಲ್ಲೇಶ್ ಇನ್ನಿತರರು ಉಪಸ್ಥಿತರಿದ್ದರು.

ಸಕಲ ಜೀವರಾಶಿಗಳ ಉಳಿವು ಬುದ್ಧನ ಪ್ರೀತಿ, ಅಹಿಂಸಾ ಮಾರ್ಗ ಅನುಸರಣೆಯಿಂದ ಮಾತ್ರ ಸಾಧ್ಯ

ಅಂಬೇಡ್ಕರ್ ವಿಚಾರವಾದಿ ಜಿತೇಂದ್ರ ಕೆ.ತಳವಾರ ಅಭಿಮತ



ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿನ ಬುದ್ಧ ವಿಹಾರದಲ್ಲಿ ಸೋಮವಾರ ಭಗವಾನ್ ಬುದ್ಧ ಜಯಂತಿ ನಡೆಯಿತು.

ಮೈಸೂರು, ಮೇ 12(ಎಂಕೆ)– ಪ್ರಸ್ತುತ ದಿನಗಳಲ್ಲಿ ಸಕಲ ಜೀವರಾಶಿಗಳ ಉಳಿವಿಗೆ ಭಗವಾನ್ ಗೌತಮ ಬುದ್ಧರ ಪ್ರೀತಿ ಮತ್ತು ಅಹಿಂಸಾ ಮಾರ್ಗ ಪಾಲನೆ ಅತ್ಯಂತ ಅವಶ್ಯವಾಗಿದ್ದು, ಜಗತ್ತಿಗೆ ಯುದ್ಧ ಬೇಡ–ಬುದ್ಧ ಬೇಕು ಎಂದು ಅಂಬೇಡ್ಕರ್ ವಿಚಾರವಾದಿ ಜಿತೇಂದ್ರ ಕೆ.ತಳವಾರ ಹೇಳಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿನ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ ಆಯೋಜಿಸಿದ್ದ 2569ನೇ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ಶಾಂತಿ, ಸಹನೆ, ತಾಳ್ಮೆ ಹಾಗೂ ಸಹೋದರತ್ವದ ನಾಡಾಗಿದೆ ಎಂದರು.

ವಿಶ್ವದ ಅನೇಕ ರಾಷ್ಟ್ರಗಳು ಭಗವಾನ್ ಬುದ್ಧರ ಶಾಂತಿಯ ಸಂದೇಶವನ್ನು ಅನುಸರಿಸುತ್ತಿರುವುದರಿಂದ ಅಲ್ಲಿನ ಜನರು ನೆಮ್ಮದಿಯಿಂದ ಬದುಕುವಂತಾಗಿದೆ. ಇದು ಎಲ್ಲ ದೇಶಗಳಲ್ಲೂ ಅನುಸರಣೆಯಾದಾಗ ಮಾತ್ರವೇ ಯುದ್ಧವೆಂಬುದು ಕೊನೆಯಾಗಲು ಸಾಧ್ಯ ಎಂದು ಹೇಳಿದರು.

ಬುದ್ಧರ ಶಾಂತಿ ಮಾರ್ಗ ಅನುಸರಿಸಿದ ಡಾ.ಬಿ.ಆರ್.ಅಂಬೇಡ್ಕರ್, ಶಾಂತಿಯುತ ಹೋರಾಟ ಮೂಲಕವೇ ಜನರಿಗೆ ಹಕ್ಕುಗಳನ್ನು ತಂದುಕೊಡಲು ಶ್ರಮಿಸಿದರು. ಚಿಕ್ಕ ವಯಸ್ಸಿನಲ್ಲೇ ತಂದೆ–ತಾಯಿ ಕಳೆದುಕೊಂಡು ವಿದ್ಯಾರ್ಥಿವೇತನದ ಮೂಲಕ ಉನ್ನತ ಶಿಕ್ಷಣ ಪಡೆದ ಅಂಬೇಡ್ಕರ್, ಬಡವರು, ಹಿಂದುಳಿದವರ, ವಿಶೇಷವಾಗಿ ಮಹಿಳೆಯರ ಹಕ್ಕುಗಳಿಗಾಗಿ ಶ್ರಮಿಸಿದರು. ಅವರ ಸಮ–ಸಮಾಜ ನಿರ್ಮಾಣ ಕಲ್ಪನೆ, ನಡೆ ನಮಗೆಲ್ಲಾ ಮಾದರಿ ಎಂದರು.

ಬುದ್ಧನ ಬೆಳಕು ಅತ್ಯಗತ್ಯ: ಕರ್ನಾಟಕ ಬುದ್ಧ ಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಮಾತನಾಡಿ, ಜಗತ್ತಿನಲ್ಲಿ ಯುದ್ಧದ ಆತಂಕ ಸ್ಥಿತಿ ನಿರ್ಮಾಣವಾಗಿದೆ. ಜನರಲ್ಲಿ ನೈತಿಕತೆ ಕಡಿಮೆಯಾಗಿದೆ. ಕೌಟುಂಬಿಕ ವ್ಯವಸ್ಥೆ ಶಿಥಿಲಗೊಂಡು ಮಕ್ಕಳೇ ತಂದೆ–ತಾಯಿಯನ್ನು ಕೊಲೆ ಮಾಡುತ್ತಿರುವ ದುರಂತಗಳು ನಡೆಯುತ್ತಿವೆ. ಅಜ್ಞಾನದಿಂದ ಕೂಡಿರುವ ಕತ್ತಲಿನ ಜಗತ್ತಿಗೆ ಬುದ್ಧನ ಬೆಳಕು ಅತ್ಯಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಮನೋರಕ್ಖಿತಾ ಬಂತೇಜಿ ಅವರ ನೇತೃತ್ವದಲ್ಲಿ ಬುದ್ಧವಂದನೆ ಮತ್ತು ಬುದ್ಧರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಯಿತು. ನಂತರ ಶ್ರೀಲಂಕಾದಿಂದ ತಂದು ಬೆಳೆಸಿರುವ ಬೋಧಿವೃಕ್ಷಕ್ಕೆ ಪೂಜೆ ಸಲ್ಲಿಸಿ, ತ್ರಿಸರಣ ಪಠಣ ಮಾಡಲಾಯಿತು. ಚಂದ್ರಮುನಿ ಬಂತೇಜಿ, ಕರ್ನಾಟಕ ಬುದ್ಧ ಧಮ್ಮ ಸಮಿತಿ ಸಹ ಕಾರ್ಯದರ್ಶಿ ಹೆಚ್.ಶಿವರಾಜು, ಆರ್.ನಟರಾಜು, ವಕೀಲ ರಾಜು ಹಂಪಾಪುರ, ಎಂ.ಸಾವಕಯ್ಯ, ಡಾ.ಕೃಷ್ಣಮೂರ್ತಿ, ಪುಟ್ಟಸ್ವಾಮಿ, ರಾಜಮ್ಮ, ಬಿ.ಎಂ.ಲಿಂಗರಾಜು, ರಾಜಶೇಖರ್, ಅಹಿಂದ ಜವರಪ್ಪ, ರಾಮ ನಗರ ಸಿದ್ದರಾಜು, ನಿಸರ್ಗ ಸಿದ್ದರಾಜು, ಡಾ.ಮಂಜು ಸತ್ತಿಗೆಹುಂಡಿ, ಕಲಾವಿದರಾದ ಆನಂದ್, ಮಹಾಲಿಂಗು, ರೂಪೇಶ್, ವಸಂತಕುಮಾರ್, ವಿಜಯ ಕುಮಾರ್, ಸಚಿನ್ ಮತ್ತಿತರರಿದ್ದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶದಲ್ಲಿ ಏರುಪೇರಾದರೂ ಮೈಸೂರು ವಿದ್ಯಾರ್ಥಿಗಳ ಸಾಧನೆಯೇನು ಕಮ್ಮಿ ಇಲ್ಲ

- ಹಿರಿಯ ಶಾಸಕ ತನ್ವೀರ್ ಸೇಠ್ ಶ್ಲಾಘನೆ
- ರಾಜೇಂದ್ರನಗರದ ಕೆಪಿಎಸ್‌ನಲ್ಲಿ ಐದು ಕೊಠಡಿ ನಿರ್ಮಾಣಕ್ಕೆ ಚಾಲನೆ



ಮೈಸೂರಿನ ರಾಜೇಂದ್ರನಗರದಲ್ಲಿರುವ ಕೆಪಿಎಸ್‌ಗೆ 99.75 ಲಕ್ಷ ರೂ. ವೆಚ್ಚದಲ್ಲಿ 5 ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು,ಮೇ 12(ಎಂಟಿವೈ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಏರುಪೇರಾದರೂ ಜಿಲ್ಲೆಯ ವಿದ್ಯಾರ್ಥಿಗಳ ಸಾಧನೆ ಗಮನಾರ್ಹವಾಗಿದೆ ಎಂದು ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಾಜೇಂದ್ರನಗರದಲ್ಲಿರುವ ಕೆಪಿಎಸ್‌ಗೆ 99.75 ಲಕ್ಷ ರೂ. ವೆಚ್ಚದಲ್ಲಿ 5 ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿಯಲ್ಲಿ ಕಳೆದ ವರ್ಷ 7ನೇ ಸ್ಥಾನದಲ್ಲಿದ್ದ ಮೈಸೂರು ಜಿಲ್ಲೆ ಈ ಬಾರಿ 15ನೇ ಸ್ಥಾನಕ್ಕೆ ಕುಸಿದಿದೆ. ಆದರೆ, ಪಿಯುಸಿಯಲ್ಲಿ 22ನೇ ಸ್ಥಾನದಲ್ಲಿದ್ದ ಮೈಸೂರು ಜಿಲ್ಲೆ ಈ ಬಾರಿ 12ನೇ ಸ್ಥಾನಕ್ಕೆ ಏರಿದೆ. ಈ ಎರಡೂ ಪರೀಕ್ಷೆಯಲ್ಲಿ ಸ್ಥಾನ ಮತ್ತು ಸಂಖ್ಯೆಯಲ್ಲಿ ಏರುಪೇರಾಗಿದ್ದರೂ ನಮ್ಮ ಜಿಲ್ಲೆಯ ಮಕ್ಕಳ ಸಾಧನೆ ಅದ್ಭುತವಾಗಿದೆ. ರಾಜ್ಯದಲ್ಲಿಯೇ ಟಾಪರ್‌ಗಳಾಗಿ ಮೈಸೂರು ವಿದ್ಯಾರ್ಥಿಗಳು ಹೊರಹೊಮ್ಮಿರುವುದು ಶ್ಲಾಘನೀಯ ಎಂದರು.

ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯಲ್ಲಿ 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಗೈರು ಹಾಜರಾಗಿದ್ದಾರೆ. ಇದು ಆಘಾತಕಾರಿ ವಿಷಯವಾಗಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ, ಗೈರು ಹಾಜರಾದ ವಿದ್ಯಾರ್ಥಿ ಹಾಗೂ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಸಪ್ಲಿಮೆಂಟರಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ.


ನಮ್ಮ ಶಿಕ್ಷಣ ತಜ್ಞರ ತಂಡ ಪರೀಕ್ಷೆಯನ್ನೇ ಬರೆಯದ ಮಕ್ಕಳ ಮಾಹಿತಿ ಪಡೆದು ಅವರ ಮನೆ ಮನೆಗೆ ಭೇಟಿ ನೀಡಿ ಅವರು ಸಪ್ಲಿಮೆಂಟರಿ ಪರೀಕ್ಷೆಗೆ ಹಾಜರಾಗುವಂತೆ ಉತ್ತೇಜನ ನೀಡಲು ಮುಂದಾಗಿದೆ. ಫಲಿತಾಂಶದಲ್ಲಿ ನಮಗೆ ಯಾವುದೇ ಸ್ಥಾನ ಪಡೆಯುವುದಕ್ಕಿಂತ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಮುಖ್ಯವಾಗಿತ್ತು. ಹಾಗಾಗಿ ಸ್ಥಾನ ಗಳಿಕೆಯಲ್ಲಿ ಸ್ವಲ್ಪ ಏರುಪೇರಾಗಿದೆ. ಶಿಕ್ಷಣದೊಂದಿಗೆ ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿ, ಮೌಲ್ಯಗಳನ್ನು ಕಲಿಸುವ ನಿಟ್ಟಿನಲ್ಲಿ ನಮ್ಮ ಶಿಕ್ಷಕರು ಕಾರ್ಯೋನ್ಮುಖರಾಗಿದ್ದಾರೆ ಎಂದು ತಿಳಿಸಿದರು.

ಶಾಲೆಗಳಿಗೆ ಮೂಲಭೂತ ಸೌಲಭ್ಯಗಳ ಕೊರತೆ ಇದೆ. ಅದನ್ನು ಒದಗಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದೇವೆ. ಭಾಷಾ ವಿಷಯದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ನಮ್ಮ ಮಕ್ಕಳು ಹೆಚ್ಚು ಅನುತ್ತೀರ್ಣರಾಗಿದ್ದಾರೆ. ಭಾಷೆಯನ್ನು ಪ್ರಾಥಮಿಕ ಹಂತದಲ್ಲಿಯೇ ಕಲಿಸಬೇಕು. ಏಕಾಏಕಿ ಒತ್ತಡ ಹೇರಬಾರದು, ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯಲ್ಲಿ ತ್ರಿಭಾಷಾ ಸೂತ್ರವನ್ನು ಇದೀಗ ಅಳವಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಗ್ರೇಸ್ ಮಾರ್ಕ್ಸ್ ಅಥವಾ ಕಾಪಿಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಇದನ್ನು ಪರೀಕ್ಷೆಗೂ ಮುನ್ನ ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು. 35 ಅಂಕಗಳನ್ನು ಪಡೆಯಲು ಕಷ್ಟವಾಗುವುದಿಲ್ಲ, 70 ಅಂಕ ಪಡೆಯಲು ವಿದ್ಯಾರ್ಥಿಗಳ ಶ್ರಮ ಅಗತ್ಯ. ಅದಕ್ಕಿಂತಲೂ ಹೆಚ್ಚು ಅಂಕ ಪಡೆಯಲು ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳ ಶ್ರಮ ಅಗತ್ಯವಾಗಿದೆ ಎಂದರು.

ಕೆಪಿಎಸ್ ಶಾಲೆಯ ಸಿಡಿಸಿ ಉಪಾಧ್ಯಕ್ಷ ಎಂ.ಎನ್.ಮಹದೇವ, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್, ಉಪಾಧ್ಯಕ್ಷ ಷಹೆನ್‌ಷಾ, ಪ್ರಧಾನ ಕಾರ್ಯದರ್ಶಿ ಅಫ್ರೋಜ್, ಕೆಪಿಸಿಸಿ ಸಂಯೋಜಕ ಶೌಕತ್ ಅಲಿಖಾನ್, ಬೀದಿಬದಿ ವ್ಯಾಪಾರಿಗಳ ವಿಭಾಗದ ಅಧ್ಯಕ್ಷ ಎಂ.ರಸೂಲ್, ಕಾರ್ಮಿಕ ವಿಭಾಗದ ಅಧ್ಯಕ್ಷ ಮೊಹಮ್ಮದ್ ಶಿಫ್ಟನ್, ಅಜೀಜ್ ಸೇಠ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ವಸೀಂ, ಇಲಿಯಾಸ್ ಬಾಬು ಕೆಸರೆ, ನವಾಜ್, ವಿನೋದ್ ಕುಮಾರ್, ದೀಪಕ್ ಶಿವಣ್ಣ, ಪ್ರಾಂಶುಪಾಲರಾದ ಎನ್.ಎಂ. ವಿಜಯೇಂದ್ರ ಕುಮಾರ್, ಶಿಕ್ಷಣ ತಜ್ಞ ನಬೀಜಾನ್ ಮತ್ತಿತರರು ಉಪಸ್ಥಿತರಿದ್ದರು.

ಆಪರೇಷನ್ ಸಿಂಧೂರ ವಿಜಯಕ್ಕೆ ವಿಶೇಷ ಪೂಜೆ



ಮೈಸೂರಿನ ದಿವಾನ್ಸ್ ರಸ್ತೆಯ ಯಾದವ ಸಂಘದ ಆವರಣದಲ್ಲಿರುವ ಶ್ರೀ ಗೋಪಾಲಕೃಷ್ಣ ದೇವಾಲಯದಲ್ಲಿ ಸತ್ಯನಾರಾಯಣ ಪೂಜೆ ಜೊತೆಗೆ ಆಪರೇಷನ್ ಸಿಂಧೂರ ಜಯವಾಗಲಿ ಎಂದು ವಿಶೇಷ ಪೂಜೆ ಸಲ್ಲಿಸಿ ಭಾರತೀಯ ಸೈನಿಕರಿಗೆ ಗೌರವ ಅರ್ಪಿಸಲಾಯಿತು.

ಮೈಸೂರು ಮಿತ್ರ ಮಂಗಳವಾರ 13 ಮೇ 2025

ವಚನಗಳ ಮೂಲಕ ಕ್ರಾಂತಿಜ್ಯೋತಿ ಬೆಳಗಿಸಿದ ಬಸವಣ್ಣ

ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ

ತಿ.ನರಸೀಪುರ, ಮೇ 12– ಸಮಸಮಾಜ ನಿರ್ಮಾಣ ಮಾಡಿದವರಲ್ಲಿ ವಿಶ್ವಗುರು ಬಸವಣ್ಣ ಮೊದಲಿಗರು. ಮೌಢ್ಯತೆ ವಿರುದ್ಧ ಹೋರಾಡಿದ ಬಸವಣ್ಣನವರು ಈ ನಾಡಿಗೆ ಬೆಳಕಾಗಿದ್ದಾರೆ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಧರ್ಮಯ್ಯನಹುಂಡಿಯಲ್ಲಿ ಸೋಮವಾರ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿಯಲ್ಲಿ ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ರಾಜ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರು ಹಲವು ಜನಪರ ಮತ್ತು ಸಮಾಜ ಸುಧಾರಣೆ ಕ್ರಮಗಳನ್ನು ಕೈಗೊಂಡರು. 'ಕಾಯಕವೇ ಕೈಲಾಸ'ವೆಂದು ಸಾರಿ, ಜನರನ್ನು ದುಡಿದು ಬದುಕುವ ಪಥದಲ್ಲಿ ಮುನ್ನೆಡೆಸಿದರು. ಜಾತಿ, ಲಿಂಗ, ವರ್ಣ, ಭಾಷೆ ಭೇದವಿಲ್ಲದೆ ಶರಣ ತತ್ವ, ಸಮಾನತೆ ಮತ್ತು ಕಾಯಕ ನಿಷ್ಠೆಯಲ್ಲಿ ನಂಬಿಕೆಯುಳ್ಳವರನ್ನು, ನಿಜವಾದ "ಶಿವಶರಣರು" ಅಂತಹ ಶರಣರ ಚಿಂತನೆ ನಿರಂತರವಾಗಿ ಸಾಗುತ್ತ, ಬಸವಾದಿ ಶರಣರ ವಿಚಾರಗಳನ್ನು ಮೈಗೂಡಿಸಿಕೊಂಡು ಬದುಕಿದರೆ ಜೀವನ ಪಾವನವಾಗುತ್ತದೆ ಎಂದು ತಿಳಿಸಿದರು.

ಜಗಜ್ಯೋತಿ ಬಸವೇಶ್ವರರು ಮಹಾನ್ ಕ್ರಾಂತಿಕಾರರು. ಬಸವಣ್ಣನವರು ವಚನದ ಮೂಲಕ ಸಮಾಜದಲ್ಲಿ ಕ್ರಾಂತಿಜ್ಯೋತಿ ಬೆಳಗಿಸಿದರು. ಹಿಂದೂ ಸಮಾಜದಲ್ಲಿನ ಭೇದಭಾವ ತೊಲಗಿಸಲು, ಅಸಮಾನತೆ ನಿವಾರಿಸಲು, ಅಂಕುಡೊಂಕನ್ನು ತಿದ್ದಲು ಸಾಕಷ್ಟು ಶ್ರಮಿಸಿದರು ಎಂದರು.



ಬಸವ ಜಯಂತಿಯಲ್ಲಿ ಬಸವೇಶ್ವರರ ಪ್ರತಿಮೆಗೆ ಪೂಜೆ ಸಲ್ಲಿಸಲಾಯಿತು.

ತಾಲೂಕಿನಲ್ಲಿ ವಚನ ಗ್ರಾಮಗಳನ್ನು ಮಾಡುವ ಉದ್ದೇಶ ಹೊಂದಲಾಗಿದ್ದು, ಪ್ರತಿಯೊಂದು ಮನೆಗೂ ಬಸವಣ್ಣನವರ ವಚನವಿರುವ ಪುಸ್ತಕ ನೀಡಲಾಗುತ್ತದೆ. ಮನೆಯ ವಿದ್ಯಾವಂತ ಮಹಿಳೆಯರು ತಮ್ಮ ಮಕ್ಕಳಿಗೆ ಹಾಗೂ ಕುಟುಂಬದವರಿಗೆ ನಿತ್ಯ ಒಂದೊಂದು ಸಾಲುಗಳನ್ನು ಕಲಿಸಿದಾಗ ಮಾತ್ರ ಮುಂದಿನ ಪೀಳಿಗೆಗೆ ವಚನದ ಸಾರಾಂಶ ಅರ್ಥವಾಗುತ್ತದೆ. ಅಷ್ಟಾವರಣದಲ್ಲಿ ಬಸವಣ್ಣನವರು ಲಿಂಗ ಪೂಜೆ ಮಾಡುತ್ತಿದ್ದ ಬಗ್ಗೆ ಉಲ್ಲೇಖವಿದೆ. ಜೊತೆಗೆ ಅವರು ತೀರ್ಥ ಪ್ರಸಾದ ಸಹ ತೆಗೆದುಕೊಳ್ಳುತ್ತಿದ್ದರು ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್ ಮಾತನಾಡಿ, ಪ್ರತಿಯೊಂದು ಗ್ರಾಮದಲ್ಲಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಪ್ರತಿ ವರ್ಷ ಇದೇ ಸಂಪ್ರದಾಯ ಮುಂದುವರೆಸಲು ಗ್ರಾಮದ ಯುವಕರು ಪಣ ತೊಡಬೇಕಿದೆ. ಜೊತೆಗೆ ಬಸವ ಜಯಂತಿ ಮಾಡುವುದು ಇಲ್ಲಿ ಮುಖ್ಯವಾಗುವುದಿಲ್ಲ. ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ನಾವು ಆಚರಣೆಗೆ ತರಲು ಮುಂದಾಗಬೇಕು ಎಂದರು.

ಈ ವೇಳೆ ಹೊಸೂರುಹುಂಡಿ ಗುರುಮಲ್ಲೇಶ್ವರ ದಾಸೋಹ ಮಠದ ರಾಜಶೇಖರಸ್ವಾಮೀಜಿ, ಸಾಂಸ್ಕೃತಿಕ ನಾಯಕ ಶ್ರೀಬಸವೇಶ್ವರ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಎಸ್.ಬಿ.ಸುಗಂಧರಾಜು, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ಚೌಹಳ್ಳಿ ನಿಂಗರಾಜಪ್ಪ, ಹಿರಿಯೂರು ಪ್ರಕಾಶ್, ತೊಂಟೇಶ್, ಗ್ರಾಪಂ ಸದಸ್ಯ ಗೌಡ್ರಪ್ರಭು, ನಂಜುಂಡಸ್ವಾಮಿ, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ತಾಪಂ ಮಾಜಿ ಅಧ್ಯಕ್ಷ ಉಮೇಶ್, ಕರೋಹಟ್ಟಿ ಬಸವರಾಜು, ದೊರೆಸ್ವಾಮಿ, ಯರಗನಹಳ್ಳಿ ಗುರುಮಲ್ಲ, ಶ್ರೀಕಂಠ, ಶಿವಮಲ್ಲಪ್ಪ, ತಾ.ಮಲ್ಲಪ್ಪ, ನಾಗರಾಜು, ಮಾದೇಶ್, ರೇವಣ್ಣ, ಬಿ.ಎಂ.ಸ್ವಾಮಿ, ಮಹದೇವಸ್ವಾಮಿ, ಪ್ರಭುಸ್ವಾಮಿ, ಡಿ.ಎಸ್.ಕುಮಾರ, ರಮೇಶ್, ಜಗದೀಶ್, ಪುಟ್ಟಣ್ಣ ಸೇರಿದಂತೆ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣ



ಬಸವಣ್ಣನವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಲಾಯಿತು.

ಮಲ್ಕುಂಡಿ, ಮೇ 12– ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ ತಿಳಿಸಿದರು.

ಇಲ್ಲಿಗೆ ಸಮೀಪದ ತರಗನಹಳ್ಳಿಯಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಬಸವಣ್ಣನವರ ವಚನಗಳನ್ನು ಅಳವಡಿಸಿಕೊಂಡು ಪಾಲಿಸಿದರೆ ಯಾವುದೇ ಸಮಸ್ಯೆ ಉದ್ಭವವಾಗುವುದಿಲ್ಲ. ಬಸವಣ್ಣನವರು 12ನೇ ಶತಮಾನದಲ್ಲಿ ಸಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಿದರು. ಸಮಾಜದಲ್ಲಿದ್ದ ಅಸಮಾನತೆ ಹೋಗಲಾಡಿಸಿ, ಜಾತಿ ಪದ್ಧತಿ ತೊಡೆದು ಹಾಕುವ ನಿಟ್ಟಿನಲ್ಲಿ ಎಲ್ಲಾ ಸಮುದಾಯವನ್ನು ಸಮಾನವಾಗಿ ಕಾಣುವ ಮೂಲಕ ಬಸವಣ್ಣನವರು ಮಾನವ ಕುಲಕ್ಕೆ ಸಮಾನತೆಯ ಸಂದೇಶ ಸಾರಿದ್ದಾರೆ. ಬಸವಣ್ಣನವರ ಜಯಂತಿ ಆಚರಣೆ ಮಾಡುವುದಕ್ಕೆ ಸೀಮಿತವಾಗದೆ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ಕಂತೆ ಮಹದೇಶ್ವರ ಬೆಟ್ಟದ ಶಿಲಾಮಠದ ಅಧ್ಯಕ್ಷ ಮಹಾಂತ ದೇಶಿಕೇಂದ್ರ ಸ್ವಾಮೀಜಿ, ಟಿ.ಎಂ.ಬಸವರಾಜಪ್ಪ, ಬಸವರಾಜ್, ನಟರಾಜ್, ಅಭಿ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಯುವ ಘಟಕದ ಅಧ್ಯಕ್ಷ ಮಲ್ಕುಂಡಿ ಮಹದೇವಸ್ವಾಮಿ, ಮಂಜುನಾಥ, ಶಿವಕುಮಾರ್ ಸೇರಿದಂತೆ ಬಸವ ಬಳಗದ ಯುವಕರು ಹಾಜರಿದ್ದರು. ಬಸವಣ್ಣನವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು.

ವಿಜೃಂಭಣೆಯ ಮಂಟೇಸ್ವಾಮಿ ಕಂಡಾಯ ಮೆರವಣಿಗೆ

ತಿ.ನರಸೀಪುರ, ಮೇ 12– ಪಟ್ಟಣದ ಪುರಸಭೆ ವ್ಯಾಪ್ತಿಯ ಹಳೆ ತಿರುಮಕೂಡಲಿನಲ್ಲಿ ಸೋಮವಾರ ಸಂಜೆ ಶ್ರೀಮಂಟೇಸ್ವಾಮಿಯವರ ಕಂಡಾಯಕ್ಕೆ ಶ್ರದ್ಧಾಭಕ್ತಿಯೊಂದಿಗೆ ಪೂಜೆ ಸಲ್ಲಿಸಿ, ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

ಕುಂಭಮೇಳ ಖ್ಯಾತಿಯ ತ್ರಿವೇಣಿ ಸಂಗಮದ ತಟದಲ್ಲಿ ಶ್ರೀಮಂಟೇಸ್ವಾಮಿ ಕಂಡಾಯದ ಜೊತೆಗೆ ಶ್ರೀರಾಚಪ್ಪಾಜಿ, ಸಿದ್ದಪ್ಪಾಜಿ ಕಂಡಾಯಕ್ಕೆ ಶ್ರದ್ಧಾಪೂರ್ವಕ ಭಕ್ತಿಯೊಂದಿಗೆ ಪೂಜೆ ಸಲ್ಲಿಸಲಾಯಿತು.

ವಿವಿಧ ಹೂಗಳಿಂದ ಅಲಂಕೃತವಾಗಿದ್ದ 3 ದೇವರ ಕಂಡಾಯಕ್ಕೆ ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ಯಜಮಾನರು ಮೊದಲಿಗೆ ಪೂಜೆ ಸಲ್ಲಿಸಿ ನಂತರ ಮೆರವಣಿಗೆಗೆ ಚಾಲನೆ ನೀಡಿದರು.

ಕೊರಳಿಗೆ ಕೆಂಪು ಬಣ್ಣದ ಶಾಲು ಹಾಕಿಕೊಂಡಿದ್ದ ಹಳೇ ತಿರುಮಕೂಡಲು ಗ್ರಾಮದ ಭಕ್ತರು ಹಣೆಗೆ ವಿಭೂತಿ ಹಾಗೂ ಕಪ್ಪು ಹಚ್ಚಿಕೊಂಡು ಭಕ್ತಿ ಭಾವ ಮೆರೆದರು. ನಂತರ ಮಂಟೇಸ್ವಾಮಿ ಕಂಡಾಯದ ಮೆರವಣಿಗೆ ಗ್ರಾಮದ ರಾಜ ಬೀದಿಯಲ್ಲಿ ಸಂಚರಿಸಿತು. ಕಂಡಾಯ ಮೆರವಣಿಗೆ ಹಿನ್ನೆಲೆಯಲ್ಲಿ ಗ್ರಾಮದ ಮಹಿಳೆಯರು ಮನೆ ಮುಂದೆ ಬಣ್ಣ ಬಣ್ಣದ ರಂಗೋಲಿ ಹಾಕಿ ಕಂಡಾಯವನ್ನು ಬರ ಮಾಡಿಕೊಂಡು ಪೂಜೆ ಸಲ್ಲಿಸಿದರು.



ಶ್ರೀಮಂಟೇಸ್ವಾಮಿಯವರ ಕಂಡಾಯ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು.

ಪ್ರತಿ 3 ವರ್ಷಕ್ಕೊಮ್ಮೆ ಕಂಡಾಯ ನಡೆಸಿಕೊಂಡು ಬರಲಾಗುತ್ತಿದ್ದು, ಗ್ರಾಮಕ್ಕೆ ಯಾವುದೇ ರೋಗ ರುಜಿನಗಳು ಬಾರದಿರಲೆಂದು ಪ್ರಾರ್ಥಿಸಿ ಗ್ರಾಮಸ್ಥರೆಲ್ಲರೂ ಸೇರಿ ಕಂಡಾಯ ಪೂಜೆ ಮಾಡುತ್ತಿದ್ದೇವೆ. ರಾತ್ರಿ ಗ್ರಾಮಸ್ಥರಿಗೆ ಕಜ್ಜಾಯ, ತುಪ್ಪದ ಊಟ ವ್ಯವಸ್ಥೆ ಮಾಡಲಾಗಿದ್ದು, ಮಂಗಳವಾರ ಮಂಟೇಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯ, ಮಹಾ ಮಂಗಳಾರತಿ ನಂತರ ಮಧ್ಯಾಹ್ನ ಒಂದು ಸಾವಿರ ಮಂದಿ ಭಕ್ತರಿಗೆ ಹಳೇ ತಿರುಮಕೂಡಲಿನಲ್ಲಿ ಊಟದ ವ್ಯವಸ್ಥೆ ಮಾಡಲಾಗುತ್ತದೆ ಎಂದು ಪಿಎಸಿಸಿಎಸ್ ಉಪಾಧ್ಯಕ್ಷ ಟಿ.ಸಿ.ಫಣೀಶ್ ಕುಮಾರ್ ತಿಳಿಸಿದರು.

ಕಂಡಾಯ ಮೆರವಣಿಗೆಯಲ್ಲಿ ಯಜಮಾನರಾದ ಟಿ.ಪಿ.ಸೋಮಶೇಖರ್, ರಜನೀಶ್‌ಗೌಡ, ಪುರಸಭಾ ನಾಮ ನಿರ್ದೇಶನ ಸದಸ್ಯ ಆರ್.ಚೇತನ್, ಪಿಎಸಿಎಸ್ ಉಪಾಧ್ಯಕ್ಷ ಟಿ.ಸಿ.ಫಣೀಶ್ ಕುಮಾರ್, ಟಿ.ಬಿ.ಸುರೇಶ್, ಪಿ.ವಿ.ಶ್ರೀನಿವಾಸ್, ಟಿ.ಎಂ.ಸೋಮಣ್ಣ, ಕೆ.ಪಿ.ನಾಗರಾಜು, ಮಹದೇವ ಸಿದ್ದೇಗೌಡ, ಟಿ.ಎಂ.ಶ್ರೀನಾಥ್, ಹೋಟೆಲ್ ಕರಿಯಪ್ಪ ಎಂ. ರವಿಕುಮಾರ್, ಉಮೇಶ್, ಕಬಾಬ್ ವೇಣು, ಹೋಟೆಲ್ ಶ್ರೀನಿವಾಸ್, ಪಿ.ಉಮೇಶ್, ಪ್ರಕಾಶ್, ಪ್ರತಾಪ್, ಸುಂದರಣ್ಣ, ಅಂಚೆ ನಿಂಗಣ್ಣ, ಟಿ.ಬಿ. ಗುಂಡಪ್ಪ, ಪ್ರಕಾಶ್ ರತ್ನಮ್ಮ, ಹಿಟ್ಟುವಳ್ಳಿ ಮಂಜು, ಜಯರಾಮ್, ರಾಜು, ಮಣಿಕಂಠ, ನವೀನ, ಸುಮಿತ್, ಅಚ್ಚು ದಿನೇಶ್, ಎಂ.ಚಂದನ್, ಆರ್.ಮಹೇಶ್ ಮೂರ್ತಿ, ಟಿ.ಎನ್.ಭಾಸ್ಕರ್, ಬಿಜಿಎಸ್ ಸೋಮಣ್ಣ, ಅಶೋಕ, ಕುಮಾರ, ರಮೇಶ, ನಟೇಶ್, ಚಿಕ್ಕ ಮೋಹನ್, ಎನ್.ಶ್ಯಾಮ್, ಯಜಮಾನರು ಹಾಗೂ ಹಳೇ ತಿರುಮಕೂಡಲು ಗ್ರಾಮಸ್ಥರು ಉಪಸ್ಥಿತರಿದ್ದರು.

ಶ್ರೀದೇಶೇಶ್ವರಸ್ವಾಮಿ, ಶ್ರೀಪಾರ್ವತಿ ಅಮ್ಮನವರ ಪಲ್ಲಕ್ಕಿ ಉತ್ಸವ

ಮೂಗೂರು, ಮೇ 12– ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಭಾನುವಾರ ಸಂಜೆ ಹೂವಿನ ಪಲ್ಲಕ್ಕಿ ಉತ್ಸವ ಗ್ರಾಮದಲ್ಲಿ ವಿಜೃಂಭಣೆಯಿಂದ ನೆರವೇರಿತು.

ದೇವಾಲಯದಲ್ಲಿ ಬೆಳಗ್ಗೆ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರಿಗೆ ಮಹಾ ರುದ್ರಾಭಿಷೇಕ, ವಿಶೇಷ ಪೂಜೆಯೊಂದಿಗೆ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಸಂಜೆ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಉತ್ಸವ ಮೂರ್ತಿಯನ್ನು ಹೂವಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ ಬಳಿಕ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಿದ ನಂತರ ಹೂವಿನ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀಪಾರ್ವತಿ ಅಮ್ಮನವರನ್ನು ಆಭರಣಗಳಿಂದ ಸಿಂಗರಿಸಿ, ವಿವಿಧ ಬಗೆಯ ಹೂವಿನಿಂದ ಅಲಂಕರಿಸಲಾಗಿತ್ತು.



ಮೂಗೂರಿನಲ್ಲಿ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ ನಡೆಯಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವ ಸಾಗುತ್ತಿದ್ದಂತೆ ನೆರದಿದ್ದ ಭಕ್ತರು ದಾರಿಯುದ್ದಕ್ಕೂ ಶ್ರೀದೇಶೇಶ್ವರಸ್ವಾಮಿ ಹಾಗೂ ದೇವಿಗೆ ಪೂಜೆ ಸಲ್ಲಿಸಿ ನಮಿಸಿದರು. ಪಲ್ಲಕ್ಕಿ ಉತ್ಸವ ಬಳಿಕ ದೇಗುಲದಲ್ಲಿ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರಿಗೆ ಮಹಾಮಂಗಳಾರತಿ ನೆರವೇರಿಸುವ ಮೂಲಕ ಗಿರಿಜಾ ಕಲ್ಯಾಣ ಮಹೋತ್ಸವ ಧಾರ್ಮಿಕ ಆಚರಣೆಗೆ ತೆರೆ ಬಿದ್ದಿತು. ಈ ಸಂದರ್ಭ ಅರ್ಚಕರಾದ ಸುಬ್ರಹ್ಮಣ್ಯ ಶಾಸ್ತ್ರಿ, ಅಜಯ್ ಶಾಸ್ತ್ರಿ, ಪ್ರಭಾಕರ್ ಶಾಸ್ತ್ರಿ, ಗ್ರಾಮದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಚಿರತೆ ದಾಳಿ: ಜಾನುವಾರುಗಳಿಗೆ ಗಾಯ

ನಂಜನಗೂಡು, ಮೇ 12– ಚಿರತೆ ದಾಳಿಗೆ ನಾಲ್ಕು ಹಸುಗಳು ಗಾಯಗೊಂಡಿರುವ ಘಟನೆ ತಾಲೂಕಿನ ದಾಸನೂರು ಗ್ರಾಮದಲ್ಲಿ ಜರುಗಿದೆ. ಗ್ರಾಮದ ರೈತ ಮಾದಪ್ಪ ಎಂಬುವರು ಸೋಮವಾರ ಬೆಳಗ್ಗೆ ತಮ್ಮ ಜಮೀನಿನಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ವೇಳೆ ಏಕಾಏಕಿ ಹಸುಗಳ ಮೇಲೆರೆಗಿದ ಚಿರತೆ 4 ಹಸುಗಳ ಮೇಲೆ ದಾಳಿ ನಡೆಸಿದೆ. ಪರಿಣಾಮ 2 ಹಸುಗಳು ಗಂಭೀರವಾಗಿ ಗಾಯಗೊಂಡು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿವೆ. 2 ಹಸುಗಳು ಪಶು ವೈದ್ಯಾಧಿಕಾರಿಗಳ ಚಿಕಿತ್ಸೆಯಿಂದಾಗಿ ಪ್ರಾಣಪಾಯದಿಂದ ಪಾರಾಗಿವೆ.

ರೈತ ಮಾದಪ್ಪ ಮಾತನಾಡಿ, ಸೂಕ್ತ ಪರಿಹಾರ ಕೊಡಿಸುವಂತೆ ಮನವಿ ಮಾಡಿದರು. ಸ್ಥಳಕ್ಕೆ ಚಾಮರಾಜನಗರ ವಿಭಾಗದ ಅರಣ್ಯ ಅಧಿಕಾರಿಗಳು ಭೇಟಿ ನೀಡಿ ರೈತರಿಗೆ ಪರಿಹಾರ ದೊರಕಿಸಿಕೊಡುವ ಭರವಸೆ ನೀಡಿದರು.



ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸುತ್ತಿರುವುದು

ಹನಗೋಡು ಗ್ರಾಪಂಗೆ ಸಂಗೀತ ಅಧ್ಯಕ್ಷೆ

ಹನಗೋಡು, ಮೇ 12– ಇಲ್ಲಿನ ಗ್ರಾಪಂ ಅಧ್ಯಕ್ಷೆಯಾಗಿ ಸಂಗೀತ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅವಿಶ್ವಾಸ ನಿರ್ಣಯದ ಮೂಲಕ ಹಿಂದಿನ ಅಧ್ಯಕ್ಷ ಚನ್ನಯ್ಯ ಅವರನ್ನು ಪದಚ್ಯುತಗೊಳಿಸಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಂಗೀತ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್ ಘೋಷಿಸಿದರು. ಪಿಡಿಓ ಡಾ.ಅನಿತಾ ಇದ್ದರು.

ಗ್ರಾಪಂನ 13 ಸದಸ್ಯರ ಪೈಕಿ ಮಾಜಿ ಅಧ್ಯಕ್ಷ ಚನ್ನಯ್ಯ ಗೈರಾಗಿದ್ದರು. ಉಳಿದ 12 ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರ ಆಯ್ಕೆ ಪ್ರಕಟವಾಗುತ್ತಿದ್ದಂತೆ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು. ಈ ವೇಳೆ ಉಪಾಧ್ಯಕ್ಷೆ ಜಯಲಕ್ಷ್ಮಿ, ಸದಸ್ಯರು, ಉದ್ಯಮಿ ಕಾರ್ತಿಕ್, ಮುಖಂಡರಾದ ಹರೀಶ್, ಸಂಜೀವ, ಹೊಂಬೇಗೌಡ, ರಾಜಪ್ಪ, ನಜೀರ್, ಮಂಜು, ರೇವಣ್ಣ, ನೇತ್ರ ಸೇರಿದಂತೆ ಅನೇಕರಿದ್ದರು.



ಗ್ರಾಪಂ ಅಧ್ಯಕ್ಷೆ ಸಂಗೀತ ಅವರನ್ನು ಸದಸ್ಯರು ಹಾಗೂ ಮುಖಂಡರು ಅಭಿನಂದಿಸಿದರು.

15 ದಿನಗಳೊಳಗೆ ಸ್ಮಶಾನದ ಸಂಪರ್ಕ ರಸ್ತೆ ಕಾಮಗಾರಿ ಪ್ರಾರಂಭಿಸದಿದ್ದರೆ

ಬನ್ನೂರಲ್ಲಿ ಮಾದಿಗ ಸಮಾಜದಿಂದ ಉಗ್ರ ಪ್ರತಿಭಟನೆ

ಪುರಸಭೆ ಸದಸ್ಯ ಶಿವಣ್ಣ ಎಚ್ಚರಿಕೆ

ತಿ.ನರಸೀಪುರ, ಮೇ 12– ಬನ್ನೂರು ಸುಭಾಷ್ ನಗರದ ಮಾದಿಗ ಜನಾಂಗದವರಿಗೆ ಕಾವೇರಿ ನದಿ ತೀರದಲ್ಲಿ ಮೀಸಲಿಡಲಾದ ಸ್ಮಶಾನಕ್ಕೆ ಸಂಪರ್ಕ ರಸ್ತೆ ಕಲ್ಪಿಸಲು ಆಶ್ವಾಸನೆ ನೀಡಿದ್ದ ಉಪ ವಿಭಾಗಾಧಿಕಾರಿಗಳು ಮತ್ತು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಕೊಟ್ಟ ಮಾತಿಗೆ ತಪ್ಪಿದ್ದು, ಮುಂದಿನ 15 ದಿನಗಳೊಳಗೆ ಸಂಪರ್ಕ ರಸ್ತೆ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಉಗ್ರ ಪ್ರತಿಭಟನೆ ನಡೆಲಾಗುತ್ತದೆ ಎಂದು ಬನ್ನೂರು ಪುರಸಭೆ ಸದಸ್ಯ ಶಿವಣ್ಣ ಎಚ್ಚರಿಕೆ ನೀಡಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿಗೃಹದಲ್ಲಿ ನಡೆದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಬನ್ನೂರಿನ ಸುಭಾಷ್ ನಗರಕ್ಕೆ ಮೀಸಲಿಟ್ಟ ಸ್ಮಶಾನಕ್ಕೆ ಸಂಪರ್ಕ ರಸ್ತೆ ಕಲ್ಪಿಸಿಕೊಡುವಂತೆ ಕಳೆದ 30 ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಿದ್ದೇವೆ. ಇತ್ತೀಚೆಗೆ ತಾಲೂಕು ಕಚೇರಿ, ಬನ್ನೂರು ಪುರಸಭೆ ಸೇರಿದಂತೆ ಹಲವು ಕಡೆ ಧರಣಿ, ಮೌನ ಪ್ರತಿಭಟನೆ ನಡೆಸಿದ್ದರೂ ಇದುವರೆಗೂ ಮೀಸಲಿಟ್ಟ ಸ್ಮಶಾನಕ್ಕೆ ಸಂಪರ್ಕ ರಸ್ತೆ ಕಲ್ಪಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ವಿಳಂಬ ನೀತಿ ಅನುಸರಿಸುತ್ತಿದ್ದಾರೆ. ಇನ್ನೆರಡು ವಾರದಲ್ಲಿ ನಮ್ಮ ಬೇಡಿಕೆ ಈಡೇರದಿದ್ದಲ್ಲಿ ಬನ್ನೂರಿನ ಕಾವೇರಿ ಸರ್ಕಲ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲು ಮಾದಿಗ ಸಮಾಜದ ಮುಖಂಡರ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.



ಸಭೆಯಲ್ಲಿ ಬನ್ನೂರು ಪುರಸಭೆ ಸದಸ್ಯ ಶಿವಣ್ಣ ಮಾತನಾಡಿದರು.

ಕಳೆದ 4 ತಿಂಗಳ ಹಿಂದೆ ಸ್ಮಶಾನಕ್ಕೆ ರಸ್ತೆ ಕಲ್ಪಿಸಿ ಕೊಡುವಂತೆ ಬನ್ನೂರಿನ ಕಾವೇರಿ ಸರ್ಕಲ್‌ನಲ್ಲಿ ಶವವಿಟ್ಟು ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದ ವೇಳೆ ಸ್ಥಳಕ್ಕೆ ಆಗಮಿಸಿದ್ದ ಉಪ ವಿಭಾಗಾಧಿಕಾರಿ ರಕ್ಷಿತ್ ಮತ್ತು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಫೆಬ್ರವರಿ ತಿಂಗಳೊಳಗೆ ಭೂಸ್ವಾಧೀನ ಪ್ರಕ್ರಿಯೆ ಮುಗಿಸಿ, ಕಾಮಗಾರಿ ಆರಂಭಿಸುವ ಆಶ್ವಾಸನೆ ನೀಡಿದ್ದರು. ನಮ್ಮ ಹೋರಾಟ ಹಾಗೂ ಮಾದಿಗ ಸಮಾಜದ ಸಮಸ್ಯೆ ಅರಿತ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪರವರು ಸ್ಮಶಾನಕ್ಕೆ ಸೌಲಭ್ಯ ಕಲ್ಪಿಸಲು 60 ಲಕ್ಷ ರೂ. ಮಂಜೂರು ಮಾಡಿಕೊಟ್ಟಿದ್ದರು. ಹಾಗಾಗಿ ನಾವು ಪ್ರತಿಭಟನೆ ಹಿಂಪಡೆದಿದ್ದವು. ಆದರೆ ಇಲ್ಲಿವರೆಗೆ ಕಾಮಗಾರಿ ಆರಂಭಿಸಿಲ್ಲ. ಭೂ ಸ್ವಾಧೀನ ಪ್ರಕ್ರಿಯೆ ನಡೆಸದೇ ಉಪವಿಭಾಗಾಧಿಕಾರಿಗಳು ತೀವ್ರ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಪ್ರತಿಭಟನೆ ರಸ್ತೆ ತಡೆ ನಡೆಸುವ ವೇಳೆ ಬರುವ ಅಧಿಕಾರಿಗಳು ಸುಳ್ಳಿನ ಭರವಸೆ ನೀಡಿ ಹೋಗುತ್ತಿದ್ದರೆಯೇ ಹೊರತು ಸಮಸ್ಯೆ ಬಗೆಹರಿಸಲು ಮುಂದಾಗುತ್ತಿಲ್ಲ. ಹಾಗಾಗಿ ಸ್ಮಶಾನಕ್ಕೆ ಸಂಪರ್ಕ ರಸ್ತೆ ನಿರ್ಮಾಣ ಮಾಡದಿದ್ದಲ್ಲಿ ಸುಭಾಷ್ ನಗರದ ನಿವಾಸಿಗಳ ಜೊತೆಗೂಡಿ ಗ್ರಾಮದ ಪ್ರಗತಿಪರ ಒಕ್ಕೂಟದ ಸಹಕಾರದಿಂದ ಬೇಡಿಕೆ ಈಡೇರುವ ತನಕ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದರು.

ಬಾಬು ಜಗಜೀವನ್ ರಾಂ ಜನ ಕಲ್ಯಾಣ ಸಂಘದ ಉಪಾಧ್ಯಕ್ಷ ಸಿದ್ದನಹುಂಡಿ ಗೋವಿಂದರಾಜು, ಮಹದೇವಣ್ಣ,

> 2025ರ ಫೆ.21ರಂದು ಸುಭಾಷ್ ನಗರದ ನಿವಾಸಿಗಳಿಗೆ ಮೀಸಲಿಟ್ಟ ಸ್ಮಶಾನಕ್ಕೆ ರಸ್ತೆ ಸಂಪರ್ಕ ಕಲ್ಪಿಸುವಂತೆ ಬನ್ನೂರು ಕಾವೇರಿ ಸರ್ಕಲ್ ಸರ್ಕಲ್ ಪ್ರತಿಭಟನೆ ನಡೆಸಿದ್ದೆವು. ಈ ವೇಳೆ ತಿಂಗಳೊಳಗೆ ಕಾಮಗಾರಿ ಆರಂಭಿಸುವ ಆಶ್ವಾಸನೆ ನೀಡಿದ್ದ ಉಪ ವಿಭಾಗಾಧಿಕಾರಿಗಳು ಕಾಮಗಾರಿ ಪ್ರಾರಂಭಕ್ಕೆ ವಿಳಂಬ ಮಾಡುತ್ತಿರುವುದರಿಂದ ಮೇ ತಿಂಗಳ ಅಂತ್ಯದವರೆಗೆ ಕಾಮಗಾರಿ ಆರಂಭಕ್ಕೆ ಕಾಲಾವಕಾಶ ನೀಡಿದ್ದು, ಶೀಘ್ರ ಕಾಮಗಾರಿ ಪ್ರಾರಂಭ ಮಾಡದಿದ್ದಲ್ಲಿ ಜೂ.1 ರಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು. ರಸ್ತೆ ಪಡೆಯಲು ನಾವು ಜೈಲಿಗೆ ಹೋಗಲು ಸಿದ್ಧರಿದ್ದೇವೆ.
>
> – **ಮಲಿಯೂರು ಶಂಕರ್,** ಬಾಬು ಜಗಜೀವನ್ ರಾಂ ಜನಕಲ್ಯಾಣ ಸಂಘದ ಅಧ್ಯಕ್ಷ.

ಪ್ರಧಾನ ಕಾರ್ಯದರ್ಶಿ ಮಾದೇಶ್, ಸದಸ್ಯರಾದ ಕಳ್ಳಿಪುರ ಶಿವಪ್ರಸಾದ್, ಕೇತಹಳ್ಳಿ ಸಿದ್ದರಾಜು, ಬನ್ನೂರು ಸ್ವಾಮಿ, ಭೈರಾಪುರ ರಜಿನಿರಾಜ್, ಗೋಪಾಲಪುರ ರಾಜಪ್ಪ, ಸಿದ್ದನಹುಂಡಿ ಶಿವಣ್ಣ, ವಿಜಯಪುರ ಲಿಂಗರಾಜು, ಶ್ರೀಕಾಂತ್, ಮಲ್ಲೇಶ್, ಮೂಗೂರು ಆರ್.ಶಂಕರ್, ಹೊಸ ನರೀಪುರ ರಾಜಪ್ಪ, ಬನ್ನೂರು ಮಹದೇವು ಇತರರಿದ್ದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗಾಗಿ ಎಜುಕೇಷನ್ ಎಕ್ಸ್ ಪೋ

ಮುಂಬರುವ ಜಿಪಂ, ತಾಪಂ ಚುನಾವಣೆಗೆ ಪಕ್ಷ ಬಲವರ್ಧನೆಗೊಳಿಸಿ: ಶಾಸಕ ದರ್ಶನ್

ನಂಜನಗೂಡು, ಮೇ 12– ಆರ್.ಧ್ರುವನಾರಾಯಣ ಎಜುಕೇಶನ್ ಟ್ರಸ್ಟ್ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ನಂತರ ವಿದ್ಯಾರ್ಥಿಗಳ ಮುಂದಿನ ಉನ್ನತ ಶಿಕ್ಷಣದ ಬಗ್ಗೆ ಮಾರ್ಗದರ್ಶನ ನೀಡಲು ಎಜುಕೇಷನ್ ಎಕ್ಸ್ ಪೋ ಕಾರ್ಯಕ್ರಮ ಆಯೋಜಿಸಲಾಗಿದೆ. ಯುವಕರು ಕಾರ್ಯಕ್ರಮದ ಪ್ರಯೋಜನ ಪಡೆಯಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ನಂದಿ ಕನ್ವೆಷನ್ ಹಾಲ್‌ನಲ್ಲಿ ಸೋಮವಾರ ನಡೆದ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಹಾಗೂ ಎಜುಕೇಶನ್ ಎಕ್ಸ್ ಪೊ. ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಅತಿ ಹೆಚ್ಚಿನ ಒತ್ತು ನೀಡಲಾಗಿದೆ. ಆರ್.ಧ್ರುವನಾರಾಯಣ್ ಎಜುಕೇಶನ್ ಟ್ರಸ್ಟ್ ವತಿಯಿಂದ ಪಿಯುಸಿ ವಿದ್ಯಾರ್ಥಿಗಳಿಗೆ ಸಿಇಟಿ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡಲಾಗುತ್ತಿದೆ. ಅಲ್ಲದೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ನಂತರ ಉನ್ನತ ವ್ಯಾಸಂಗ ಕೈಗೊಳ್ಳಲು ತಾಲೂಕಿನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಪ್ರತಿ ವರ್ಷ ಧ್ರುವನಾರಾಯಣ ಎಜುಕೇಷನ್ ಟ್ರಸ್ಟ್ ವತಿಯಿಂದ ಎಜುಕೇಷನ್ ಎಕ್ಸ್‌ಪೋ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಪಕ್ಷ ತಾಯಿ ಸಮಾನ. ಜೊತೆಗೆ ಕಾಂಗ್ರೆಸ್ ಪಕ್ಷ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಇತಿಹಾಸವುಳ್ಳ ಪಕ್ಷವಾಗಿದೆ. ಯುವ ಕಾಂಗ್ರೆಸ್ ಪದಾಧಿಕಾರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ ಪದಾಧಿಕಾರಿಗಳ ಮೇಲೆ ಪಕ್ಷ ಸಂಘಟನೆಯ ಪ್ರಮುಖ ಜವಾಬ್ದಾರಿ ಇದೆ. ನಿಮ್ಮಗಳ ಮಧ್ಯೆ ಇರುವ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಂಘಟನೆಯಲ್ಲಿ ತೊಡಗಬೇಕು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಆರ್.ಧ್ರುವನಾರಾಯಣ್‌ರಂತಹ ನಾಯಕರು ಯುವ ಕಾಂಗ್ರೆಸ್‌ನಿಂದ ಬಂದವರು. ಯುವಕರು ಈ ದೇಶದ ಶಕ್ತಿ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕಾಂಗ್ರೆಸ್ ಪಕ್ಷವನ್ನು ಶಿಸ್ತಿನಿಂದ ಮುನ್ನಡೆಸುವ ಜವಾಬ್ದಾರಿ ನಿಮ್ಮ ಮೇಲಿದೆ. ಎಲ್ಲರೂ ಭಿನ್ನಾಭಿಪ್ರಾಯವನ್ನು ಬದಿಗೊತ್ತಿ ತಳಮಟ್ಟದಲ್ಲಿ ಪಕ್ಷ ಸಂಘಟನೆಗೊಳಿಸುವ ಮೂಲಕ ಮುಂಬರುವ ತಾಪಂ ಮತ್ತು ಜಿಪಂ ಚುನಾವಣೆಗಳಿಗೆ ಪಕ್ಷ ಬಲವರ್ಧನೆಗೊಳಿಸಬೇಕು ಎಂದರು.



ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಮಾತನಾಡಿ, 1971ರಲ್ಲಿ ಪಾಕಿಸ್ತಾನದೊಂದಿಗೆ ನಡೆದ ಯುದ್ಧದಲ್ಲಿ ನಮ್ಮ ನಾಯಕಿ ಇಂದಿರಾ ಗಾಂಧಿ ನೇತೃತ್ವದಲ್ಲಿ ದೇಶ ಬಲಿಷ್ಠ ಸೈನಿಕ ಶಕ್ತಿಯಾಗಿ ಹೊರಹೊಮ್ಮಿತ್ತು. ಪಾಕಿಸ್ತಾನವನ್ನು ಯುದ್ಧದಲ್ಲಿ ಸೋಲಿಸಿ ಶತ್ರು ರಾಷ್ಟ್ರದ 1 ಲಕ್ಷ ಸೈನಿಕರನ್ನು ಸೆರೆ ಹಿಡಿಯಲಾಗಿತ್ತು. ಅಂತಹ ಐತಿಹಾಸಿಕ ಹಿನ್ನೆಲೆಯುಳ್ಳ ಪಕ್ಷವನ್ನು ಸಂಘಟನೆಗೊಳಿಸಿ ಬಲವರ್ಧನೆಗೊಳಿಸಲು ನಾವೆಲ್ಲರೂ ಶ್ರಮಿಸಬೇಕು. ಕ್ಷೇತ್ರದಲ್ಲಿ ಯುವ ಶಾಸಕ ದರ್ಶನ್ ಹೆಚ್ಚಿನ ಅನುದಾನ ತಂದು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ನಡೆಸುತ್ತಿದ್ದಾರೆ. ಮುಂದೆ ರಾಜಕೀಯವಾಗಿ ಉತ್ತಮ ಭವಿಷ್ಯ ಹೊಂದಿರುವ ದರ್ಶನ್ ಸಚಿವರಾಗುತ್ತಾರೆ. ಯುವಕರು ಅವರಿಗೆ ಒತ್ತಾಸೆಯಾಗಿ ನಿಂತು ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ನಗರ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ವಿಜಯ್ ಕುಮಾರ್, ಹುಲ್ಲಹಳ್ಳಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಆದರ್ಶ ಪದಗ್ರಹಣ ಮಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹನಬಾನು, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಜಿಪಂ ಮಾಜಿ ಸದಸ್ಯೆ ಲತಾ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್‌ಗೌಡ, ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗದ ಅಧ್ಯಕ್ಷ ನಾಗರಾಜು, ಮುಖಂಡರಾದ ಕುಳ್ಳಯ್ಯ, ಮಹದೇವು, ಕುರಿಹುಂಡಿ ರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ಅಕ್ರಮ ಸಕ್ರಮ ಸಮಿತಿ ಸದಸ್ಯರಾದ ಜಯರಾಮು, ಜಯಮಾಲಾ ಬೀರೇಗೌಡ ಸೇರಿದಂತೆ ಹಲವರಿದ್ದರು.

ಬೆಟ್ಟದಪುರದಲ್ಲಿ ಬೋನಿಗೆ ಬಿದ್ದ ಚಿರತೆ

ಬೆಟ್ಟದಪುರ, ಮೇ 12– ಗ್ರಾಮದ ಸೀತೆಮಂಟಿ ಬಳಿ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಸೋಮವಾರ ಬೆಳಗ್ಗೆ 9 ವರ್ಷದ ಗಂಡು ಚಿರತೆ ಬಿದ್ದಿದೆ.



ಕಳೆದ 20 ದಿನಗಳ ಹಿಂದೆ ಇದೇ ಸ್ಥಳದಲ್ಲಿ ಗಂಡು ಚಿರತೆ ಸೆರೆಯಾಗಿತ್ತು. ಈ ಭಾಗದಲ್ಲಿ ಇನ್ನು 3 ಚಿರತೆಗಳಿವೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದು, ಜಮೀನುಗಳಿಗೆ ಹೋಗಲು ತೊಂದರೆಯಾಗುತ್ತಿದ್ದು ಚಿರತೆಗಳ ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಗ್ರಾಮದ ಮುಖಂಡ ನಿಶಾಂತ್ ಮಾತನಾಡಿ, ಈ ಭಾಗದಲ್ಲಿ ಇನ್ನೂ ಚಿರತೆಗಳಿವೆ. ಈ ಹಿಂದೆ ಚಿರತೆ ಸೆರೆಸಿಕ್ಕ ಮರು ದಿನವೇ ಮಂಟಿ ಬಳಿ ಚಿರತೆ ಕಾಣಿಸಿಕೊಂಡಿತ್ತು. ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿ ಮತ್ತೊಮ್ಮೆ ಬೋನ್ ಇಡುವಂತೆ ಮನವಿ ಮಾಡಲಾಗಿತ್ತು. ಅದರಂತೆ ಇಂದು ಮತ್ತೊಂದು ಚಿರತೆ ಸೆರೆಯಾಗಿದೆ. ಈ ಭಾಗದಲ್ಲಿ ಇನ್ನೂ 2 ಬೋನ್‌ಗಳ ವ್ಯವಸ್ಥೆ ಮಾಡಬೇಕಿದೆ. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಉಳಿದ ಚಿರತೆಗಳನ್ನು ಸೆರೆ ಹಿಡಿಯಬೇಕೆಂದು ಆಗ್ರಹಿಸಿದರು.

ವಾಹೀದಾ ಭಾನು ನಿಧನ



ಹುಣಸೂರು, ಮೇ 12– ಪುರಸಭಾ ಮಾಜಿ ಅಧ್ಯಕ್ಷೆ, ನಗರದ ನಾಲ್‌ಬಂದ್ ಬೀದಿ ನಿವಾಸಿ ಲೇ.ಜಮೀಲ್ ಅವರ ಪತ್ನಿ ವಾಹೀದಾ ಭಾನು(52) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಶಬ್ಬೀರ್ ನಗರದ ಕಬರಸ್ತಾನದಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೆಸ್ಕ್ ಪವರ್‌ಮ್ಯಾನ್ ಹುದ್ದೆಗಳಿಗೆ ಸಹನಾಶಕ್ತಿ ಪರೀಕ್ಷೆ ಆರಂಭ





ವಿದ್ಯುತ್ ಕಂಬ ಹತ್ತುವ ಪರೀಕ್ಷೆಯಲ್ಲಿ ಪಾಲ್ಗೊಂಡಿರುವ ಯುವತಿ.

> ಈ ಹಿಂದೆ ಅರ್ಜಿ ಸಲ್ಲಿಸಿ, ಸಹನ ಶಕ್ತಿ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಹನ ಶಕ್ತಿ ಪರೀಕ್ಷೆ ನಡೆಸಲಾಗುತ್ತಿದೆ. ನೇಮಕಾತಿ ಪ್ರಕ್ರಿಯೆ ಪಾರದರ್ಶಕವಾಗಿ ಮೆರಿಟ್ ಹಾಗೂ ಎಂಡುರೆನ್ಸ್ ಟೆಸ್ಟ್ ಆಧಾರದ ಮೇಲೆ ಸರ್ಕಾರದ ಮೀಸಲಾತಿ ನಿಯಮಗಳಿಗೆ ಅನುಸಾರವಾಗಿ ನಡೆಸಲಾಗುತ್ತಿದೆ. ನಿಗಮಕ್ಕೆ ಆಯ್ಕೆಯಾಗುವ ಸಿಬ್ಬಂದಿ ಉತ್ತಮ ರೀತಿಯಲ್ಲಿ ಹಾಗೂ ತಮ್ಮ ಸುರಕ್ಷತೆಗೂ ಆದ್ಯತೆ ನೀಡಿ ಕಾರ್ಯನಿರ್ವಹಿಸಬೇಕು.
>
> - ಕೆ.ಎಂ.ಮುನಿಗೋಪಾಲ್ ರಾಜು, ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್.

ಮೈಸೂರು, ಮೇ12(ಎಂಟಿವೈ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ದ ಕಿರಿಯ ಪವರ್‌ಮ್ಯಾನ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ 1518 ಅಭ್ಯರ್ಥಿಗಳಲ್ಲಿ ಪರೀಕ್ಷೆಯ ಮೊದಲ ದಿನವಾದ ಇಂದು 22 ಯುವತಿಯರೂ ಸೇರಿದಂತೆ 248 ಅಭ್ಯರ್ಥಿಗಳು ಸಹನಾಶಕ್ತಿ ಪರೀಕ್ಷೆಗೆ ಹಾಜರಾದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಸೆಸ್ಕ್ ವತಿಯಿಂದ ಇಂದಿನಿಂದ(ಮೇ 12) ಮೇ 16ರವರೆಗೂ ಕಿರಿಯ ಪವರ್ ಮ್ಯಾನ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಸಹನಾ ಶಕ್ತಿ ಪರೀಕ್ಷೆ ನಡೆಸಲಾಗುತ್ತಿದ್ದು, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ವಿಂಗಡಣೆ ಮಾಡಿ ಪ್ರತಿದಿನ 300 ಅಭ್ಯರ್ಥಿಗಳಿಗೆ ಪಾರದರ್ಶಕವಾಗಿ ಸಹನಾ ಶಕ್ತಿ ಪರೀಕ್ಷೆ ನಡೆಸಲು ಸೆಸ್ಕ್ ಕ್ರಮ ಕೈಗೊಂಡಿದೆ. ಪರೀಕ್ಷೆಯ ಮೊದಲ ದಿನವಾದ ಸೋಮವಾರ ಹಾಜರಾಗಬೇಕಾಗಿದ್ದ 300 ಅಭ್ಯರ್ಥಿಗಳಲ್ಲಿ 22 ಯುವತಿಯರು ಸೇರಿದಂತೆ 248 ಮಂದಿ ಸಹನಾಶಕ್ತಿ ಪರೀಕ್ಷೆಗೆ ಹಾಜರಾದರು.

ಪರೀಕ್ಷೆಗೆ ವೆಬ್‌ಸೈಟ್‌ನಲ್ಲಿ ಕರಪತ್ರ ಡೌನ್‌ಲೋಡ್ ಮಾಡಿಕೊಂಡು ಅಗತ್ಯ ದಾಖಲಾತಿ ತರುವುದು ಕಡ್ಡಾಯ

ಕಿರಿಯ ಪವರ್‌ಮ್ಯಾನ್ ಹುದ್ದೆಗಾಗಿ ಈ ಹಿಂದೆಯೇ ಅರ್ಜಿ ಸಲ್ಲಿಸಿ, ಸಹನ ಶಕ್ತಿ ಪರೀಕ್ಷೆಗಾಗಿ ಆಯ್ಕೆಯಾಗಿರುವ 141 ಮಹಿಳಾ ಅಭ್ಯರ್ಥಿ ಸೇರಿದಂತೆ 1518 ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಬೇಕು. ಅರ್ಜಿ ಸಲ್ಲಿಸದೇ ಇದ್ದವರು ಈ ಪರೀಕ್ಷೆಗೆ ಪರಿಗಣಿಸುವುದಿಲ್ಲ. ಅಲ್ಲದೆ, ಯಾವ ಯಾವ ದಿನಾಂಕದಂದು ಯಾರು ಯಾರು ಪರೀಕ್ಷೆಗೆ ಹಾಜರಾಗಬೇಕು ಎಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಿ ಸಹನಾ ಶಕ್ತಿ ಪರೀಕ್ಷೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು https://cescmysore.karnataka.gov.in ವೆಬ್‌ಸೈಟ್‌ನಲ್ಲಿ ಪರೀಕ್ಷಾ ದಿನಾಂಕ ಖಚಿತಪಡಿಸಿಕೊಂಡು, ಅಲ್ಲಿಂದ ಕರ ಪತ್ರ(ಪರೀಕ್ಷಾ ಪ್ರವೇಶ ಪತ್ರ) ಡೌನ್‌ಲೋಡ್ ಮಾಡಿಕೊಂಡು, ಅದರೊಂದಿಗೆ ಅರ್ಜಿಯಲ್ಲಿ ತಿಳಿಸಿರುವ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಮೀಸಲಾತಿಗೆ ಅನುಗುಣವಾಗಿ ಎಲ್ಲ ಮೂಲ ದಾಖಲಾತಿಗಳು ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ತರಬೇಕು ಎಂದು ಸೆಸ್ಕ್ ಅಧಿಕಾರಿಗಳು ತಿಳಿಸಿದ್ದಾರೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ಖಾಲಿಯಿರುವ 309 ಕಿರಿಯ ಪವರ್‌ಮ್ಯಾನ್ ಹುದ್ದೆಗಳ ಭರ್ತಿಗೆ 2024ರ ಅ.14ರಂದು ನೋಟಿಫಿಕೇಷನ್ ಹೊರಡಿಸಲಾಗಿತ್ತು. ಈ ಹುದ್ದೆಗಳಿಗಾಗಿ ರಾಜ್ಯಾದ್ಯಂತ ಸಾವಿರಾರು ಮಂದಿ ಅರ್ಜಿ ಸಲ್ಲಿಸಿದ್ದರು. 1:5ರ ಅನುಪಾತದಲ್ಲಿ ಹೆಚ್ಚಿನ ಅಂಕ ಪಡೆದ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ 1518 ಮಂದಿಯನ್ನು ಸಹನಾ ಶಕ್ತಿ ಪರೀಕ್ಷೆಗೆ ಆಯ್ಕೆ ಮಾಡಲಾಗಿತ್ತು. ಅದರಲ್ಲಿ 141 ಮಹಿಳಾ ಅಭ್ಯರ್ಥಿಗಳು ಒಳಗೊಂಡಿದ್ದು, 5 ದಿನಗಳ ಕಾಲ ನಡೆಯುವ ಸಹನಾ ಶಕ್ತಿ ಪರೀಕ್ಷೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಪರೀಕ್ಷೆಯಲ್ಲಿ ಏನೇನು: ಕಿರಿಯ ಪವರ್‌ಮ್ಯಾನ್ ಹುದ್ದೆ ನೇಮಕಾತಿಗಾಗಿ ನಡೆಯುತ್ತಿರುವ ಸಹನಾ ಶಕ್ತಿ ಪರೀಕ್ಷೆಯಲ್ಲಿ 8 ಮೀಟರ್ ಎತ್ತರದ ವಿದ್ಯುತ್ ಕಂಬವನ್ನು ಹತ್ತಿ, ಇಳಿಯಬೇಕು. ಕಂಬ ಹತ್ತುವ ಪರೀಕ್ಷೆಯಲ್ಲಿ ಪಾಸಾದರೆ 14 ಸೆಕೆಂಡ್‌ನಲ್ಲಿ 100 ಮೀಟರ್ ಓಟ, ಒಂದು ನಿಮಿಷಕ್ಕೆ 50 ಬಾರಿ ಸ್ಕಿಪ್ಪಿಂಗ್, ಮೂರು ಅವಕಾಶದಲ್ಲಿ 12ಪೌಂಡ್ ತೂಕದ ಶಾಟ್‌ಪುಟ್ ಅನ್ನು 8 ಮೀಟರ್ ದೂರ ಎಸೆಯಬೇಕು. ಅಂತಿಮವಾಗಿ 3 ನಿಮಿಷದಲ್ಲಿ 800 ಮೀಟರ್ ಓಟವನ್ನು ಪೂರೈಸುವ ಪರೀಕ್ಷೆ ಎದುರಿಸಬೇಕಾಗುತ್ತದೆ.

ಪರೀಕ್ಷೆಗೆ ಚಾಲನೆ: ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸೋಮವಾರ ಆರಂಭವಾದ ಸಹನಾ ಶಕ್ತಿ ಪರೀಕ್ಷೆಗೆ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷರೂ ಆದ ರಮೇಶ್ ಬಂಡಿಸಿದ್ದೇಗೌಡ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕಿರಿಯ ಪವರ್‌ಮ್ಯಾನ್ ನೇಮಕಾತಿ ಸಹನಾ ಶಕ್ತಿ ಪರೀಕ್ಷೆಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಸೆಸ್ಕ್‌ನಲ್ಲಿ ಖಾಲಿ ಇರುವ ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪಾರದರ್ಶಕವಾಗಿ ನಡೆಸಲಾಗುತ್ತಿದೆ. ಸೆಸ್ಕ್ ಸಿಬ್ಬಂದಿಗಳು ಆಮಿಷಕ್ಕೆ ಒಳಗಾಗದೆ ಉತ್ತಮವಾಗಿ ಕೆಲಸ ಮಾಡಬೇಕು. ನಿಗಮಕ್ಕೆ ಒಳ್ಳೆಯ ಹೆಸರು ಬರುವಂತೆ ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ ರಾಜ್, ಮುಖ್ಯ ಇಂಜಿನಿಯರ್ ಡಿ.ಜೆ. ದಿವಾಕರ್, ಅಧೀಕ್ಷಕ ಇಂಜಿನಿಯರ್ ಸುನೀಲ್, ಮುಖ್ಯ ಆರ್ಥಿಕ ಅಧಿಕಾರಿ ರೇಣುಕಾ, ಆಡಳಿತ ಮತ್ತು ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಡಾ. ಬಿ.ಆರ್. ರೂಪ, ಜಾಗೃತ ದಳದ ಎಸ್ಪಿ ಸವಿತಾ ಹೂಗಾರ್ ಸೇರಿದಂತೆ ಇನ್ನಿತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದಿ ಭೂತ್‌ನಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಂಗಳೂರು ನಡುರಸ್ತೆಯಲ್ಲೇ ಮಹಿಳೆಗೆ ಗುಪ್ತಾಂಗ ತೋರಿಸಿ ವಿಕೃತಿ; ಬಿಜೆಪಿಯಿಂದ ಉಚ್ಚಾಟನೆ



ಮಂಗಳೂರು: ಸಾರ್ವಜನಿಕವಾಗಿಯೇ ಮಹಿಳೆಗೆ ಗುಪ್ತಾಂಗ ತೋರಿಸಿ ಇಡ್ಕಿದು ಗ್ರಾಮ ಪಂಚಾಯತ್ ಉಪಾಧ್ಯಕ್ಷ ವಿಕೃತಿ ಮೆರೆದಿರುವ ಘಟನೆ ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಇಡ್ಕಿದು ಗ್ರಾಮದಲ್ಲಿ ನಡೆದಿದೆ. ಈ ಘಟನೆ ಸಂಬಂಧ ಉಪಾಧ್ಯಕ್ಷ ಪದ್ಮನಾಭ ಸಫಲ್ಯನನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ರಸ್ತೆ ವಿವಾದಕ್ಕೆ ಸಂಬಂಧಿಸಿದಂತೆ ಈ ಘಟನೆ ನಡೆದಿದೆ. ಮನೆ ದಾರಿಗೆ ಗೇಟು ಅಳವಡಿಸಿದ್ದನ್ನು ಪ್ರಶ್ನಿಸಿದ್ದ ಮಹಿಳೆಗೆ ಪದ್ಮನಾಭ ಸಫಲ್ಯ ತನ್ನ ಗುಪ್ತಾಂಗ ತೋರಿಸಿದ್ದಾನೆ. ಈ ಸಂಬಂಧ ಮಹಿಳೆ ಪದ್ಮನಾಭ ಸಫಲ್ಯ ವಿರುದ್ಧ ವಿಟ್ಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ತೋಟದಲ್ಲಿ ತಾನು ಕೆಲಸ ಮಾಡುತ್ತಿದ್ದಾಗ ನಮ್ಮ ಮನೆಯ ದಾರಿಯಲ್ಲಿ ಗೇಟು ಅಳವಡಿಸುತ್ತಿದ್ದ ಶಬ್ದ ಕೇಳಿಸಿತು. ಅಲ್ಲಿಗೆ ತೆರಳಿ ಅದನ್ನು ವಿಡಿಯೋ ಮಾಡುತ್ತಿದ್ದಾಗ ಪದ್ಮನಾಭ ತನ್ನ ಚಡ್ಡಿಯನ್ನು ಜಾರಿಸಿ ಮರ್ಮಾಂಗ ತೋರಿಸಿ, ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಹಿಳೆಯ ಗೌರವಕ್ಕೆ ಧಕ್ಕೆ ತಂದ ಹಿನ್ನೆಲೆಯಲ್ಲಿ ಪದ್ಮನಾಭ ಸಪಲ್ಯನನ್ನು ಬಿಜೆಪಿಯ ಪ್ರಾಥಮಿಕ ಸದಸ್ಯತ್ವವನ್ನು ರದ್ದುಗೊಳಿಸಿ, ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಪುತ್ತೂರು ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಶೆಟ್ಟಿ ಉಜರೆಮಾರು ತಿಳಿಸಿದ್ದಾರೆ. ಅಲ್ಲದೆ ಪಂಚಾಯತ್ ಉಪಾಧ್ಯಕ್ಷ ಸ್ಥಾನಕ್ಕೂ ರಾಜೀನಾಮೆ ನೀಡುವಂತೆ ದಯಾನಂದ ಶೆಟ್ಟಿ ಸೂಚಿಸಿದ್ದಾರೆ.

ಡಿವಿಜಿಯವರಿಗೆ ಅತ್ಯುನ್ನತ ಪ್ರಶಸ್ತಿಗಳು ದಕ್ಕಬೇಕಾಗಿತ್ತು

ವೈದ್ಯಸಾಹಿತಿ ಡಾ.ಯೋಗಣ್ಣ ಅಭಿಮತ



'ತಿಂಗಳ ತಿಳಿವು' ಶೀರ್ಷಿಕೆಯಡಿ ಪ್ರತಿ ಹುಣ್ಣಿಮೆಯಂದು ಜರುಗುವ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಕಿರಣ್ ಸಿಡ್ಲೇಹಳ್ಳಿ ಮಾತನಾಡುತ್ತಿರುವುದು

ಮೈಸೂರು, ಮೇ 12(ಎಸ್‌ಪಿಎನ್)– ಆಧ್ಯಾತ್ಮ ಸಾಹಿತ್ಯ ಹಾಗೂ ತತ್ವಶಾಸ್ತ್ರದಲ್ಲಿ ಡಿ.ವಿ.ಗುಂಡಪ್ಪ ಅವರ ಸಾಧನೆ ಅಪರಿಮಿತ. ಅವರ ಸಾಧನೆಗೆ ಕೇಂದ್ರ ಸರ್ಕಾರ ಅತ್ಯುನ್ನತ ಶ್ರೇಣಿಯ ಪ್ರಶಸ್ತಿಗಳನ್ನು ನೀಡಿ ಈಗಾಗಲೇ ಗೌರವಿಸಬೇಕಿತ್ತು ಎಂದು ಹಿರಿಯ ವೈದ್ಯಸಾಹಿತಿ ಡಾ.ಎಸ್.ಪಿ. ಯೋಗಣ್ಣ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ಶ್ರೀ ರಾಮಕೃಷ್ಣ ಪರಮಹಂಸ ಪ್ರತಿಮೆ ಬಳಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ 'ತಿಂಗಳ ತಿಳಿವು' ಶೀರ್ಷಿಕೆಯಡಿ ಪ್ರತಿ ಹುಣ್ಣಿಮೆಯಂದು ಜರುಗುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಡಿವಿಜಿ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ಜೀವನದ ಹಲವು ಏರುಪೇರುಗಳ ನಡುವೆಯೂ ಕಥೆ, ಕವನ, ಸಾಹಿತ್ಯ ರಚನೆ ಮಾತ್ರವಲ್ಲದೆ, ಚರಿತ್ರೆ, ರಾಜನೀತಿ, ತತ್ವಜ್ಞಾನ, ಪ್ರಜಾಪ್ರಭುತ್ವ, ಸಮಾಜ ವಿಜ್ಞಾನ, ಸಾರ್ವಜನಿಕ ಜೀವನ ಸೇರಿದಂತೆ ಒಟ್ಟು 66 ಕೃತಿಗಳನ್ನು ರಚಿಸಿದ್ದಾರೆ. ಜೊತೆಗೆ ಕನ್ನಡ–ಇಂಗ್ಲಿಷ್ ಎರಡರಲ್ಲೂ ಹಲವು ಉಪಯುಕ್ತ ಲೇಖನಗಳನ್ನೂ ಬರೆದಿದ್ದಾರೆ. ಇವರ ಇಂಗ್ಲಿಷ್ ಕೃತಿ ಹಾಗೂ ಪ್ರಬಂಧ ಬೇರೆ ಭಾಷೆಗಳಿಗೆ ತರ್ಜುಮೆಗೊಂಡಿದೆ ಎಂದರು.

ಡಿವಿಜಿ, ಪ್ರೌಢಶಾಲೆ ಓದುತ್ತಿರುವಾಗಲೇ ಸಂಸಾರ ಜೀವನಕ್ಕೆ ಕಾಲಿಟ್ಟರು. ಮುಂದೆ ಶಿಕ್ಷಕ ವೃತ್ತಿ ಸೇರಿ, ಹಲವು ವೃತ್ತಿಗಳಲ್ಲಿ ಸೇವೆ ಸಲ್ಲಿಸಿದ್ದರು. ಇದರ ನಡುವೆಯೇ ದಿವಾನ್ ರಂಗಾಚಾರ್ಲು ಅವರ ಬಗ್ಗೆ ಇಂಗ್ಲಿಷಿನಲ್ಲಿ ಪ್ರಕಟಿಸಿದ ಲೇಖನ ಡಿವಿಜಿ ಅವರ ಸಾಹಿತ್ಯ ಬದುಕಲ್ಲಿ ಹೊಸ ತಿರುವು ಪಡೆಯಿತು. ಕವನ ಸಂಕಲನಗಳಾದ ವಸಂತ ಕುಸುಮಾಂಜಲಿ, ನಿವೇದನೆ, ಕವಿತೆ, ಉಮರಾನ ಒಸಾಜ್, ಮಂಕುತಿಮ್ಮನ ಕಗ್ಗ, ಮರುಳ ಮುನಿಯನ ಕಗ್ಗ ಸೇರಿದಂತೆ ಹಲವು ಪುಸ್ತಕಗಳು ಪ್ರಕಟಗೊಂಡಿವೆ ಎಂದು ವಿವರಿಸಿದರು.

ಡಿವಿಜಿ. ಧಾರ್ಮಿಕ, ರಾಜಕೀಯ, ಆಧ್ಯಾತ್ಮ ಹಾಗೂ ಸಾಮಾಜಿಕ ಕ್ಷೇತ್ರ ಸೇರಿದಂತೆ ಇತರೆ ಕ್ಷೇತ್ರಗಳನ್ನು ಗುರುತಿಸುವ ಹಲವು ಕೃತಿಗಳು ರಚಿಸಿದ್ದಾರೆ. ಅದರಲ್ಲಿ 'ಮಂಕುತಿಮ್ಮನ ಕಗ್ಗ'ವೂ ಒಂದು. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿದ್ದರೂ ಅವರ ವಿದ್ವತ್ತಿಗೆ 'ಜ್ಞಾನಪೀಠ ಪ್ರಶಸ್ತಿ'ಗೆ ಏಕೆ ಗುರುತಿಸಲಿಲ್ಲ ಎಂಬುದು ಇಂದಿಗೂ ಸೋಜಿಗ ಸಂಗತಿಯಾಗಿದೆ ಎಂದರು.

ಹಿರಿಯ ಸಾಹಿತಿ ಕಿರಣ್ ಸಿಡ್ಲೇಹಳ್ಳಿ ಅವರು, 'ಕನ್ನಡ ಸಾಹಿತ್ಯದಲ್ಲಿ ಮುಕ್ತಕಗಳು' ವಿಷಯ ಕುರಿತು ಮಾತನಾಡಿ, ಮುಕ್ತಕ, ತ್ರಿಪದಿ, ವಚನ ಸಾಹಿತ್ಯ, ದ್ವಿಪದಿ ಪದ್ಯಗಳ ಹಲವಾರು ಪ್ರಾಕಾರಗಳು ಕನ್ನಡದಲ್ಲಿವೆ ಇದರ ಬಗ್ಗೆ ಹಲವು ಚಿಂತಕರು ವಿವಿಧ ರೂಪದಲ್ಲಿ ಚರ್ಚೆ ಮಾಡುತ್ತಿದ್ದಾರೆ. ಮುಕ್ತಕ ಸಾಹಿತ್ಯಕ್ಕೆ 'ಮಂಕುತಿಮ್ಮನ ಕಗ್ಗ' ಕೃತಿ ಪರಿಚಯಿಸಿದ ನಂತರ ಹೊಸ ಮೈಲುಗಲ್ಲು ಆರಂಭವಾಯಿತು ಎಂದರು.

ಈ ವೇಳೆ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಅಧ್ಯಕ್ಷರೂ ಆದ ಮಾಜಿ ಶಾಸಕ ಡಿ.ಮಾದೇಗೌಡ, ಉಪಾಧ್ಯಕ್ಷ ಬಸವಣ್ಣ, ಕಾರ್ಯದರ್ಶಿ ಕೆ.ಕೆಂಪಲಿಂಗರಾಜು, ಖಜಾಂಚಿ ಎಸ್.ಪುರುಷೋತ್ತಮ್, ಕರ್ನಾಟಕ ಮುಕ್ತಕ ಅಕಾಡೆಮಿಯ ರಾಮಪ್ರಸಾದ್, ಸಂಚಾಲಕ ಪ್ರೊ.ಜಿ. ಚಂದ್ರಶೇಖರ್, ಶ್ರೀನಾಥ್, ಡಿ.ಟಿ. ಪ್ರಭಾಕರ್, ಕೃಷ್ಣಮೂರ್ತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಡುಕೋಟೆಯಲ್ಲಿ ವಿದ್ಯುತ್ ಉಪ–ಕೇಂದ್ರ ಸ್ಥಾಪನೆ ಸರ್ಕಾರ ನಿಗದಿಪಡಿಸುವ ಬೆಲೆಯಲ್ಲಿ ಜಮೀನು ಖರೀದಿ

ಮೈಸೂರು, ಮೇ 12– ಮೈಸೂರು ಜಿಲ್ಲೆಯ ಚಾಮರಾಜನಗರ ಯೋಜನೆ ವಿಭಾಗದ ವ್ಯಾಪ್ತಿಯಲ್ಲಿ ಹೆಚ್.ಡಿ ಕೋಟೆ ತಾಲೂಕಿನ ಪಡುಕೋಟೆಯಲ್ಲಿ 66/11 ಕೆ.ವಿ ವಿದ್ಯುತ್ ಉಪ–ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ವಿದ್ಯುತ್ ಉಪ–ಕೇಂದ್ರಕ್ಕೆ ಕನಿಷ್ಠ 2 ಎಕರೆ ಜಮೀನು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಹಾಗೂ ಪಡುಕೋಟೆಯ ಗ್ರಾಮದ ವ್ಯಾಪ್ತಿಯ ಅಥವಾ ಸುತ್ತಮುತ್ತ ಇರುವ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಸರ್ಕಾರವು ನಿಗಧಿ ಪಡಿಸುವ ಬೆಲೆಯಲ್ಲಿ ಖರೀದಿ ಮಾಡಲು ಉದ್ದೇಶಿಸಲಾಗಿದೆ.

ಜಮೀನನ್ನು ಕರ್ನಾಟಕ ವಿದ್ಯುತ ಪ್ರಸರಣ ನಿಗಮ ನಿಯಮಿತಗೆ ಮಾರಾಟ ಮಾಡಲು ಇಚ್ಛಿಸುವ ಭೂಮಾಲೀಕರು ಚಾಮರಾಜನಗರ ಕವಿಪ್ರನಿನಿಯ ಚಾಮರಾಜನಗರ ಯೋಜನೆ ಉಪ–ವಿಭಾಗ ಕಾರ್ಯನಿರ್ವಾಹಕರ ಇಂಜಿನಿಯರ್(ವಿ) ಕಚೇರಿಯನ್ನು ಸಂಪರ್ಕಿಸಬಹುದಾಗಿದೆ

ಹೆಚ್ಚಿನ ಮಾಹಿತಿಗಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಪ್ರೀತಮ್ ಎಮ್.ಎಮ್, 9448271524, ಸಂತೋಷ–9448012526, ಸಹಾಯಕ ಕಾರ್ಯ ನಿರ್ವಾಹಕರ ಇಂಜಿನಿಯರ್(ವಿ) ವಿನೋದ್ ಕುಮಾರ್ ಸಿಂಗ್ ಎಮ್.ಎಮ್– 9448365683, ಕಿರಣ್–9480813912 ನ್ನು ಸಂಪರ್ಕಿಸಬಹುದು ಎಂದು ಚಾಮರಾಜನಗರ ಕವಿಪ್ರನಿನಿಯ ಚಾಮರಾಜನಗರದ ಯೋಜನೆ ಉಪ–ವಿಭಾಗ ಕಾರ್ಯ ನಿರ್ವಾಹಕರ ಇಂಜಿನಿಯರ್(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಳಮೀಸಲಾತಿ ಸಮೀಕ್ಷೆ ಗೊಂದಲ ನಿವಾರಣೆಗೆ ಒತ್ತಾಯ

ಮೈಸೂರು, ಮೇ 12(ಎಂಟಿವೈ)– ರಾಜ್ಯ ಸರ್ಕಾರ ಆರಂಭಿಸಿರುವ ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಮೀಕ್ಷೆಯಲ್ಲಿ ಉಂಟಾಗಿರುವ ಕೆಲ ತಾಂತ್ರಿಕ ಗೊಂದಲ ನಿವಾರಿಸಿ, ಸಮೀಕ್ಷೆಗಾಗಿ ನಿಯೋಜನೆಗೊಂಡಿರುವ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡುವಂತೆ ಕರ್ನಾಟಕ ಪರಿಶಿಷ್ಟ ಜಾತಿ ಕೊರಮ, ಕೊರಚ ಕುರವನ್, ಕೇಪ್ ಮಾರಿಸ್ ವೈಜ್ಞಾನಿಕ ಹೋರಾಟ ಸಮಿತಿಯ ಉಪಾಧ್ಯಕ್ಷ ಡಿ.ಎನ್.ಮುತ್ತುರಾಜ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಆರಂಭಿಸಿರುವ ಪರಿಶಿಷ್ಟ ಜಾತಿ ಜನಗಣತಿಯಲ್ಲಿ ಬಳಸುವ ಮೊಬೈಲ್ ಆ್ಯಪ್‌ನಲ್ಲಿ ಕೆಲ ತಾಂತ್ರಿಕ ಸಮಸ್ಯೆ ಉಂಟಾಗುತ್ತಿದೆ. ಅಲ್ಲದೆ, ಗಣತಿಗಾಗಿ ನಿಯೋಜಿಸಲ್ಪಟ್ಟಿರುವ ಸಿಬ್ಬಂದಿಗಳಿಗೆ ತರಬೇತಿ ಕೊರತೆ ಇದ್ದು, ಗಣತಿ ಕಾರ್ಯ ನಡೆಸಲು ಪರದಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗಣತಿಗೆ ಬಳಸುತ್ತಿರುವ ಮೊಬೈಲ್ ಆ್ಯಪ್‌ನಲ್ಲಿನ ತಾಂತ್ರಿಕ ದೋಷ ಸರಿಪಡಿಸಬೇಕು. ಅಲ್ಲದೆ, ಸಿಬ್ಬಂದಿಗಳಿಗೆ ತರಬೇತಿ ನೀಡುವುದರಿಂದ ಸುಲಲಿತ ಹಾಗೂ ಪಾರದರ್ಶಕವಾಗಿ ಗಣತಿ ಕಾರ್ಯ ನಡೆಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತ ನಡೆಸುತ್ತಿರುವ ಸಮೀಕ್ಷೆ ಪಾರದರ್ಶಕವಾಗಿ ನಡೆಯುತ್ತಿಲ್ಲ ಎಂಬ ಶಂಕೆಯಿದೆ. ಮನೆ, ಮನೆಗೆ ಭೇಟಿ ನೀಡುತ್ತಿರುವ ಸಿಬ್ಬಂದಿಗಳಿಗೆ ಗಣತಿ ಹೇಗೆ ನಡೆಸಬೇಕೆಂಬ ಸೂಕ್ತ ಮಾಹಿತಿಯಿಲ್ಲದಂತಾಗಿದೆ. ಇದರಿಂದ ಕೊರಮ ಸಮುದಾಯಕ್ಕೆ ಹೆಚ್ಚು ಅನ್ಯಾಯವಾಗುತ್ತಿದೆ. ಗಣತಿ ವೇಳೆ ಸರ್ವರ್ ಡೌನ್ ಸಮಸ್ಯೆಯೂ ಕಾಡುತ್ತಿದ್ದು, ಒಂದು ಮನೆಯ ಸಮೀಕ್ಷೆ ಮಾಡಲು ಮೂರು ದಿನವಾದರೂ ಮಾಹಿತಿ ಅಪ್ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ತಾಂತ್ರಿಕ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಸಮೀಕ್ಷೆ ಮಾಡುವವರು ಆದಿ ಕರ್ನಾಟಕ ಜಾತಿಯ ಉಪಜಾತಿಯಾಗಿ ಕೊರಮ ಸಮುದಾಯವನ್ನು ಪರಿಗಣಿಸಬೇಕು. ಆದರೆ ಕುರವನ್, ಕೇಪ್ ಮಾರಿಸ್ ಸಮುದಾಯವನ್ನು ಪರಿಗಣಿಸುತ್ತಿಲ್ಲ. ಕೊರಮ, ಕೊರಚ ಜಾತಿಯು ಪ್ರತ್ಯೇಕ ಕಲಂ 054.1 ರಲ್ಲಿ ಇದ್ದು, ಅದನ್ನೇ ಪರಿಗಣಿಸಬೇಕು. ಆದರೆ, ಗಣತಿದಾರರು ಈ ಕಲಂ ಹುಡುಕುವುದರಲ್ಲಿ ನಿರ್ಲಕ್ಷಿಸುತ್ತಿದ್ದಾರೆ. ಗಣತಿಯಲ್ಲಿ ಕೊರಮ, ಕೊರಚ ಸಮುದಾಯ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕೊರಮ ಜನಾಂಗ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಶಾಂತರಾಜು, ಸಮಿತಿ ಸಹ ಸಂಚಾಲಕ ಮೋಹನ್ ಕಾಯಕ, ಸದಸ್ಯರಾದ ಪಿ.ನಾಗರಾಜ್, ಶೇಷಾದ್ರಿ ಸತೀಶ್ ಬಸಲಾಪುರ ಇದ್ದರು.

ದಾವಣಗೆರೆಯಿಂದ ಮೈಸೂರಿಗೆ ಬಂದ ಕೆಎಸ್‌ಆರ್‌ಟಿಸಿ ಬಸ್ಸಲ್ಲಿ ಪ್ರಯಾಣಿಕನ 10 ಲಕ್ಷ ನಗದು ನಾಪತ್ತೆ!

ಮೈಸೂರು, ಮೇ 12(ಆರ್‌ಕೆ)– ದಾವಣಗೆರೆಯಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್ ಆರ್‌ಟಿಸಿ)ಯ ಐರಾವತ ಕ್ಲಬ್ ಕ್ಲಾಸ್ ಬಸ್‌ನಲ್ಲಿ ಮೈಸೂರಿಗೆ ಬಂದ ಪ್ರಯಾಣಿಕ ರೊಬ್ಬರ 10 ಲಕ್ಷ ರೂ. ಹಣ ನಾಪತ್ತೆಯಾಗಿದೆ. ಮೇ 6ರಂದು ಈ ಪ್ರಕರಣ ನಡೆದಿದೆ.

ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ 9ನೇ ಕ್ರಾಸ್ ನಿವಾಸಿ ಎಸ್.ವಿ. ಅಣ್ಣಪ್ಪ ಅವರ ಮಗ, ಚಿನ್ನಾಭರಣ ತಯಾರಕ ಎ. ಅಮಿತ್ 10 ಲಕ್ಷ ರೂ. ಹಣ ಕಳೆದುಕೊಂಡವರು. ಮೈಸೂರಿನಲ್ಲಿ ವಾಸವಾಗಿರುವ ಸ್ನೇಹಿತ ವಿನಾಯಕ ಎಲ್. ಟಿಲಿವಾಲ್ ಅವರು ಮಣಪ್ಪುರಂ, ಇಲವಾಲ ಶಾಖೆಯಲ್ಲಿ ಚಿನ್ನ ಗಿರಿವಿ ಇರಿಸಿ ಸಾಲ ಪಡೆದಿದ್ದು, ಅದನ್ನು ಮರುಪಾವತಿಸದ ಕಾರಣ ಚಿನ್ನಾಭರಣ ಹರಾಜಿಗೆ ಬಂದಿತ್ತು. ಅವರ ಕೋರಿಕೆಯಂತೆ ಅಮಿತ್, ವಿನಾಯಕ ಅವರಿಗೆ ಹಣ ಕೊಡುವುದಾಗಿ ಒಪ್ಪಿಕೊಂಡಿದ್ದರು.

ಅದರಂತೆ ತಾನು ಕೆಲಸ ಮಾಡುತ್ತಿದ್ದ ಆಭರಣ ಅಂಗಡಿ ಮಾಲೀಕ ವಿಶಾಲ್ ಜೈನ್ ಬಳಿ ಶ್ಯೂರಿಟಿಗಾಗಿ ತಮ್ಮದೇ 1 ಮುತ್ತಿನ ಸರ, 1 ನೆಕ್ಲೆಸ್, 1 ಬ್ರೇಸ್‌ಲೆಟ್, 1 ಜೊತೆ ಕಿವಿ ಜುಮುಕಿ, 13 ಗ್ರಾಂ ಚೈನ್ ಗಿರಿವಿ ಇರಿಸಿ 10 ಲಕ್ಷ ರೂ. ಸಾಲ ತೆಗೆದುಕೊಂಡು ಮೇ 5ರಂದು ರಾತ್ರಿ 10.30 ಗಂಟೆಗೆ ದಾವಣಗೆರೆಯಿಂದ, ಕೆಎಸ್‌ಆರ್‌ಟಿಸಿ ಐರಾವತ ಕ್ಲಬ್ ಕ್ಲಾಸ್ ಬಸ್‌ನಲ್ಲಿ ಅಮಿತ್ ಪ್ರಯಾಣ ಬೆಳೆಸಿದ್ದರು. ಹಣವಿದ್ದ ಬ್ಯಾಗ್‌ಗೆ ಟವೆಲ್ ಸುತ್ತಿ ಭದ್ರಪಡಿಸಿ ಲಗ್ಗೇಜ್ ಇಡುವ ಸ್ಥಳದಲ್ಲಿ ಇರಿಸಿ 33ನೇ ಸಂಖ್ಯೆಯ ಪುಶ್‌ಬ್ಯಾಕ್ ಸೀಟ್‌ನಲ್ಲಿ ಕೂತು ಅಮಿತ್ ಪ್ರಯಾಣ ಮಾಡಿದ್ದಾರೆ.

22 ಮಂದಿ ಪ್ರಯಾಣಿಕರಿದ್ದ ಈ ಬಸ್ ಮರುದಿನ ಮೇ 6ರಂದು ಮುಂಜಾನೆ 4.45 ಗಂಟೆಗೆ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣ ತಲುಪಿದೆ. ಬಸ್ ಚಾಲಕ ಮೈಸೂರು ಲಾಸ್ಟ್ ಸ್ಟಾಪ್ ಸಬರ್ಬನ್ ಬಸ್‌ಸ್ಟ್ಯಾಂಡ್ ಎಂದು ಹೇಳುತ್ತಿದ್ದಂತೆಯೇ





ಹಣ ಕಳೆದುಕೊಂಡ ಎ. ಅಮಿತ್ ಮತ್ತು ಬ್ಯಾಗ್

ಅಲರ್ಟ್ ಆದ ಅಮಿತ್, ತಕ್ಷಣ ಲಗ್ಗೇಜ್ ಬಾಕ್ಸ್‌ನಿಂದ ಬ್ಯಾಗ್ ತೆಗೆದು ಹಣ ಖಾತರಿಪಡಿಸಿಕೊಳ್ಳಲು ಮುಂದಾದಾಗ ಅದರಲ್ಲಿದ್ದ 10 ಲಕ್ಷ ರೂ. ನಗದು ನಾಪತ್ತೆಯಾಗಿರುವುದು ತಿಳಿಯಿತು.

ಗಾಬರಿಗೊಂಡ ಅಮಿತ್, ಇಡೀ ಬಸ್ ಶೋಧಿಸಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ಬಸ್‌ನ ಸಿಸಿಟಿವಿ ಫುಟೇಜ್ ಪರಿಶೀಲಿಸಿದಾಗ ಮೇ 5ರಂದು ರಾತ್ರಿ 11.49 ಗಂಟೆ ವೇಳೆಯಲ್ಲಿ ಚಿತ್ರದುರ್ಗದಲ್ಲಿ ಇಬ್ಬರು ಪ್ರಯಾಣಿಕರು ಬಸ್ ಏರಿದ್ದರು.

ಮುಂದೆ ಕುಣಿಗಲ್, ತುಮಕೂರಿನಲ್ಲೂ ಯಾರೂ ಹತ್ತಲಿಲ್ಲ, ಇಳಿಯಲೂ ಇಲ್ಲ. ಆದರೆ, ಮಂಡ್ಯ ಬಸ್ ನಿಲ್ದಾಣದಲ್ಲಿ ಮಾತ್ರ ಒಬ್ಬ ಮಹಿಳೆ ಇಳಿದುಕೊಂಡಿದ್ದಾರೆ. ಅವರೊಟ್ಟಿಗೆ ಮೈಸೂರಿಗೆ ಟಿಕೆಟ್ ಬುಕ್ ಮಾಡಿದ ಮತ್ತೋರ್ವ ಪ್ರಯಾಣಿಕ ಇಳಿದಿರುವುದು ಕಂಡು ಬಂದಿದೆ.

ಅಮಿತ್, ಮೊದಲು ಅಲ್ಲಿನ ಲಷ್ಕರ್ ಠಾಣೆ ಔಟ್‌ಪೋಸ್ಟ್ ಪೊಲೀಸರಿಗೆ ವಿಷಯ ತಿಳಿಸಿದರು. ಸಿಸಿ ಕ್ಯಾಮರಾ ಫುಟೇಜ್‌ಗಳಲ್ಲಿ ಮಂಡ್ಯದಲ್ಲಿ ಇಬ್ಬರು ಇಳಿದುಕೊಂಡಿರುವುದು ಕಂಡರೂ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಈ ಕೆಎಸ್‌ಆರ್‌ಟಿಸಿ ಐರಾವತ (ಕೆಎ 17–ಎಫ್ 1579) ಬಸ್ ಚಾಲಕ ಸಹ ಹಣ ಹುಡುಕಲು ನೆರವಾದರೂ, ಪ್ರಯೋಜನವಾಗಲಿಲ್ಲ.

ಕಡೆಗೆ ಅಮಿತ್ ಲಷ್ಕರ್ ಠಾಣೆಗೆ ತೆರಳಿ ಘಟನೆ ಬಗ್ಗೆ ಮಾಹಿತಿ ನೀಡಿದರು. ಆದರೆ ಲಷ್ಕರ್ ಠಾಣೆ ಪೊಲೀಸರು, ನೀವು ನಗದು ಸಾಗಿಸಿರುವುದು ದಾವಣಗೆರೆಯಿಂದ. ಅಲ್ಲಿಯೇ ಕಂಪ್ಲೆಂಟ್ ಕೊಡಬೇಕು. ನೀವು ಹಣ ತಂದಿದ್ದಕ್ಕೆ ಪುರಾವೆ ಏನಿದೆ ಎಂದು ಪ್ರಶ್ನಿಸಿದ್ದಾರೆ.

ನಾನು ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಜುವೆಲರಿ ಅಂಗಡಿ ಮಾಲೀಕರಿಂದ ಸಾಲ ಪಡೆದು ಈ ಹಣ ತಂದಿರುವುದಾಗಿ ಹೇಳಿ ಅಮಿತ್, ಅಮಿಗೂ ಫೋನ್ ಮಾಡಿ ಪೊಲೀಸರೊಂದಿಗೆ ಮಾತನಾಡಿಸಿದರೂ, ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಲ್ಲ ಎಂದು ಅಮಿತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇಂದು ಸರಣಿ ರಕ್ತದಾನ ಶಿಬಿರ

ಗೋಣಿಕೊಪ್ಪ, ಮೇ 12– ಅಕ್ಷಯ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಇಂಟರ್‌ನ್ಯಾಷನಲ್ ಗೋಣಿಕೊಪ್ಪಲ್ ಲೇಜಿನ್ ಸಹಕಾರದೊಂದಿಗೆ ಗೋಣಿಕೊಪ್ಪಲಿನ ಜಿಎಂಪಿ ಶಾಲೆಯಲ್ಲಿ ಮೇ 13 ರಂದು ಬೆಳಗ್ಗೆ 10 ಗಂಟೆಗೆ ಭಾರತೀಯ ಯೋಧರ ಗೌರವಾರ್ಥ ಸರಣಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಸಂಕೇತ್ ಪೂವಯ್ಯ ಶಿಬಿರ ಉದ್ಘಾಟಿಸಲಿದ್ದು, ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸೋಮಯ್ಯ, ಉಪಾಧ್ಯಕ್ಷರಾದ ಕೆ.ಎಸ್.ಸುಮಿತ್ರ, ಪ್ರಧಾನ ಕಾರ್ಯದರ್ಶಿ ಕುಸುಮಾವತಿ, ಖಜಾಂಚಿ ಶಂಕರ್, ಜಂಟಿ ಕಾರ್ಯದರ್ಶಿ ಭಾರ್ಗವ ವಿಜಯ, ಕಾನೂನು ಸಲಹೆಗಾರ ಎಂ.ಟಿ.ಕಾರ್ಯಪ್ಪ, ಸಂಪನ್ಮೂಲ ಸಲಹೆಗಾರ ಸಂದೇಶ್ ಜೋಸೆಫ್ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಮುಚ್ಚಲಾಗಿದ್ದ 32 ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಪುನರಾರಂಭ



ನವದೆಹಲಿ: ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆ ಹೆಚ್ಚಾಗುತ್ತಿದ್ದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಮುಚ್ಚಲಾಗಿದ್ದ 32 ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಸೋಮವಾರ ಕಾರ್ಯಾಚರಣೆ ಪುನರಾರಂಭಗೊಂಡಿದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕೃತ ಪತ್ರಿಕಾ ಹೇಳಿಕೆ ತಿಳಿಸಿದೆ.

ನವೀಕೃತ ಮಾಹಿತಿಗಳಿಗಾಗಿ ಮತ್ತು ವಿಮಾನದ ಸ್ಥಿತಿಯನ್ನು ಪರಿಶೀಲಿಸಲು ಪ್ರಯಾಣಿಕರು ವಿಮಾನಯಾನ ಸಂಸ್ಥೆಯನ್ನು ನೇರವಾಗಿ ಸಂಪರ್ಕಿಸುವಂತೆ AAI ಸೂಚಿಸಿದೆ.

ಪಾಕಿಸ್ತಾನದೊಂದಿಗಿನ ಸಂಘರ್ಷದ ಹಿನ್ನೆಲೆಯಲ್ಲಿ ಮೇ 9ರಂದು ನಾಗರಿಕ ವಿಮಾನ ಸೇವೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಬಳಿಕ ಶ್ರೀನಗರ ಮತ್ತು ಅಮೃತಸರ ಸೇರಿದಂತೆ ಉತ್ತರ ಮತ್ತು ಪಶ್ಚಿಮ ಭಾರತದ ಹಲವಾರು ಪ್ರಮುಖ ವಿಮಾನ ನಿಲ್ದಾಣಗಳ ಮೇಲೆ ಪರಿಣಾಮ ಬೀರಿತ್ತು.

ಗಡಿಯಲ್ಲಿ ಹೆಚ್ಚಿದ ಉದ್ವಿಗ್ನತೆಯ ನಂತರ ವಿಮಾನ ನಿಲ್ದಾಣಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಲು ಮತ್ತು ಮೇ 15 ರವರೆಗೆ ವಿಮಾನಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಸೂಚಿಸಲಾಗಿತ್ತು.

ಈ ವಿಮಾನ ನಿಲ್ದಾಣಗಳನ್ನು ಮತ್ತೆ ತೆರೆಯುವುದರಿಂದ ಸಾವಿರಾರು ಪ್ರಯಾಣಿಕರು, ವಿಮಾನಯಾನ ಸಿಬ್ಬಂದಿ ಮತ್ತು ವಿಮಾನಯಾನವನ್ನೇ ಅವಲಂಬಿಸಿದ್ದ ವ್ಯವಹಾರಗಳಿಗೆ ರಿಲೀಫ್ ಸಿಕ್ಕಂತಾಗಿದೆ.

ಪ್ರಯಾಣಿಕರು ಮತ್ತು ಕಾರ್ಯಾಚರಣಾ ಸಿಬ್ಬಂದಿಯ ಸುರಕ್ಷತೆಯು ನಮ್ಮ ಪ್ರಮುಖ ಆದ್ಯತೆಯಾಗಿದೆ. ನಿಯಮಿತ ಕಾರ್ಯಾಚರಣೆಗಳಿಗೆ ಮರಳಲು ಅಗತ್ಯವಿರುವ ಎಲ್ಲ ಶಿಷ್ಟಾಚಾರಗಳನ್ನು ಅನುಸರಿಸಲಾಗುವುದು ಎಂದು ಎಎಐ ವಕ್ತಾರರು ಹೇಳಿದ್ದಾರೆ.

ಇಂಡಿಗೊ ಏರ್‌ಲೈನ್ಸ್ ಹೇಳಿಕೆಯಲ್ಲಿ, ಸರ್ಕಾರದ ನಿರ್ದೇಶನಗಳಿಗೆ ಅನುಗುಣವಾಗಿ ವಿಮಾನ ನಿಲ್ದಾಣಗಳು ಕಾರ್ಯಾಚರಣೆಗೆ ಮುಕ್ತವಾಗಿವೆ. ಈ ಹಿಂದೆ ಮುಚ್ಚಲಾಗಿದ್ದ ಮಾರ್ಗಗಳಲ್ಲಿ ನಾವು ಹಂತ ಹಂತವಾಗಿ ಕಾರ್ಯಾಚರಣೆಯನ್ನು ಪ್ರಾರಂಭಿಸುತ್ತೇವೆ. ರದ್ದಾದ ಟಿಕೆಟ್‌ಗಳ ಮರುಪಾವತಿ ಮೇ 22ರವರೆಗೆ ಅನ್ವಯಿಸುತ್ತದೆ ಎಂದು ತಿಳಿಸಿದೆ.

ವಿಮಾನ ನಿಲ್ದಾಣಗಳ ಪಟ್ಟಿ: ಅಂಬಾಲಾ (ಹರಿಯಾಣ), ಹಿಂಡನ್ (ಉತ್ತರ ಪ್ರದೇಶ), ನಲಿಯಾ (ಗುಜರಾತ್), ಸರ್ಸಾವಾ (ಉತ್ತರ ಪ್ರದೇಶ), ಉತ್ತರಲೈ (ರಾಜಸ್ಥಾನ), ಶ್ರೀನಗರ, ಆವಂತಿಪುರ ಮತ್ತು ಜಮ್ಮು (ಜಮ್ಮು ಮತ್ತು ಕಾಶ್ಮೀರ), ಅಮೃತಸರ, ಚಂಡೀಗಢ, ಲೂಧಿಯಾನ, ಪಟಿಯಾಲ, ಭಟಿಂಡಾ, ಆದಂಪುರ ಹಲ್ವಾರ ಮತ್ತು ಪಠಾಣ್‌ಕೋಟ್ (ಪಂಜಾಬ್), ಭುಂತರ್, ಶಿಮ್ಲಾ ಮತ್ತು ಕಂಗ್ರಾ–ಗಗ್ಗಲ್ (ಹಿಮಾಚಲ ಪ್ರದೇಶ), ಕಿಶನ್‌ಗಢ (ರಾಜಸ್ಥಾನ), ಥೋಯಿಸ್ ಮತ್ತು ಲೇಹ್ (ಲಡಾಖ್), ಮುಂದ್ರಾ, ಜಾಮ್‌ನಗರ, ಹಿರಾಸರ್, ಪೋರಬಂದರ್, ಕೇಶೋದ್, ಕಾಂಡ್ಲಾ ಮತ್ತು ಭುಜ್ (ಗುಜರಾತ್) ಮತ್ತು ಜೈಸಲ್ಮೇರ್, ಜೋಧ್‌ಪುರ ಮತ್ತು ಬಿಕಾನೇರ್ (ರಾಜಸ್ಥಾನ)